ಬುಧವಾರ, ಏಪ್ರಿಲ್ 16, 2025 | ₹ 7.00
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚಾಹಲ್ ಕಮಾಲ್

ಮುಲ್ಲನಪುರದಲ್ಲಿ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ 4 ಓವರುಗಳಲ್ಲಿ 28 ರನ್ನಿತ್ತು 4 ವಿಕೆಟ್ ಪಡೆದು ಪಂಜಾಬ್ ಕಿಂಗ್ಸ್ ವಿಜಯದಲ್ಲಿ ಮಿಂಚಿದ ಸ್ಪಿನ್ನರ್ ಯುಜುವೇಂದ್ರ ಚಾಹಲ್



ಮುಖ್ಯ ಜಾತಿ ಅಡಿ ಉಪ ಜಾತಿ, ಗುಂಪುಗಳ ಪ್ರವರ್ಗವಾರು ವರ್ಗೀಕರಿಸಿ ಜನಸಂಖ್ಯೆ ಪಟ್ಟಿ

ಜಾತಿ ಲೆಕ್ಕ: ಒಕ್ಕಲಿಗ, ಲಿಂಗಾಯತ ಕಿಡಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗದ ಸಮೀಕ್ಷೆಯ 'ದತ್ತಾಂಶಗಳ ಅಧ್ಯಯನ' ವರದಿಯು ಜಾತಿಯೊಂದರ ಎಲ್ಲ ಉಪ ಜಾತಿಗಳನ್ನು ಆಯಾ ಮುಖ್ಯ ಜಾತಿಯ ಅಡಿಯಲ್ಲಿ ಸೇರಿಸಿ ವರ್ಗೀಕರಣ ಮಾಡಿದೆ. ಹೀಗೆ ವರ್ಗೀಕರಿಸಿ ಜಾತಿಯ ಒಟ್ಟು ಜನಸಂಖ್ಯೆಯನ್ನು ಲೆಕ್ಕ ಹಾಕಿರುವುದರಿಂದಾಗಿ, ಒಕ್ಕಲಿಗ ಮತ್ತು ಲಿಂಗಾಯತರು ತಮ್ಮ ಸಂಖ್ಯೆಯನ್ನು ಕಡಿಮೆಗೊಳಿಸಲಾಗಿದೆ ಎಂದು ದೂರಲು ಕಾರಣವಾಗಿದೆ.

ರಾಜ್ಯದಲ್ಲಿ ಒಕ್ಕಲಿಗ, ಲಿಂಗಾಯತ ಮತ್ತು ಕುರುಬ ಪ್ರಭಾವಿ ಜಾತಿಗಳೆಂದು ಗುರುತಿಸಲ್ಪಟ್ಟಿವೆ. ವರದಿಯಲ್ಲಿ ನಮೂದಾಗಿರುವ ಈ ಜಾತಿಗಳ ಮತ್ತು ಅದರ ವ್ಯಾಪ್ತಿಯಲ್ಲಿ ಬರುವ ಉಪ ಜಾತಿಗಳು, ಗುಂಪುಗಳ ಒಟ್ಟು ಜನಸಂಖ್ಯೆ ಈಗ ಚರ್ಚೆಯ ಕೇಂದ್ರ. ಪ್ರವರ್ಗ 2 'ಎ'ನಲ್ಲಿರುವ ಕೆಲವು ಸಮುದಾಯಗಳು ಲಿಂಗಾಯತ, ವೀರಶೈವ ಲಿಂಗಾಯತ ಎಂದು ಬರೆಸಿಲ್ಲ. ಈ ಸಮುದಾಯಗಳು ಒಳಗೊಂಡರೆ ಲಿಂಗಾಯತ ಜನಸಂಖ್ಯೆ ಒಂದು ಕೋಟಿ ಮೀರಲಿದೆ ಎನ್ನುವುದು ಆ ಸಮುದಾಯದ ವಾದ. ಉಪ ಪಂಗಡಗಳನ್ನೆಲ್ಲ ಕೈಬಿಟ್ಟು ಸಮೀಕ್ಷೆ ನಡೆಸಲಾಗಿದೆ ಎನ್ನುವುದು ಒಕ್ಕಲಿಗರ ಕೋಪ.

ವರದಿಯ ಪ್ರಕಾರ, ವೀರಶೈವ ಲಿಂಗಾಯತ ಜಾತಿಯ ಜನಸಂಖ್ಯೆ 10,49,706. ಲಿಂಗಾಯತ 95 ಉಪ ಗುಂಪುಗಳಲ್ಲಿ ಬೇಡುವ ಜಂಗಮ, ಲಿಂಗಾಯತ ವೀರಶೈವ, ವೀರಶೈವ ಪಂಚಮಸಾಲಿ, ಪಂಚಮಸಾಲಿ ಲಿಂಗಾಯತ, ಆದಿ ಬಣಜಿಗ, ಜಂಗಮ ಲಿಂಗಾಯತ, ಕುಡು ಒಕ್ಕಲಿಗ, ಲಿಂಗವಂತ, ಲಿಂಗಾಯತ್, ಲಿಂಗಾಯತ ಜಂಗಮ, ವೀರಶೈವ, ನೊಳಂಬ ಲಿಂಗಾಯತ್ ಪ್ರಮುಖವಾದವು. ಸಮೀಕ್ಷೆಯಲ್ಲಿ ನಮೂದಾಗಿರುವ ಈ 95 ಉಪ ಗುಂಪುಗಳ ಜನಸಂಖ್ಯೆಯನ್ನು ಸೇರಿಸಿದರೆ ಲಿಂಗಾಯತ ಜನಸಂಖ್ಯೆ 76,84,939 ಆಗುತ್ತದೆ.

ಒಕ್ಕಲಿಗ ಜನಸಂಖ್ಯೆ 40,04,830. ಅದರ ಅಡಿಯಲ್ಲಿರುವ ಗೌಡ ಒಕ್ಕಲಿಗ, ವಕ್ಕಲ್/ವಕ್ಕಲಿಗ, ರೆಡ್ಡಿ, ಕುಂಚಿಟಿಗ, ಗೌಡ, ರಡ್ಡಿ ಹೀಗೆ ಪಟ್ಟಿ ಮಾಡಿರುವ 47 ಜಾತಿಗಳನ್ನು ಸೇರಿಸಿದರೆ ಒಟ್ಟು ಜನಸಂಖ್ಯೆ 61,58, 352 ಆಗುತ್ತದೆ. ಆಯೋಗವು 'ಅತ್ಯಂತ ಹಿಂದುಳಿದ' ಎಂದು ಮರು ವರ್ಗೀಕರಿಸಿ 'ಪ್ರವರ್ಗ 1ಬಿ'ಯಲ್ಲಿ ಕುರುಬ ಮತ್ತು ಅದರ ಉಪ ಜಾತಿಗಳನ್ನು ಪಟ್ಟಿ ಮಾಡಿದೆ. ಕುರುಬ ಜನಸಂಖ್ಯೆ 42,71,399. ಅದರ ಅಡಿಯಲ್ಲಿರುವ ಹಾಲುಮತ, ಕುರಬ್, ಕುರುಬ್ ಮುಂತಾದ 11 ಜಾತಿಗಳು ಸೇರಿದರೆ 43,72,847 ಜನಸಂಖ್ಯೆ ಆಗುತ್ತದೆ.

ಆಯೋಗದ ವಾದ:'ಆಯಾ ಜಾತಿಯ ಕುಲಕಸುಬು, ಆಚಾರ– ವಿಚಾರ, ಸಂಬಂಧಗಳು, ಸಂಸ್ಕೃತಿ ಇತ್ಯಾದಿ ಒಂದೇ ಆಗಿದ್ದು, ಎಲ್ಲ ಉಪ ಜಾತಿಗಳಿಗೂ ಇದು ಅನ್ವಯವಾಗುತ್ತದೆ. ಸಾಮಾಜಿಕ, ಶೈಕ್ಷಣಿಕ ಸೂಚ್ಯಂಕಗಳ ಆಧಾರದಲ್ಲಿ ಪಡೆದ ಅಂಕಗಳನ್ನು ಪರಿಗಣಿಸಿ ಕೆಲವು ಉಪ ಜಾತಿಗಳನ್ನು ಈಗಿರುವ ಪ್ರವರ್ಗದಿಂದ ಬೇರೆ ಪ್ರವರ್ಗಗಳಿಗೆ ವರ್ಗಾಯಿಸಿದರೆ ಆಯಾ ಜಾತಿಯ ಉಪ ಜಾತಿ ಮತ್ತು ಮುಖ್ಯಜಾತಿಗಳ ಬಾಂಧವ್ಯ ಹಾಗೂ ಅಸ್ಮಿತೆಗೆ ಧಕ್ಕೆ ಉಂಟಾಗಬಹುದು. ಈ ಕಾರಣಕ್ಕೆ ಎಲ್ಲ ಉಪ ಜಾತಿಗಳನ್ನು ಸಂಬಂಧಿಸಿದ ಮುಖ್ಯ ಜಾತಿಗಳ ಅಡಿಯಲ್ಲಿಯೇ ತರಲಾಗಿದೆ. ಮುಖ್ಯ ಜಾತಿಯು ಯಾವ ಪ್ರವರ್ಗದಲ್ಲಿ ಸೇರ್ಪಡೆ ಆಗುತ್ತದೆಯೊ ಅದರ ಜೊತೆಗೆ ಉಪ ಜಾತಿಯನ್ನೂ ಸೇರಿಸಲಾಗಿದೆ' ಎಂದು ಆಯೋಗವು ವರದಿಯಲ್ಲಿ ಪ್ರತಿಪಾದಿಸಿದೆ.

'ಕೆಲವು ಜಾತಿಗಳು ಅವುಗಳು ಪಡೆದ ಸರಾಸರಿ ಅಂಕಗಳ ಆಧಾರದಲ್ಲಿ ಹಿಂದುಳಿದ ವರ್ಗಗಳೆಂದು ಗುರುತಿಸಿಕೊಂಡರೂ, ಸ್ವಾಭಾವಿಕವಾಗಿ ಅವುಗಳನ್ನು ಅತಿ ಹಿಂದುಳಿದ ಜಾತಿಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಆಯೋಗವನ್ನು ಭೇಟಿ ಮಾಡಿ ವಿವಿಧ ಹಿಂದುಳಿದ ವರ್ಗಗಳ ಸಂಘ ಸಂಸ್ಥೆಗಳು ಸಲ್ಲಿಸಿದ್ದ ಮನವಿಗಳನ್ನು ಸಮಗ್ರವಾಗಿ ಪರಿಶೀಲಿಸಲಾಗಿದೆ. ಕೆಲವು ಜಾತಿಗಳು ಪಡೆದ ಸರಾಸರಿ ಅಂಕಗಳ ಆಧಾರದಲ್ಲಿ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿದ್ದರೂ, ಆ ಜಾತಿಗಳು ಇನ್ನೂ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿದ್ದು, ಅತಿ ಹಿಂದುಳಿದ ಜಾತಿಗಳ ಪಟ್ಟಿಯಲ್ಲಿ ಗುರುತಿಸಲ್ಪಡುವ ಅರ್ಹತೆ ಹೊಂದಿರುತ್ತದೆ. ಹಿಂದಿನ ಆಯೋಗಗಳ ವರದಿಯಲ್ಲಿ ಈ ಜಾತಿಗಳು ಅತ್ಯಂತ ಮತ್ತು ಅತಿ ಹಿಂದುಳಿದ ಪಟ್ಟಿಯಲ್ಲೇ ಗುರುತಿಸಲ್ಪಟ್ಟಿವೆ. ಈ ಕಾರಣದಿಂದಲೂ ಪ್ರಸ್ತಾಪಿಸಿರುವ ಕೆಲವು ಜಾತಿಗಳನ್ನು ಅತಿ ಹಿಂದುಳಿದ ಪಟ್ಟಿಯಲ್ಲಿಯೇ ಮುಂದುವರಿಸಲಾಗಿದೆ' ಎಂದೂ ಆಯೋಗ ಸಮರ್ಥನೆ ನೀಡಿದೆ.

'ಒಂದೇ ಹೆಸರಿನ ಜಾತಿಯ ಸ್ವರೂಪದ ಜಾತಿಯ ಹೆಸರಿನ ಉಚ್ಚಾರ, ಕಾಗುಣಿತ ಅಥವಾ ಹೋಲಿಕೆ ಕಂಡುಬಂದು ಸಂಕೇತ ಸಂಖ್ಯೆ ಒಂದೇ ಆಗಿದ್ದು, ಅಂತಹ ಸಂದರ್ಭದಲ್ಲಿ ಮೇಲ್ನೋಟಕ್ಕೆ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಜಾತಿಯ ಗುಂಪಿಗೆ ಕಡಿಮೆ ಜನಸಂಖ್ಯೆಯನ್ನು ಸೇರಿಸಿ ಆಯಾಯ ಜಾತಿಯನ್ನು ಈಗಾಗಲೇ ಇರುವ ಪ್ರವರ್ಗದಲ್ಲಿಯೇ ಮುಂದುವರಿಸಲು ತೀರ್ಮಾನಿಸಲಾಗಿದೆ' ಎಂದೂ ಆಯೋಗ ವರದಿಯಲ್ಲಿ ವಿವರಿಸಿದೆ.



ಜಾತಿ ಗಣತಿಯಲ್ಲಿ ಪರಿಶಿಷ್ಟ ಪಂಗಡದ ಸಂಖ್ಯೆ ಕಡಿಮೆ ತೋರಿಸಲಾಗಿದೆ. ದೋಷಪೂರಿತ ಈ ವರದಿಯನ್ನು ತಿರಸ್ಕರಿಸಿ, ನಮ್ಮ ಹಕ್ಕಿನ ಪಾಲಿಗೆ ಹೋರಾಡುವೆ
ಬಿ. ಶ್ರೀರಾಮುಲು, ಬಿಜೆಪಿ ಮುಖಂಡ



ವರದಿಯ ಅಧ್ಯಯನ ನಡೆಯುತ್ತಿದ್ದು, ಕ್ಯಾಬಿನೆಟ್, ಸದನದಲ್ಲಿ ಚರ್ಚಿಸಿದ ಬಳಿಕವಷ್ಟೇ ಸ್ವೀಕರಿಸುವ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ
ಪ್ರಿಯಾಂಕ್ ಖರ್ಗೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

ಜಾತಿ ಗಣತಿ ಹತ್ತು ವರ್ಷಗಳ ಹಳೆಯ ವರದಿ. ಮರು ಸಮೀಕ್ಷೆ ನಡೆಸಬೇಕು ಎಂಬ ಕೆಲವರ ಬೇಡಿಕೆಯನ್ನು ಒಪ್ಪಬಹುದು. ಹಾಗೆಂದು ಮರು ಸಮೀಕ್ಷೆ ಬೇಡಿಕೆ ಒಪ್ಪಿದ್ದೇನೆ ಎಂದಲ್ಲ
ಕೆ.ಎನ್. ರಾಜಣ್ಣ, ಸಹಕಾರ ಸಚಿವ

ಜಾತಿಗಣತಿಯನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ಏಕೆಂದರೆ, ಸಮೀಕ್ಷೆಗೆಂದು ನನ್ನ ಮನೆಗೆ ಯಾರೂ ಬಂದಿಲ್ಲ. ಇದು ಸರ್ಕಾರದ ಸಮಸ್ಯೆಯಲ್ಲ, ಸರ್ವೆ ಮಾಡಿರುವವರ ತಪ್ಪು
ಪಿ.ರವಿಕುಮಾರ್ (ಗಣಿಗ), ಶಾಸಕ

42,71,399
ಕುರುಬ ಜನಸಂಖ್ಯೆ

1,01,448
ಕುರುಬ ಜಾತಿಯ ಅಡಿಯಲ್ಲಿರುವ 11 ಜಾತಿಗಳ ಜನಸಂಖ್ಯೆ

ಒಟ್ಟು **43,72,847**

10,49,706
ವೀರಶೈವ ಲಿಂಗಾಯತ ಸಂಖ್ಯೆ

66,35,233
ಲಿಂಗಾಯತ 95 ಉಪ ಗುಂಪುಗಳ ಜನಸಂಖ್ಯೆ

ಒಟ್ಟು **76,84,939**

40,04,830
ಒಕ್ಕಲಿಗ ಸಂಖ್ಯೆ

21,53,522
ಒಕ್ಕಲಿಗ ಅಡಿಯಲ್ಲಿರುವ 47 ಜಾತಿಗಳ ಸಂಖ್ಯೆ

ಒಟ್ಟು **61,58,352**

ಲಿಂಗಾಯತ 95 ಉಪ ಗುಂಪುಗಳಲ್ಲಿ ಪ್ರಮುಖವಾದವು

ಜಾತಿ	ಜನಸಂಖ್ಯೆ
ಬೇಡುವ ಜಂಗಮ	89,868
ಲಿಂಗಾಯತ ವೀರಶೈವ	2,22,395
ವೀರಶೈವ ಪಂಚಮಸಾಲಿ	4,37,796
ಪಂಚಮಸಾಲಿ ಲಿಂಗಾಯತ	6,33,506
ಆದಿ ಬಣಜಿಗ	1,31,693
ಕುಡು ಒಕ್ಕಲಿಗ	81,999
ಲಿಂಗವಂತ	3,88,27
ಲಿಂಗಾಯತ್	26,02,777
ಲಿಂಗಾಯತ ಜಂಗಮ	44,029
ವೀರಶೈವ	1,01,019
ನೊಳಂಬ ಲಿಂಗಾಯತ್	1,48,894

ಕುರುಬ ಜಾತಿಯ ಅಡಿಯಲ್ಲಿರುವ ಪ್ರಮುಖ ಜಾತಿಗಳು

ಧನಗರ್	26,435
ಹಾಲುಮತ	21,540
ಕುರಬ್	20,171
ಕುರುಬ್	21,279

ಒಕ್ಕಲಿಗ ಜಾತಿಯ ಅಡಿಯಲ್ಲಿ ಇರುವ ಪ್ರಮುಖ ಜಾತಿಗಳು

ಗೌಡ ಒಕ್ಕಲಿಗ	1,84,479
ಕುಂಚಿಟಿಗ ವಕ್ಕಲಿಗ	41,188
ವಕ್ಕಲ್/ ವಕ್ಕಲಿಗ	1,88,508
ಗಂಗಟಕಾರ್/ ಗಂಗಡ್‌ಕಾರ್ ಒಕ್ಕಲಿಗ	82,589
ರೆಡ್ಡಿ ಒಕ್ಕಲಿಗ	24,059
ರೆಡ್ಡಿ	4,15,382
ಕುಂಚಿಟಿಗ	1,95,499
ಗೌಡ	4,60,555
ಕಮ್ಮ	1,11,739
ರಡ್ಡಿ	2,87,372
ನಾಮಧಾರಿ ಗೌಡ	21,468

'ಕುರ್ಚಿ ಉಳಿಸಿಕೊಳ್ಳಲು ಅಸ್ತ್ರ'

ಬೆಂಗಳೂರು: ತಮ್ಮ ಸರ್ಕಾರದ ಸಾಲು–ಸಾಲು ವೈಫಲ್ಯ, ಹನಿಟ್ರ್ಯಾಪ್ ಮತ್ತು ವಿವಿಧ ಹಗರಣಗಳಿಂದ ಹೈಕಮಾಂಡ್ ಕೆಂಗಣ್ಣಿಗೆ ಗುರಿಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನ ಮತ್ತು ಹೈಕಮಾಂಡ್‌ನ ಗಮನ ಬೇರೆಡೆ ಸೆಳೆಯಲು ದಿಢೀರನೇ ಜಾತಿ ಗಣತಿ ವರದಿ ಮಂಡಿಸಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದ್ದಾರೆ.

ರಾಜಕೀಯ ಹಾವು–ಏಣಿ ಆಟದಲ್ಲಿ ಕೆಳಗೆ ಬಿದ್ದಾಗಲೆಲ್ಲ, ಅಧಿಕಾರದ ಚದುರಂಗದಾಟದಲ್ಲಿ ಮುಗ್ಗರಿಸಿದಾಗಲೆಲ್ಲ ಮೇಲೇಳುವುದಕ್ಕೆ ತಳ ಸಮುದಾಯವನ್ನು ಸಿದ್ದರಾಮಯ್ಯ ದಾಳವಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ಅವರು 'ಎಕ್ಸ್' ಮೂಲಕ ಟೀಕಿಸಿದ್ದಾರೆ.

ಜಾತಿ ಗಣತಿ ಬಗೆಗಿನ ಪ್ರಶ್ನೆಗಳಿಗೆ ಮುಖ್ಯಮಂತ್ರಿಯವರೇ ಉತ್ತರಿಸಬೇಕು ಎಂದು ಅಶೋಕ ಆಗ್ರಹಿಸಿದ್ದಾರೆ.

- ಜಾತಿ ಗಣತಿ ವರದಿಗೆ ಆಯೋಗದ ಕಾರ್ಯದರ್ಶಿ ಸಹಿ ಮಾಡಿಲ್ಲ ಎನ್ನುವ ಅನುಮಾನವಿದೆ. ಇದು ನಿಜವೇ? ಒಂದು ವೇಳೆ ಸಹಿ ಮಾಡಿಲ್ಲವಾದರೆ ಏಕೆ ಮಾಡಿಲ್ಲ?
- ಸೀಲ್ಡ್ ಬಾಕ್ಸ್‌ನಲ್ಲಿದ್ದ ಮೂಲ ಪ್ರತಿ ಅಥವಾ ಹಸ್ತಪ್ರತಿ ಲಭ್ಯವಿಲ್ಲವೆಂದು ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರಾಗಿದ್ದ ಜಯಪ್ರಕಾಶ್ ಹೆಗ್ಡೆ ಹೇಳಿದ್ದರು. ಇದರ ಸತ್ಯಾಸತ್ಯತೆ ಏನು?
- ಹತ್ತು ವರ್ಷಗಳ ಹಿಂದೆ ಕೈಗೊಂಡ ಜಾತಿ ಜನಗಣತಿ ವೈಜ್ಞಾನಿಕವಾಗಿ ನಡೆದಿಲ್ಲ. ಅನೇಕ ಜನರ ಮನೆಗಳಿಗೆ ಭೇಟಿಯೇ ನೀಡಿಲ್ಲ ಎಂಬ ದೂರುಗಳಿವೆ. ಹೀಗಿರುವಾಗ ಈ ವರದಿಯನ್ನು ಈಗ ಮುನ್ನೆಲೆಗೆ ತರುವ ತರಾತುರಿ ಏಕೆ? ಹತ್ತು ವರ್ಷಗಳ ಹಿಂದೆ ನಡೆಸಿರುವ ಈ ಸಮೀಕ್ಷೆ ಈಗ ಪ್ರಸ್ತುತವೇ ಅಲ್ಲ ಎನ್ನುವುದಕ್ಕೆ ತಮ್ಮ ಉತ್ತರವೇನು?
- ಜಾತಿ ಜನಗಣತಿ ವರದಿ ಸ್ವೀಕರಿಸದಂತೆ ಒಕ್ಕಲಿಗರ ಸಂಘ ಮನವಿ ಸಲ್ಲಿಸಿದೆ. ಇದನ್ನು ಬೆಂಬಲಿಸಿ ಸ್ವತಃ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹಿ ಮಾಡಿದ್ದಾರೆ. ಅಲ್ಲದೇ ಕಾಂಗ್ರೆಸ್ ಹಿರಿಯ ನಾಯಕ, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರೂ ವಿರೋಧ ವ್ಯಕ್ತಪಡಿಸಿದ್ದಾರೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಒಂದು ಸರ್ವ ಸಮ್ಮತ ನಿಲುವಿಗೆ ಬರುವ ಬದಲು ಏಕಾಏಕಿ ವರದಿಯನ್ನು ಸಂಪುಟ ಸಭೆಯಲ್ಲಿ ಚರ್ಚೆಗೆ ಎತ್ತಿಕೊಳ್ಳುತ್ತಿರುವುದು ಯಾವ ಕಾರಣಕ್ಕೆ?
- ಶಿವಕುಮಾರ್ ಅವರೊಂದಿಗೆ ಆಗಿದೆ ಎನ್ನಲಾದ ಅಧಿಕಾರ ಹಂಚಿಕೆ ಒಪ್ಪಂದವನ್ನು ಹೇಗಾದರೂ ಮಾಡಿ ಮುಂದೂಡಲು, ಅಧಿಕಾರ ಹಂಚಿಕೆ ಒಪ್ಪಂದದಿಂದ ತಪ್ಪಿಸಿಕೊಳ್ಳಲು ಜಾತಿ ಗಣತಿ ವರದಿಯನ್ನು ಅಸ್ತ್ರವಾಗಿ ಬಳಸಿಕೊಳ್ಳಲಾಗುತ್ತಿದೆಯೇ?
- ಕೇವಲ ವೀರಶೈವ ಲಿಂಗಾಯತ ಮತ್ತು ಒಕ್ಕಲಿಗ ಜನಾಂಗಕ್ಕೆ ಸೇರಿದ ಉಪಜಾತಿಗಳನ್ನು ಮುಖ್ಯ ಜಾತಿಯಿಂದ ಬೇರ್ಪಡಿಸಲಾಗಿದೆ. ಇದೇ ಮಾನದಂಡ ಮುಸ್ಲಿಂ, ಕ್ರೈಸ್ತ ಧರ್ಮಗಳಿಗೆ ಏಕೆ ಅನುಸರಿಸಿಲ್ಲ? ಇದರ ಹಿಂದಿನ ಹುನ್ನಾರ ಏನು?

19ಕ್ಕೆ ಪಂಚಮಸಾಲಿ ಸಮಾಜದ ಸಭೆ

ಬಾಗಲಕೋಟೆ: 'ಜಿಲ್ಲೆಯ ಕೂಡಲಸಂಗಮದ ಪಂಚಮಸಾಲಿ ಪೀಠದಲ್ಲಿ ಈ ತಿಂಗಳ 19ರ ಬೆಳಿಗ್ಗೆ 11ಕ್ಕೆ ಪಂಚಮಸಾಲಿ ಟ್ರಸ್ಟ್ ವತಿಯಿಂದ ಸಮಾಜದ ಸಭೆ ನಡೆಯಲಿದೆ. ಟ್ರಸ್ಟ್ ಸದಸ್ಯರು, ಸಚಿವರು, ಶಾಸಕರು, ಪದಾಧಿಕಾರಿಗಳು, ಸದಸ್ಯರು ಪಾಲ್ಗೊಳ್ಳುವರು' ಎಂದು ಅಖಿಲ ಭಾರತ ಪಂಚಮಸಾಲಿ ಸಮಾಜದ ರೈತ ಘಟಕ ಅಧ್ಯಕ್ಷ ಅಮರೇಶ ನಾಗೂರ ಹೇಳಿದರು.

'ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಟ್ರಸ್ಟ್ ವಿರುದ್ಧ ಇಲ್ಲ, ಸಲ್ಲದ ಆರೋಪ ಮಾಡುತ್ತಿದ್ದಾರೆ. ಪೀಠದ ಮುಂದಿನ ಹಾದಿ ಬಗ್ಗೆ ಚರ್ಚಿಸಲು ಸಭೆ ಕರೆಯಲಾಗಿದೆ' ಎಂದರು.



ಕಾರಿಡಾರ್‌ನಲ್ಲೇ ಮೌಲ್ಯಮಾಪನ

ದಾವಣಗೆರೆಯ ಮೋತಿ ವೀರಪ್ಪ ಕಾಲೇಜಿನಲ್ಲಿ ಸಿಇಟಿ ಪರೀಕ್ಷೆಗೆ ಅಭ್ಯರ್ಥಿಗಳ ನೋಂದಣಿ ಸಂಖ್ಯೆಯನ್ನು ಟೇಬಲ್‌ಗಳ ಮೇಲೆ ಬರೆಯುವ ಕಾರ್ಯ ಆರಂಭವಾಗಿದ್ದರಿಂದ ಎಸ್‌ಎಸ್‌ಎಲ್‌ಸಿ ಮೌಲ್ಯಮಾಪನ ಕಾರ್ಯವನ್ನು ಕಾರಿಡಾರ್‌ನಲ್ಲಿ ನಡೆಸಬೇಕಾಯಿತು

ಅಂಬೇಡ್ಕರ್ ಹೇಳಿಕೆ ಸಾಬೀತುಪಡಿಸಿ ಮುಖ್ಯಮಂತ್ರಿಗೆ ಬಿಜೆಪಿ ಸವಾಲು

ಹುಬ್ಬಳ್ಳಿ: 'ಚುನಾವಣೆಯಲ್ಲಿ ತಮ್ಮನ್ನು ಸಾವರ್ಕರ್ ಸೋಲಿಸಿದರೆಂದು ಬಿ.ಆರ್. ಅಂಬೇಡ್ಕರ್ ಪತ್ರ ಬರೆದಿದ್ದಾರೆ ಎಂದು ಹೇಳಿರುವುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಕ್ಷಿ ಸಮೇತ ಸಾಬೀತು ಪಡಿಸಬೇಕು. ಇಲ್ಲದಿದ್ದರೆ, ರಾಜೀನಾಮೆ ನೀಡಬೇಕು ಮತ್ತು ರಾಜಕೀಯದಿಂದ ಸನ್ಯಾಸ ಪಡೆಯಬೇಕು' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸವಾಲು ಹಾಕಿದರು.

'ಸಿದ್ದರಾಮಯ್ಯ ಅವರು ಸಾಕ್ಷೀಕರಿಸಿದರೆ, ನಾನು ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ರಾಜೀನಾಮೆ ನೀಡುವೆ. ಇದೇ ವಿಷಯವನ್ನು ವಿಧಾನ ಪರಿಷತ್‌ನಲ್ಲಿ ಸಚಿವ ಪ್ರಿಯಾಂಕ ಖರ್ಗೆ ಅವರು ಹೇಳಿದಾಗ, ನಾನು ವಿರೋಧಿಸಿದ್ದೆ. ಅವರು ಹೇಳಿದ್ದ ಆ ಸುಳ್ಳನ್ನೇ ಈಗ ಮುಖ್ಯಮಂತ್ರಿ ಪುನರುಚ್ಚರಿಸಿದ್ದಾರೆ' ಎಂದು ಟೀಕಿಸಿದರು.

'ಗುಂಡಿಗೆ ಬಲಿ: ಮೃತ ಶರೀರ ದಹನವಿಲ್ಲ'

'ಪಿಯುಸಿಎಲ್' ಪಿಐಎಲ್ ವಿಚಾರಣೆ • ಹೈಕೋರ್ಟ್‌ಗೆ ಸರ್ಕಾರದ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹುಬ್ಬಳ್ಳಿಯಲ್ಲಿ ಐದು ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಲಾಗಿದೆ ಎಂಬ ಆರೋಪದಡಿ ಪೊಲೀಸ್ ಎನ್‌ಕೌಂಟರ್‌ನಲ್ಲಿ ಮೃತಪಟ್ಟಿರುವ ಪಟ್ನಾದ ರಿತೇಶ್ ಕುಮಾರ್ ಮೃತದೇಹದ ಮರಣೋತ್ತರ ಪರೀಕ್ಷೆಯನ್ನು ಸ್ಥಳೀಯ ಆಸ್ಪತ್ರೆಯ ಇಬ್ಬರು ವೈದ್ಯರ ತಂಡ ನಡೆಸಬೇಕು. ತನಿಖೆಯ ಅನುಕೂಲಕ್ಕಾಗಿ ದೇಹದ ಭಾಗಗಳ ಮಾದರಿಗಳನ್ನು ಸಂಗ್ರಹಿಸಿಡಬೇಕು' ಎಂದು ಹೈಕೋರ್ಟ್ ನಿರ್ದೇಶಿಸಿದೆ.



ಹೈಕೋರ್ಟ್

ಈ ಕುರಿತಂತೆ, 'ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್–ಕರ್ನಾಟಕ' (ಪಿಯುಸಿಎಲ್) ಸಂಘಟನೆಯ ಪ್ರಧಾನ ಕಾರ್ಯದರ್ಶಿ ಇ.ಶುಜಾಯುತ್ ಉಲ್ಲಾ ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಮಧು ಭೂಷಣ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಎಫ್‌ಐಆರ್ ದಾಖಲಿಸಲಾಗಿದ್ದು, ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ. ಮೃತದೇಹವನ್ನು ಆತನ ಕುಟುಂಬಸ್ಥರು ಗುರುತಿಸಿದ ಬಳಿಕ ಮರಣೋತ್ತರ ಪರೀಕ್ಷೆಗೆ ಒಳಪಡಿಸಲಾಗುವುದು. ಅಂತೆಯೇ, ಇಂತಹ ಪ್ರಕರಣಗಳಲ್ಲಿ ಮೃತದೇಹವನ್ನು ದಹನ ಮಾಡುವುದಿಲ್ಲ. ಮುಂದಿನ ತನಿಖೆಗೆ ಅನುಕೂಲವಾಗುವಂತೆ ಸಮಾಧಿ ಮಾಡಲಾಗುವುದು' ಎಂದು ವಿವರಿಸಿದರು.

ಇದನ್ನು ಆಲಿಸಿದ ನ್ಯಾಯಪೀಠ, 'ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಇಬ್ಬರು ವೈದ್ಯರ ತಂಡ ಮರಣೋತ್ತರ ಪರೀಕ್ಷೆ ನಡೆಸಬೇಕು. ಇಡೀ ಪ್ರಕ್ರಿಯೆಯನ್ನು ವಿಡಿಯೊ ಚಿತ್ರೀಕರಣ ಮಾಡಿ, ಮಾದರಿಗಳನ್ನು ತನಿಖೆಗೆ ಸಹಕಾರಿಯಾಗುವಂತೆ ಸಂಗ್ರಹಿಡಬೇಕು' ಎಂದು ನಿರ್ದೇಶಿಸಿತು. ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ, ವಿಚಾರಣೆಯನ್ನು ಇದೇ 24ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: 'ಪೊಲೀಸರು ಸ್ವತಃ ನ್ಯಾಯಾಧೀಶರಾಗಿ, ಆರೋಪಿಗೆ ನ್ಯಾಯ ದಂಡನೆ ನೀಡಲು ಕಾನೂನಿನಲ್ಲಿ ಅವಕಾಶವಿಲ್ಲ. ಆದ್ದರಿಂದ, ಬಾಲಕಿ ಮತ್ತು ಎನ್‌ಕೌಂಟರ್‌ಗೆ ಗುರಿಯಾಗಿರುವ ವ್ಯಕ್ತಿಯ ಮೃತದೇಹಗಳನ್ನು ಸಂರಕ್ಷಿಸಿ ಇರಿಸಬೇಕು. ಶವಪರೀಕ್ಷೆಗಾಗಿ ದೆಹಲಿ ಅಥವಾ ಕರ್ನಾಟಕ ಹೊರತುಪಡಿಸಿದ ಅನ್ಯ ರಾಜ್ಯಗಳ ಶಸ್ತ್ರಚಿಕಿತ್ಸಕರು ಮತ್ತು ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರನ್ನು ಒಳಗೊಂಡ ಸ್ವತಂತ್ರ ವಿಶೇಷ ತನಿಖಾ ತಂಡ ರಚನೆ ಮಾಡಬೇಕು. ಈ ತನಿಖಾ ತಂಡವು ಕೋರ್ಟ್ ನಿಗಾದಲ್ಲಿ ಕಾರ್ಯ ನಿರ್ವಹಿಸುವಂತೆ ಆದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ವಲಸೆ ಕಾರ್ಮಿಕರ ಮಾಹಿತಿ ಸಂಗ್ರಹಿಸಲು ಸೂಚನೆ



ಸಂತೋಷ್ ಲಾಡ್

ಬೆಂಗಳೂರು: ವಲಸೆ ಕಾರ್ಮಿಕರ ಮಾಹಿತಿಯನ್ನು ಉದ್ಯೋಗದಾತರು ಸಂಗ್ರಹಿಸಬೇಕು ಮತ್ತು ಕಾರ್ಮಿಕರ ಮೇಲೆ ವಿಶೇಷ ನಿಗಾ ಇಡಬೇಕು ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಸೂಚಿಸಿದರು.

ವಿಕಾಸಸೌಧದಲ್ಲಿ ಕಾರ್ಮಿಕರು ಹಾಗೂ ಕಾರ್ಮಿಕ ಸಂಘಟನೆಗಳು, ವಿವಿಧ ಕೈಗಾರಿಕೆಗಳ ಪ್ರತಿನಿಧಿಗಳ ಜತೆ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಅವರು ಮಾತನಾಡಿದರು.

ಹುಬ್ಬಳ್ಳಿಯಲ್ಲಿ ಐದು ವರ್ಷದ ಬಾಲಕಿಯ ಹತ್ಯೆ ಪ್ರಕರಣ ಪ್ರಸ್ತಾಪ ಮಾಡಿದ ಅವರು, 'ಬೇರೆ ರಾಜ್ಯಗಳಿಂದ ವಲಸೆ ಬಂದಿರುವ ಕಾರ್ಮಿಕರ ಮಾಹಿತಿ ಸಂಗ್ರಹಿಸುವುದು ತುಂಬಾ ಕಷ್ಟ. ಅದು ನಮಗೆ ಸವಾಲು ಆಗಿದ್ದರೂ, ಈ ನಿಟ್ಟಿನಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ' ಎಂದು ಹೇಳಿದರು.

'ವಿಶೇಷವಾಗಿ ಕಟ್ಟಡ ನಿರ್ಮಾಣ ಕಾರ್ಮಿಕರ ಮಾಹಿತಿ ಸಂಗ್ರಹಿಸಲು ಯಾವುದಾದರೂ ಮಾರ್ಗೋಪಾಯಗಳಿದ್ದರೆ ತಿಳಿಸಿ' ಎಂದು ಕೋರಿದರು.

ಸುದ್ದಿ 2 ನಿಮಿಷ

ಯೋಗೀಶ್ ಗೌಡರ ಕೊಲೆ ಪ್ರಕರಣ ಕಾಲಮಿತಿ ರದ್ದುಪಡಿಸಿದ 'ಸುಪ್ರೀಂ'

ನವದೆಹಲಿ: ಜಿಲ್ಲಾ ಪಂಚಾಯಿತಿ ಸದಸ್ಯ ಯೋಗೀಶ್ ಗೌಡರ ಕೊಲೆ ಪ್ರಕರಣದ ವಿಚಾರಣೆಗೆ ವಿಧಿಸಿದ್ದ ಕಾಲಮಿತಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ರದ್ದು ಮಾಡಿದೆ.

ಕೊಲೆ ಪ್ರಕರಣದ ವಿಚಾರಣೆಯನ್ನು ನಾಲ್ಕು ವಾರಗಳಲ್ಲಿ ಪೂರ್ಣಗೊಳಿಸಬೇಕು ಎಂದು ಹೈಕೋರ್ಟ್ ನಿರ್ದೇಶನ ನೀಡಿತ್ತು. ಆರೋಪಿಗಳಾದ ಚಂದ್ರಶೇಖರ್ ಹಾಗೂ ದಿನೇಶ್ ಎಂಬುವರು ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. 'ಈ ಪ್ರಕರಣದಲ್ಲಿ 126 ಸಾಕ್ಷಿಗಳಿದ್ದಾರೆ. ಈವರೆಗೆ 25 ಸಾಕ್ಷಿಗಳ ವಿಚಾರಣೆ ಮುಗಿದಿದೆ. ಬಾಕಿ ಸಾಕ್ಷಿಗಳ ವಿಚಾರಣೆಯನ್ನು ನಾಲ್ಕು ವಾರಗಳಲ್ಲಿ ಪೂರ್ಣಗೊಳಿಸುವುದು ಅಸಾಧ್ಯ' ಎಂದು ಅರ್ಜಿದಾರರ ಪರ ವಕೀಲರು ವಾದಿಸಿದರು. ಈ ವಾದವನ್ನು ನ್ಯಾಯಪೀಠ ಮಾನ್ಯ ಮಾಡಿದೆ.



ಪ್ರಕರಣದ ಮೊದಲ ಆರೋಪಿ ಬಸವರಾಜ ಶಿವಪ್ಪ ಮುತ್ತಗಿಯನ್ನು, ಮೂರನೇ ಬಾರಿಗೆ ಮಾಫಿ ಸಾಕ್ಷಿಯಾಗಿ ಪರಿಗಣಿಸಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತೀರ್ಮಾನಿಸಿತ್ತು. ಇದನ್ನು ಅರ್ಜಿದಾರರನ್ನು ಪ್ರಶ್ನಿಸಿದ್ದರು. ಈ ವಿಷಯದಲ್ಲಿ ಮಧ್ಯಪ್ರವೇಶ ಮಾಡುವುದಿಲ್ಲ ಎಂದು ನ್ಯಾಯಪೀಠ ಸ್ಪಷ್ಟಪಡಿಸಿತು.

ಪಿಡಿಒ ವರ್ಗ: ನಾಳೆಯಿಂದ ಪ್ರಕ್ರಿಯೆ

ಬೆಂಗಳೂರು: ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು (ಪಿಡಿಒ) ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲು ಪಂಚಾಯತ್ ರಾಜ್ ಇಲಾಖೆ ವೇಳಾಪಟ್ಟಿ ಬಿಡುಗಡೆ ಮಾಡಿದ್ದು, ಏ.17ರಿಂದಲೇ ಪ್ರಕ್ರಿಯೆಗಳು ಆರಂಭವಾಗಲಿವೆ.

ಪಿಡಿಒ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್–1, ಕಾರ್ಯದರ್ಶಿ ಗ್ರೇಡ್–2, ದ್ವಿತೀಯ ದರ್ಜೆ ಲೆಕ್ಕ ಸಹಾಯಕರನ್ನು ಇದೇ ಮೊದಲ ಬಾರಿ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲು ತಿದ್ದುಪಡಿ ಕರಡನ್ನು 2024ರ ಜೂನ್‌ನಲ್ಲೇ ಪ್ರಕಟಿಸಲಾಗಿತ್ತು. ಆಕ್ಷೇಪಣೆ, ಕೋರ್ಟ್ ಪ್ರಕರಣಗಳ ಕಾರಣದಿಂದ ಪ್ರಕ್ರಿಯೆ ವಿಳಂಬವಾಗಿತ್ತು. ಈಗ ಪ್ರಕ್ರಿಯೆ ಪುನರಾರಂಭಗೊಂಡಿದೆ.

ಹೊಸ ನಿಯಮದ ಅನ್ವಯ ಮಂಜೂರಾದ ಹುದ್ದೆಗಳಲ್ಲಿ ಶೇ 9ರಷ್ಟು ಕಡ್ಡಾಯ ಮತ್ತು ಸಾಮಾನ್ಯ ಕೋರಿಕೆ ವರ್ಗಾವಣೆ, ಶೇ 6ರಷ್ಟು ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆ ಸೇರಿ ಒಟ್ಟು ಶೇ 15ರಷ್ಟು ವರ್ಗಾವಣೆಗೆ ಅವಕಾಶ ಕಲ್ಪಿಸಲಾಗಿದೆ.

ಅರ್ಜಿ ಸಲ್ಲಿಕೆ ಪ್ರಕ್ರಿಯೆ ಏ.17ರಂದು ಆರಂಭವಾಗಲಿದ್ದು, ಅಂದೇ ಖಾಲಿ ಹುದ್ದೆಗಳ ಪಟ್ಟಿ ಬಿಡುಗಡೆ ಮಾಡಲಾಗುತ್ತದೆ. ಅರ್ಜಿ ಸಲ್ಲಿಸಲು ಏ. 24 ಕೊನೆಯ ದಿನ. ಮೇ 8ರಂದು ವಿಶೇಷ ಪ್ರಕರಣಗಳ ಕೌನ್ಸೆಲಿಂಗ್, ಸಾಮಾನ್ಯ ಕೋರಿಕೆ ವರ್ಗಾವಣೆ 9ರಂದು ಹಾಗೂ ಕಡ್ಡಾಯ ವರ್ಗಾವಣೆ ಕೌನ್ಸೆಲಿಂಗ್ ಮೇ 12 ಮತ್ತು 13ರಂದು ನಡೆಯಲಿದೆ.

ಪೊಲೀಸ್ ಗುಂಡೇಟಿಗೆ ಬಲಿ; ಸಿಐಡಿ ತನಿಖೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಬಾಲಕಿಯ ಮೇಲೆ ದೌರ್ಜನ್ಯ ಎಸಗಿ, ಕೊಲೆ ಮಾಡಿದ ಆರೋಪಿ ರಿತೇಶಕುಮಾರ್ (35) ಪೊಲೀಸ್ ಗುಂಡೇಟಿನಿಂದ ಮೃತಪಟ್ಟ ಪ್ರಕರಣದ ತನಿಖೆ ಮಂಗಳವಾರ ಸ್ಥಳೀಯ ಪೊಲೀಸರಿಂದ ಸಿಐಡಿಗೆ ಹಸ್ತಾಂತರವಾಯಿತು.

ಸರ್ಕಾರದ ಸೂಚನೆ ಮೇರೆಗೆ ಸಿಐಡಿ ಎಸ್.ಪಿ.ವೆಂಕಟೇಶ ನೇತೃತ್ವದಲ್ಲಿ ಡಿವೈಎಸ್‌ಪಿ ಪುನೀತ್‌ಕುಮಾರ್, ಇನ್‌ಸ್ಪೆಕ್ಟರ್ ಮಂಜುನಾಥ ಅವರು ಪೊಲೀಸರಿಂದ ಪ್ರಾಥಮಿಕ ಮಾಹಿತಿ ಸಂಗ್ರಹಿಸಿದರು. ಪ್ರಕರಣಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ಹಾಗೂ ದಾಖಲೆಗಳನ್ನು ಪಡೆದರು. ಕೃತ್ಯಗಳು ನಡೆದ ಘಟನಾ ಸ್ಥಳವನ್ನು ಪರಿಶೀಲಿಸಿದರು.

ಮರಣೋತ್ತರ ಪರೀಕ್ಷೆ: ರಿತೇಶ ಕುಮಾರನ ಮೃತದೇಹದ ಮರಣೋತ್ತರ ಪರೀಕ್ಷೆ ಸಿಐಡಿ ಅಧಿಕಾರಿಗಳ ಮತ್ತು ಪಂಚರ ಸಮ್ಮುಖದಲ್ಲಿ ಕೆಎಂಸಿ–ಆರ್‌ಐ ಶವಾಗಾರದಲ್ಲಿ ಮಂಗಳವಾರ ಮಧ್ಯಾಹ್ನ ನಡೆಯಿತು. ಸೋಮವಾರ ರಾತ್ರಿ ನ್ಯಾಯಾಧೀಶರ ಸಮ್ಮುಖದಲ್ಲಿ ಶವದ ಪಂಚನಾಮೆ ನಡೆದಿತ್ತು.

'ಸುಪ್ರೀಂಕೋರ್ಟ್ ಆದೇಶವನ್ನು ಪಾಲಿಸಲಾಗುತ್ತಿದೆ. ಶವವನ್ನು ಹೆಚ್ಚು ದಿನ ಇಡಲು ಆಗದು. ಕಾನೂನು ತಜ್ಞರ ಅಭಿಪ್ರಾಯ ಪಡೆದು ಮುಂದಿನ ಕ್ರಮ ಕೈಗೊಳ್ಳುತ್ತೇವೆ' ಎಂದು ಪೊಲೀಸ್ ಕಮಿಷನರ್ ಎನ್. ಶಶಿಕುಮಾರ ತಿಳಿಸಿದರು.

'ಬ್ಯಾಕ್‌ಲಾಗ್: ಪ್ರಾಂಶುಪಾಲ ವೃಂದಕ್ಕೆ ಬಡ್ತಿ ನೀಡಬಾರದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿ ಬ್ಯಾಕ್ ಲಾಗ್ ಹುದ್ದೆಗಳನ್ನು ಗುರುತಿಸಿ ಭರ್ತಿ ಮಾಡುವವರೆಗೆ ಸಾಮಾನ್ಯ ಮುಂಬಡ್ತಿ ಪ್ರಕ್ರಿಯೆಗಳನ್ನು ಕೈಗೊಳ್ಳಬಾರದು' ಎಂದು ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಸೂಚನೆ ನೀಡಿದೆ.

ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ವಿ. ರಶ್ಮಿ ಮಹೇಶ್ ಮತ್ತು ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಮಣಿವಣ್ಣನ್ ಅವರಿಗೆ ಸೂಚನೆ ನೀಡಿರುವ ಸಮಿತಿಯು, ಈ ವಿಷಯದಲ್ಲಿ ತೆಗೆದುಕೊಂಡ ಕ್ರಮದ ಮಾಹಿತಿಯನ್ನು ನೀಡಬೇಕು ಎಂದು ನಿರ್ದೇಶನ ನೀಡಿದೆ.

'ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ಉಪನ್ಯಾಸಕರ ವೃಂದದಿಂದ ಪ್ರಾಂಶುಪಾಲರ ವೃಂದಕ್ಕೆ ಮುಂಬಡ್ತಿ ನೀಡುವಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಕ್ಕೆ ಸೇರಿರುವ ಉಪನ್ಯಾಸಕರಿಗೆ ಅನ್ಯಾಯವಾಗಿದೆ ಎಂದು ಸಮಿತಿಗೆ ದೂರು ಸಲ್ಲಿಕೆಯಾಗಿದೆ. ಸಮಿತಿಯ ಸಭೆಗಳಲ್ಲಿ ಈ ವಿಷಯ ಈಗಾಗಲೇ ಚರ್ಚೆಯಾಗಿದೆ. ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಒಟ್ಟಾಗಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸುವ ಜೊತೆಗೆ, ರೋಸ್ಟರ್ ನಿರ್ವಹಣೆ ಕುರಿತು ಪರಿಶೀಲಿಸಬೇಕಿದೆ. ಅಲ್ಲಿಯವರೆಗೆ ಸಾಮಾನ್ಯ ಮುಂಬಡ್ತಿ ಪ್ರಕ್ರಿಯೆ ಕೈಗೊಳ್ಳಬಾರದು ಮತ್ತು ಈ ಕುರಿತಂತೆ ತೆಗೆದುಕೊಂಡ ಕ್ರಮದ ಮಾಹಿತಿ ನೀಡುವಂತೆ ತಿಳಿಸಲಾಗಿತ್ತು. ಆದರೆ, ಯಾವುದೇ ಮಾಹಿತಿ ಬಂದಿಲ್ಲ' ಎಂದೂ ಪತ್ರದಲ್ಲಿ ಸಮಿತಿ ವಿವರಿಸಿದೆ.

ಎಚ್‌ಡಿಕೆ ವಿರುದ್ಧ ಸರ್ಕಾರಿ ಜಮೀನು ಒತ್ತುವರಿ ಆರೋಪ

ಮೂಲ ದಾಖಲೆ ಪರಿಶೀಲನೆ; ಹೇಳಿಕೆ ದಾಖಲು

ಪ್ರಜಾವಾಣಿ ವಾರ್ತೆ

ರಾಮನಗರ: ತಾಲ್ಲೂಕಿನ ಬಿಡದಿ ಹೋಬಳಿಯ ಕೇತಗಾನಹಳ್ಳಿಯ ಸರ್ಕಾರಿ ಜಮೀನು ಒತ್ತುವರಿಗೆ ಸಂಬಂಧಿಸಿದಂತೆ ಮಂಗಳವಾರ ರಾಮನಗರ ತಹಶೀಲ್ದಾರ್ ಕಚೇರಿಯಲ್ಲಿ ಜಮೀನುಗಳ ಮೂಲ ಮಂಜೂರು ದಾಖಲೆಗಳ ಪರಿಶೀಲನೆ ನಡೆಯಿತು.

ಸರ್ವೆ ನಂ.7,8,9,10,16,17 ಹಾಗೂ 79 ಸೇರಿದಂತೆ ಒಟ್ಟು ಏಳು ಸರ್ವೆ ನಂಬರ್‌ಗಳಲ್ಲಿ 80 ಮಂದಿ ಹೊಂದಿರುವ ಜಮೀನಿನ ಹಕ್ಕಿಗೆ ಸಂಬಂಧಿಸಿದ ಮೂಲ ದಾಖಲೆಗಳನ್ನು ತಹಶೀಲ್ದಾರ್ ತೇಜಸ್ವಿನಿ ತಮ್ಮ ಕಚೇರಿಯಲ್ಲಿ ಪರಿಶೀಲಿಸಿದರು.

ಅಷ್ಟೂ ಸರ್ವೆ ನಂಬರ್ ಜಮೀನುಗಳ ಖಾತೆದಾರರು ಹೊಂದಿರುವ ಮೂಲ ದಾಖಲೆ ಪರಿಶೀಲನೆ ಬಳಿಕ ಮಾಲೀಕರು ಹಾಜರುಪಡಿಸಿದ ಎಲ್ಲಾ ದಾಖಲೆಗಳನ್ನು ಸ್ಕ್ಯಾನ್ ಮಾಡಿಕೊಂಡರು. ಜಮೀನು ಮಂಜೂರು ಕುರಿತು ಪ್ರತಿಯೊಬ್ಬ ಖಾತೆದಾರರ ಹೇಳಿಕೆ ದಾಖಲಿಸಿಕೊಂಡರು.



ರಾಮನಗರ ತಾಲ್ಲೂಕಿನ ಬಿಡದಿ ಹೋಬಳಿಯ ಕೇತಗಾನಹಳ್ಳಿಯ 7 ಸರ್ವೆ ನಂಬರ್‌ಗಳಲ್ಲಿನ ಸರ್ಕಾರಿ ಜಮೀನು ಒತ್ತುವರಿಗೆ ಸಂಬಂಧಿಸಿದಂತೆ, ಮೂಲ ದಾಖಲೆಗಳನ್ನು ಹಾಜರುಪಡಿಸಲು ತಹಶೀಲ್ದಾರ್ ಕಚೇರಿಗೆ ಮಂಗಳವಾರ ಬಂದಿದ್ದ ಖಾತೆದಾರರು

ಮಧ್ಯಾಹ್ನ ಊಟದ ಬಿಡುವೂ ಪಡೆಯದೆ ಬೆಳಗ್ಗೆಯಿಂದ ಸಂಜೆವರೆಗೆ ನಿರಂತರವಾಗಿ ದಾಖಲೆ ಪರಿಶೀಲಿಸಿ, ಹೇಳಿಕೆ ಪಡೆಯುವ ಪ್ರಕ್ರಿಯೆ ನಡೆಯಿತು. ಇಡೀ ಪ್ರಕ್ರಿಯೆಯ ವಿಡಿಯೊ ಚಿತ್ರೀಕರಣ ಮಾಡಲಾಯಿತು.

ನೋಟಿಸ್ ಪಡೆದವರ ಪೈಕಿ ಸುಮಾರು 45 ಖಾತೆದಾರರು ಇಲ್ಲವೇ ಅವರ ಪ್ರತಿನಿಧಿಗಳು ಕಚೇರಿಗೆ ಬಂದಿದ್ದರು. ಕೆಲ ನೋಟಿಸ್‌ಗಳು ಕಚೇರಿಗೆ ವಾಪಸ್ ಬಂದಿವೆ. ಕೆಲವರು ವಕೀಲರೊಂದಿಗೆ ಕಚೇರಿಗೆ ಬಂದು ದಾಖಲೆ ಸಲ್ಲಿಸಲು ಬೇರೆ ದಿನಾಂಕ ಪಡೆದು ಹೋದರು. ಈ ಪೈಕಿ, ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರ ಕಡೆಯಿಂದ ಯಾರೂ ಬಂದಿರಲಿಲ್ಲ ಎಂದು ಮೂಲಗಳು ತಿಳಿಸಿವೆ.

ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗುವುದಕ್ಕೆ ಸಂಬಂಧಿಸಿದಂತೆ ತಹಶೀಲ್ದಾರ್, ಕರ್ನಾಟಕ ಭೂ ಕಂದಾಯ ಅಧಿನಿಯಮ–1964ರ ಕಲಂ 28ರಡಿ ಏಳು ಸರ್ವೆ ನಂಬರ್‌ಗಳ ಜಮೀನುಗಳ ಖಾತೆದಾರರಿಗೆ ಏ. 5ರಂದು ನೋಟಿಸ್ ಜಾರಿಗೊಳಿಸಿದ್ದರು.

ದಾಖಲೆ ಒದಗಿಸಲು ಸೂಚಿಸಿದ್ದ ಕೋರ್ಟ್: ಕೇತಗಾನಹಳ್ಳಿಯಲ್ಲಿ ಸರ್ಕಾರಿ ಜಮೀನುಗಳ ಒತ್ತುವರಿ ತೆರವು ಕಾರ್ಯಾಚರಣೆಗಾಗಿ ತಹಶೀಲ್ದಾರ್, ಎಚ್‌.ಡಿ. ಕುಮಾರಸ್ವಾಮಿ ಅವರಿಗೆ ಮಾರ್ಚ್ 18ರಂದು ನೋಟಿಸ್ ನೀಡಿದ್ದರು. ಈ ಸಂಬಂಧ ಕುಮಾರಸ್ವಾಮಿ ಅವರು ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್, ನೋಟಿಸ್ ಅನುಸಾರ ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗಬಾರದು ಎಂದು ಆದೇಶಿಸಿತ್ತು.

ಇದೇ ತಿಂಗಳ 8ರಂದು ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್, ಸರ್ಕಾರಿ ಜಮೀನುಗಳ ಒತ್ತುವರಿ ಆರೋಪ ಸಂಬಂಧ ತಹಶೀಲ್ದಾರ್ ತಮ್ಮ ಬಳಿ ಹೊಂದಿರುವ ಭೂ ದಾಖಲೆಗಳನ್ನು ಅರ್ಜಿದಾರ ಎಚ್‌.ಡಿ ಕುಮಾರಸ್ವಾಮಿ ಅವರಿಗೆ ಒಂದು ವಾರದಲ್ಲಿ ಒದಗಿಸಬೇಕು. ದಾಖಲೆ ಪಡೆದ ಎರಡು ವಾರಗಳಲ್ಲಿ ಕುಮಾರಸ್ವಾಮಿ ಅವರು ತಹಶೀಲ್ದಾರ್ ಅವರಿಗೆ ಪ್ರತ್ಯುತ್ತರ ನೀಡಬೇಕು ಎಂದು ಆದೇಶ ನೀಡಿತ್ತು.

ಸಂಡೂರಿನಲ್ಲಿ ಮಳೆ: ಕುರಿಗಾಹಿ ಸಾವು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ತೋರಣಗಲ್ಲು ಹೋಬಳಿಯ ಯು.ರಾಜಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೀರಿನ ಹಳ್ಳ ಕ್ಯಾಂಪ್‌ನ ಕುರಿಗಾಹಿ ಲಕ್ಷ್ಮಣ (21) ಮಂಗಳವಾರ ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ವಿಜಯನಗರ ಜಿಲ್ಲೆಯ ಗುಡೇಕೋಟೆ ಹೋಬಳಿಯಲ್ಲಿ ಬಿರುಗಾಳಿ ಗುಡುಗು, ಸಿಡಿಲು ಸಹಿತ ಮಳೆಯಾಗಿದೆ. ಸಿಡಿಲು ಬಿದ್ದು ಚಂದ್ರಶೇಖರಪುರದಲ್ಲಿ ಈರಣ್ಣ ಎಂಬುವರ ರೇಷ್ಮೆ ಮನೆ ಸುಟ್ಟಿದೆ. ಪಪ್ಪಾಯ ಬೆಳೆ ನಾಶವಾಗಿದೆ.

ಹಾವೇರಿ ಜಿಲ್ಲೆಯ ಹಲವು ಕಡೆ ಜೋರು ಗಾಳಿ ಜೊತೆಗೆ ಆಲಿಕಲ್ಲು ಮಳೆಯಾಗಿದೆ. ಹಾವೇರಿ ತಾಲ್ಲೂಕಿನ ಕಳ್ಳಿಹಾಳ ಗ್ರಾಮದ ಮನೆಯೊಂದರ ತಗಡುಗಳು ಹಾರಿ ಹೋಗಿವೆ. ಸಿಡಿಲು–ಗುಡುಗಿನ ಆರ್ಭಟವೂ ಹೆಚ್ಚಾಗಿತ್ತು. ಅಲ್ಲಲ್ಲಿ ಗಿಡಮರಗಳು ಉರುಳಿಬಿದ್ದವು.

40 ಮೇಕೆ ಸಾವು (ಶಿವಮೊಗ್ಗ ವರದಿ): ತಾಲ್ಲೂಕಿನ ಬಾಳೆಕೊಪ್ಪ ಗ್ರಾಮದ ಬಳಿ ಮಂಗಳವಾರ ಸಂಜೆ ಭಾರಿ ಮಳೆ ಸುರಿದ ಸಂದರ್ಭ ಸಿಡಿಲು ಬಡಿದು 40 ಮೇಕೆ ಹಾಗೂ 2 ನಾಯಿ ಮರಿ ಮೃತಪಟ್ಟಿವೆ.

ಮೇಕೆ ಕಾಯುತ್ತಿದ್ದ ಬಾಳೆಕೊಪ್ಪ ನಿವಾಸಿ ಹುಚ್ಚಪ್ಪ (58) ಗಾಯಗೊಂಡಿದ್ದು, ಅವರನ್ನು ಚಿಕಿತ್ಸೆಗಾಗಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಜಗಳೂರು ವರದಿ (ದಾವಣಗೆರೆ ಜಿಲ್ಲೆ): ತಾಲ್ಲೂಕಿನ ಗುರುಸಿದ್ದಾಪುರ ಗ್ರಾಮದಲ್ಲಿ ಮಂಗಳವಾರ ಸಂಜೆ ಜಮೀನೊಂದರಲ್ಲಿ ಮೇಯುತ್ತಿದ್ದ 13 ಕುರಿಗಳು ಸಾವನ್ನಪ್ಪಿದ್ದು, ಕುರಿಗಾಹಿ ಸುನೀಲ್ ಗಾಯಗೊಂಡಿದ್ದಾರೆ.

ಕುರಿಗಾಹಿಯನ್ನು ಚಿಕಿತ್ಸೆಗಾಗಿ ವಿಜಯನಗರ ಜಿಲ್ಲೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಹಶೀಲ್ದಾರ್ ಸೈಯದ್ ಕಲೀಂ ಉಲ್ಲಾ ತಿಳಿಸಿದ್ದಾರೆ.



ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಚಂದ್ರಶೇಖರಪುರ ಗ್ರಾಮದ ಈರಣ್ಣ ಅವರ ಹೊಲದಲ್ಲಿನ ರೇಷ್ಮೆ ಮನೆಗೆ ಸಿಡಿಲಿನಿಂದ ಬೆಂಕಿ ಹೊತ್ತಿಕೊಂಡಿತು

ಬುಧವಾರ, ಏಪ್ರಿಲ್ 16, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಜಯತೀರ್ಥ ಮೇವುಂಡಿಗೆ ಪ್ರಶಸ್ತಿ

ಧಾರವಾಡದ ಭಾರತೀಯ ಸಂಗೀತ ವಿದ್ಯಾಲಯ, ಅಣ್ಣಾಜಿರಾವ್ ಸಿರೂರ ರಂಗಮಂದಿರ ಮತ್ತು ಗಂಗೂಬಾಯಿ ಹಾನಗಲ್ ಸಂಗೀತ ವಿದ್ಯಾಲಯ ಪ್ರತಿಷ್ಠಾನ ನೀಡುವ ಕೃಷ್ಣಾ ಹಾನಗಲ್ ರಾಷ್ಟ್ರೀಯ ಪ್ರಶಸ್ತಿಗೆ ಪಂಡಿತ ಜಯತೀರ್ಥ ಮೇವುಂಡಿ ಆಯ್ಕೆಯಾಗಿದ್ದಾರೆ. ಪುರಸ್ಕಾರವು ₹40 ಸಾವಿರ ನಗದು, ಫಲಕ ಒಳಗೊಂಡಿದ್ದು, ಏ. 18ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ



ನ್ಯಾಷನಲ್ ಹೆರಾಲ್ಡ್ ಪ್ರಕರಣ ತನಿಖೆ ನಡೆಸಿದ ಇ.ಡಿ • ಸುಬ್ರಮಣಿಯನ್ ಸ್ವಾಮಿ ಸಲ್ಲಿಸಿದ್ದ ದೂರು

ಸೋನಿಯಾ, ರಾಹುಲ್ ವಿರುದ್ಧ ಚಾರ್ಜ್‌ಶೀಟ್



ಸೋನಿಯಾ ಗಾಂಧಿ, ರಾಹುಲ್ ಗಾಂಧಿ —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಇತರರ ವಿರುದ್ಧ ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಹಣದ ಅಕ್ರಮ ವರ್ಗಾವಣೆಯ ಆರೋಪ ಹೊರಿಸಿ ಜಾರಿ ನಿರ್ದೇಶನಾಲಯವು (ಇ.ಡಿ) ಮಂಗಳವಾರ ದೋಷಾರೋಪ ಪಟ್ಟಿ ಸಲ್ಲಿಸಿದೆ.

ಏಪ್ರಿಲ್ 9ರಂದು ಸಲ್ಲಿಸಲಾಗಿರುವ ದೋಷಾರೋಪ ಪಟ್ಟಿಯನ್ನು ಪರಿಶೀಲಿಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ವಿಶಾಲ್ ಗೋಗನೆ, ವಿಚಾರಣೆಯನ್ನು ಏಪ್ರಿಲ್ 25ಕ್ಕೆ ಮುಂದೂಡಿದ್ದಾರೆ. ಕಾಂಗ್ರೆಸ್ ಮುಖಂಡರಾದ ಸ್ಯಾಮ್ ಪಿತ್ರೊಡಾ ಮತ್ತು ಸುಮನ್ ದುಬೆ ಅವರನ್ನು ಕೂಡ ಆರೋಪಿಗಳನ್ನಾಗಿ ದೋಷಾರೋಪ ಪಟ್ಟಿಯಲ್ಲಿ ಹೆಸರಿಸಲಾಗಿದೆ.

ಇ.ಡಿ ಪರ ವಿಶೇಷ ವಕೀಲರು ಹಾಗೂ ತನಿಖಾಧಿಕಾರಿಯು ಪ್ರಕರಣದ ಡೈರಿಯನ್ನು ನ್ಯಾಯಾಲಯದ ಪರಿಶೀಲನೆಗೆ ಒಪ್ಪಿಸಬೇಕು ಎಂದು ನ್ಯಾಯಾಧೀಶರು ಸೂಚಿಸಿದ್ದಾರೆ.

ಹಣದ ಅಕ್ರಮ ವರ್ಗಾವಣೆ ಕಾಯ್ದೆಯ (ಪಿಎಂಎಲ್‌ಎ) ಸೆಕ್ಷನ್ 3 (ಹಣದ ಅಕ್ರಮ ವರ್ಗಾವಣೆ) ಹಾಗೂ ಸೆಕ್ಷನ್ 4 (ಹಣದ ಅಕ್ರಮ ವರ್ಗಾವಣೆಗೆ ಶಿಕ್ಷೆ) ಅಡಿಯಲ್ಲಿ ದೋಷಾರೋಪ ಪಟ್ಟಿಯನ್ನು ಸಲ್ಲಿಸಲಾಗಿದೆ.

ಬಿಜೆಪಿ ಮುಖಂಡ ಸುಬ್ರಮಣಿಯನ್ ಸ್ವಾಮಿ ಅವರು 2014ರ ಜೂನ್ 26ರಂದು ದಾಖಲಿಸಿದ ಖಾಸಗಿ ದೂರನ್ನು ಪಟಿಯಾಲಾ ಹೌಸ್ ನ್ಯಾಯಾಲಯದ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರು ಪರಿಗಣನೆಗೆ ತೆಗೆದುಕೊಂಡ ನಂತರ, ಇ.ಡಿ ತನಿಖೆಯು 2021ರಲ್ಲಿ ಶುರುವಾಯಿತು.

ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ದುಬೆ, ಪಿತ್ರೊಡಾ, ಕಾಂಗ್ರೆಸ್ಸಿನ ಮುಖಂಡರಾಗಿದ್ದ ಮೋತಿಲಾಲ್ ವೋರಾ ಮತ್ತು ಆಸ್ಕರ್ ಫರ್ನಾಂಡೀಸ್, ಖಾಸಗಿ ಕಂಪನಿಯಾದ ಯಂಗ್ ಇಂಡಿಯಾ ಮತ್ತು ಕೆಲವು ಪ್ರಮುಖ ರಾಜಕೀಯ ವ್ಯಕ್ತಿಗಳು ಕ್ರಿಮಿನಲ್ ಪಿತೂರಿ ನಡೆಸಿದ್ದನ್ನು ದೂರಿನಲ್ಲಿ ಎತ್ತಿತೋರಿಸಲಾಗಿದೆ. ಇವರೆಲ್ಲ, ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್‌ಗೆ (ಎಜೆಎಲ್) ಸೇರಿದ ₹2,000 ಕೋಟಿ ಬೆಲೆಬಾಳುವ ಆಸ್ತಿಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವಲ್ಲಿ ಹಣದ ಅಕ್ರಮ ವರ್ಗಾವಣೆ ನಡೆಸಿರುವುದನ್ನು ದೂರಿನಲ್ಲಿ ಹೇಳಲಾಗಿದೆ ಎಂದು ಇ.ಡಿ ಉಲ್ಲೇಖಿಸಿದೆ.

'ಆರೋಪಿಗಳ ವಿರುದ್ಧದ ಕಾನೂನು ಪ್ರಕ್ರಿಯೆಗಳಿಗೆ ಸವಾಲುಗಳು ಎದುರಾಗಿದ್ದವು. ಆದರೆ ಪ್ರಕ್ರಿಯೆಗಳನ್ನು ದೆಹಲಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಎತ್ತಿಹಿಡಿದಿವೆ. ಇದರಿಂದಾಗಿ ತನಿಖೆಯು ಮುಂದುವರಿಯಿತು' ಎಂದು ಇ.ಡಿ ಹೇಳಿದೆ.

ನ್ಯಾಷನಲ್ ಹೆರಾಲ್ಡ್ ಮಾಧ್ಯಮ ಸಂಸ್ಥೆಯ (ಪತ್ರಿಕೆ ಮತ್ತು ವೆಬ್ ತಾಣ) ಪ್ರಕಾಶನ ಸಂಸ್ಥೆ ಎಜೆಎಲ್. ಇದರ ಮಾಲೀಕತ್ವವನ್ನು ಯಂಗ್ ಇಂಡಿಯನ್ ಪ್ರೈ.ಲಿ. ಹೊಂದಿದೆ. ಯಂಗ್ ಇಂಡಿಯನ್ ಕಂಪನಿಯಲ್ಲಿ ತಲಾ ಶೇಕಡ 38ರಷ್ಟು ಷೇರುಗಳನ್ನು ಸೋನಿಯಾ ಮತ್ತು ರಾಹುಲ್ ಹೊಂದಿದ್ದಾರೆ.

ಜಾರಿ ನಿರ್ದೇಶನಾಲಯವು ಈ ಪ್ರಕರಣದಲ್ಲಿ ಸೋನಿಯಾ ಮತ್ತು ರಾಹುಲ್ ಅವರನ್ನು ಕೆಲವು ವರ್ಷಗಳ ಹಿಂದೆ ಗಂಟೆಗಳ ಕಾಲ ವಿಚಾರಣೆಗೆ ಗುರಿಪಡಿಸಿತ್ತು.

ಸೋನಿಯಾ ಮತ್ತು ರಾಹುಲ್ ಅವರ ಒಡೆತನದ ಖಾಸಗಿ ಕಂಪನಿಯಾದ ಯಂಗ್ ಇಂಡಿಯನ್, ಎಜೆಎಲ್‌ಗೆ ಸೇರಿದ ₹2,000 ಕೋಟಿ ಮೌಲ್ಯದ ಆಸ್ತಿಯನ್ನು ಕೇವಲ ₹50 ಲಕ್ಷಕ್ಕೆ ತನ್ನ ದಾಗಿಸಿಕೊಂಡಿದೆ ಎಂಬುದು ತನಿಖೆಯಿಂದ ನಿರ್ಣಾಯಕವಾಗಿ ತಿಳಿದುಬಂದಿದೆ ಎಂದು ಇ.ಡಿ. ಹೇಳಿದೆ.

'₹18 ಕೋಟಿ ಮೊತ್ತದ ನಕಲಿ ದೇಣಿಗೆ, ₹38 ಕೋಟಿ ಮೊತ್ತದ ನಕಲಿ ಮುಂಗಡ ಬಾಡಿಗೆ, ₹29 ಕೋಟಿ ಮೊತ್ತದ ನಕಲಿ ಜಾಹೀರಾತು ಹಣಕ್ಕೆ ಯಂಗ್ ಇಂಡಿಯನ್ ಮತ್ತು ಎಜೆಎಲ್‌ನ ಆಸ್ತಿಗಳನ್ನು ಮೂಲವೆಂದು ತೋರಿಸಲಾಗಿದೆ' ಎಂದು ಇ.ಡಿ ಆರೋಪಿಸಿದೆ.

ದ್ವೇಷದ ರಾಜಕಾರಣ: ಕಾಂಗ್ರೆಸ್ ಕಿಡಿ

ನವದೆಹಲಿ (ಪಿಟಿಐ): ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರ ವಿರುದ್ಧ ಇ.ಡಿ ದೋಷಾರೋಪ ಪಟ್ಟಿ ಸಲ್ಲಿಸಿರುವುದನ್ನು ಕಾಂಗ್ರೆಸ್ ಪಕ್ಷವು 'ದ್ವೇಷದ ರಾಜಕಾರಣ' ಎಂದು ಕರೆದಿದೆ.

ನ್ಯಾಷನಲ್ ಹೆರಾಲ್ಡ್‌ಗೆ ಸೇರಿದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿರುವುದು 'ಕಾನೂನು ಕ್ರಮದ ಹೆಸರಿನಲ್ಲಿ ನಡೆದಿರುವ ಸರ್ಕಾರಿ ಪ್ರಾಯೋಜಿತ ಅಪರಾಧ' ಎಂದು ಬಣ್ಣಿಸಿದೆ. 'ಸೋನಿಯಾ, ರಾಹುಲ್ ಮತ್ತು ಇತರ ಕೆಲವರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿರುವುದು ದ್ವೇಷದ ರಾಜಕಾರಣ, ಪ್ರಧಾನಿ ಮತ್ತು ಕೇಂದ್ರ ಗೃಹ ಸಚಿವರ ಬೆದರಿಕೆ ತಂತ್ರವು ನಿಯಂತ್ರಣ ಕಳೆದುಕೊಂಡಿರುವುದನ್ನು ತೋರಿಸುತ್ತಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಬರೆದಿದ್ದಾರೆ.

ಹೆರಾಲ್ಡ್‌ಗೆ ಸೇರಿದ ಆಸ್ತಿಗಳನ್ನು ಜಪ್ತಿ ಮಾಡಿರುವುದನ್ನು ಕಾಂಗ್ರೆಸ್ ಖಂಡಿಸಿದೆ. ಇದನ್ನು ವಿರೋಧಿಸಿ ರಾಷ್ಟ್ರವ್ಯಾಪಿ ಪ್ರತಿಭಟನೆ ನಡೆಸಲು ತೀರ್ಮಾನಿಸಿದೆ.

ಕೋರ್ಟ್ ಸೂಚನೆ ಆಧರಿಸಿ ಕ್ರಮ: ಬಿಜೆಪಿ

ನವದೆಹಲಿ (ಪಿಟಿಐ): ಭ್ರಷ್ಟಾಚಾರದಲ್ಲಿ ತೊಡಗಿದ್ದವರು, ಸಾರ್ವಜನಿಕರ ಆಸ್ತಿಯ ಲೂಟಿಯಲ್ಲಿ ಭಾಗಿಯಾಗಿದ್ದವರು ಈಗ ಅದನ್ನು ಮರಳಿಸಬೇಕಾಗಿದೆ ಎಂದು ಬಿಜೆಪಿಯು ಹೇಳಿದೆ.

ಸಾರ್ವಜನಿಕರ ಹಣದ ಲೂಟಿಯಲ್ಲಿ ತೊಡಗಿದ ನಂತರದಲ್ಲಿ ಕಾಂಗ್ರೆಸ್ಸಿನ ನಾಯಕರು ತಾವೇ ಸಂತ್ರಸ್ತರು ಎಂಬಂತೆ ಬಿಂಬಿಸಿಕೊಳ್ಳುತ್ತಾರೆ ಎಂದು ಕೂಡ ಬಿಜೆಪಿ ಲೇವಡಿ ಮಾಡಿದೆ.

ಇ.ಡಿ ಕ್ರಮವು ದ್ವೇಷದ ರಾಜಕಾರಣ ಎಂದು ಕಾಂಗ್ರೆಸ್ ಹೇಳಿರುವುದನ್ನು ಖಂಡಿಸಿರುವ ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ , ಈ ಪ್ರಕರಣದಲ್ಲಿ ನ್ಯಾಯಾಲಯದ ಆದೇಶಕ್ಕೆ ಅನುಸಾರವಾಗಿ ಕ್ರಮ ಆರಂಭವಾಯಿತು ಎಂದು ನೆನಪಿಸಿದ್ದಾರೆ.

'ಅಂದರೆ ಅವರ ಮಾತಿನ ಅರ್ಥ ಕೋರ್ಟ್ ಕೂಡ ದ್ವೇಷದ ಆಧಾರದಲ್ಲಿ ಕ್ರಮ ಕೈಗೊಂಡಿದೆ ಎಂದೇ' ಎಂದು ಪೂನಾವಾಲಾ ಪ್ರಶ್ನಿಸಿದ್ದಾರೆ.

ವಾದ್ರಾ ಹೇಳಿಕೆ ದಾಖಲಿಸಿಕೊಂಡ ಇ.ಡಿ

ನವದೆಹಲಿ (ಪಿಟಿಐ): ಹರಿಯಾಣದಲ್ಲಿನ ಭೂ ವ್ಯವಹಾರದ ನಂಟಿನ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ಉದ್ಯಮಿ ರಾಬರ್ಟ್ ವಾದ್ರಾ ಅವರ ಹೇಳಿಕೆಯನ್ನು ಮಂಗಳವಾರ ದಾಖಲಿಸಿಕೊಂಡಿದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಎರಡು ಗಂಟೆಗೂ ಹೆಚ್ಚಿನ ಅವಧಿ ವಿಚಾರಣೆಯನ್ನು ನಡೆಸಿತು ಎಂದು ಮೂಲಗಳು ತಿಳಿಸಿವೆ.

'ವಿಚಾರಣೆಗಾಗಿ ತಮ್ಮನ್ನು ಕರೆಸಿಕೊಳ್ಳುವ ತನಿಖಾ ಸಂಸ್ಥೆಯ ಕ್ರಮ 'ರಾಜಕೀಯ ಪ್ರತೀಕಾರ' ಎಂದು ಸಂಸದೆ ಪ್ರಿಯಾಂಕಾ ಗಾಂಧಿ ಅವರ ಪತಿಯೂ ಆಗಿರುವ ವಾದ್ರಾ ದೂರಿದ್ದಾರೆ.

'ಈ ಹಿಂದೆಯೇ ತಾಸುಗಟ್ಟಲೆ ಇ.ಡಿ. ವಿಚಾರಣೆ ಎದುರಿಸಿದ್ದೇನೆ. ಸಾವಿರಾರು ಪುಟಗಳ ದಾಖಲೆ ಒದಗಿಸಿದ್ದೇನೆ. ಆದರೂ ತನಿಖಾ ಸಂಸ್ಥೆಯು ನನ್ನ ವಿರುದ್ಧ ಪ್ರಕರಣಗಳನ್ನು ದಾಖಲಿಸುತ್ತಿದೆ' ಎಂದು ವಿಚಾರಣೆಗೆ ಹಾಜರಾಗುವ ಮುನ್ನ ಸುದ್ದಿಗಾರರಿಗೆ ತಿಳಿಸಿದರು.

'ಇದು ತನಿಖಾ ಸಂಸ್ಥೆಗಳ ದುರುಪಯೋಗ ಮತ್ತು ರಾಜಕೀಯ ಪ್ರತೀಕಾರದ ಕ್ರಮ. ಹೀಗಿದ್ದೂ, ಈ ಹಿಂದಿನಂತೆಯೇ ತನಿಖೆಗೆ ಸಹಕರಿಸುವೆ' ಎಂದು ಅವರು ಹೇಳಿದರು.

ಸುದ್ದಿ 2 ನಿಮಿಷ

ಹಳಿ ತಪ್ಪಿದ ಗೂಡ್ಸ್ ರೈಲು

ಬೆಳಗಾವಿ: ಬೆಳಗಾವಿ ರೈಲು ನಿಲ್ದಾಣದ ಬಳಿ ಮಂಗಳವಾರ ಬೆಳಿಗ್ಗೆ ಸರಕು ಸಾಗಣೆ ರೈಲಿನ ಎರಡು ಬೋಗಿಗಳು ಹಳಿ ತಪ್ಪಿದವು. ಇದರ ಪರಿಣಾಮ 12 ಪ್ಯಾಸೆಂಜರ್ ರೈಲುಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು. ಬಹುತೇಕ ರೈಲುಗಳು ತಡವಾಗಿ ಸಂಚರಿಸಿದವು.



ಜಿಂದಾಲ್‌ನಿಂದ ಕಬ್ಬಿಣದ ಅದಿರು ತುಂಬಿಕೊಂಡು ಮಹಾರಾಷ್ಟ್ರದ ಮೀರಜ್ ಕಡೆಗೆ ಹೊರಟಿದ್ದ ರೈಲಿನ ಎರಡು ಬೋಗಿಗಳ ಕೊಂಡಿ ತುಂಡಾಗಿ, ಹಳಿಯಿಂದ ಕೆಳಗಿಳಿದವು. ನಂತರ ರೈಲ್ವೆ ಅಧಿಕಾರಿಗಳು ತುರ್ತಾಗಿ ಬೋಗಿಗಳನ್ನು ತೆರವು ಮಾಡಿ, ದುರಸ್ತಿ ಕಾರ್ಯ ಆರಂಭಿಸಿದರು. ಮಧ್ಯಾಹ್ನ ಮತ್ತೆ ಹಳಿಗಳ ಮೇಲೆ ರೈಲು ಸಂಚಾರ ಆರಂಭವಾಯಿತು.

ಪ್ರವೀಣ್ ನೆಟ್ಟಾರು ಹತ್ಯೆ: ಮತ್ತೆ ನಾಲ್ವರ ವಿರುದ್ಧ ಚಾರ್ಜ್‌ಶೀಟ್

ನವದೆಹಲಿ (ಪಿಟಿಐ): ಬಿಜೆಪಿ ಯುವಮೋರ್ಚಾ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಮತ್ತೆ ನಾಲ್ವರ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದೆ.

ಆರೋಪಿಗಳಾದ ಅಬ್ದುಲ್ ನಾಸೀರ್, ನೌಶದ್, ಅಬ್ದುಲ್ ರಹಮಾನ್ ಹಾಗೂ ಅತೀಕ್ ಅಹ್ಮದ್ ವಿರುದ್ಧ ಎರಡನೇ ಪೂರಕ ಆರೋಪ ಪಟ್ಟಿ ದಾಖಲಿಸಿದೆ.

ಎನ್‌ಐಎ ತನಿಖೆ ಪ್ರಕಾರ, ನಾಸೀರ್, ನೌಶದ್ ಹಾಗೂ ರಹಮಾನ್ ಅವರು ಹತ್ಯೆ ನಡೆಸಿದ ಆರೋಪಿಗಳಿಗೆ ಮೈಸೂರು, ಚಾಮರಾಜನಗರ ಹಾಗೂ ಈರೋಡ್‌ನಲ್ಲಿ ಆಶ್ರಯ ಕಲ್ಪಿಸಿದ್ದರು ಎಂದು ತಿಳಿಸಿದೆ. ಈ ಮೂಲಕ ಈ ಪ್ರಕರಣದಲ್ಲಿ 27 ಮಂದಿ ವಿರುದ್ಧ ಆರೋಪಪಟ್ಟಿ ದಾಖಲಿಸಿದಂತಾಗಿದೆ. ಇದರಲ್ಲಿ ಆರು ಮಂದಿ ತಲೆಮರೆಸಿಕೊಂಡಿದ್ದಾರೆ.

2022ರ ಜುಲೈ 26ರಂದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ಳಾರೆಯಲ್ಲಿ ಎರಡು ಮೋಟರ್ ಸೈಕಲ್‌ನಲ್ಲಿ ಬಂದಿದ್ದ ಪಿಎಫ್‌ಐ ಕಾರ್ಯಕರ್ತರು ಪ್ರವೀಣ್ ನೆಟ್ಟಾರು ಅವರನ್ನು ಹತ್ಯೆ ಮಾಡಿದ್ದರು.

ಶಾಲಾ ಪ್ರವೇಶ ವಯೋಮಿತಿ ಇಂದು ನಿರ್ಧಾರ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದನೇ ತರಗತಿಗೆ ಪ್ರವೇಶ ಪಡೆಯುವ ಮಕ್ಕಳ ವಯೋಮಿತಿ ಸಡಿಲಗೊಳಿಸುವ ಕುರಿತ ಶಿಫಾರಸು ಒಳಗೊಂಡ ತಾತ್ಕಾಲಿಕ ವರದಿಯನ್ನು ರಾಜ್ಯ ಶಿಕ್ಷಣ ನೀತಿ ಆಯೋಗ ಸಲ್ಲಿಸಿದ್ದು, ಈ ಕುರಿತು ಶಾಲಾ ಶಿಕ್ಷಣ ಇಲಾಖೆ ಬುಧವಾರ (ಏ. 16) ನಿರ್ಧಾರ ಪ್ರಕಟಿಸಲಿದೆ.

ಶಾಲಾ ಶಿಕ್ಷಣ ಇಲಾಖೆ 2022ರ ನವೆಂಬರ್‌ನಲ್ಲಿ ಹೊರಡಿಸಿದ ಆದೇಶದ ಪ್ರಕಾರ, ಜೂನ್ 1, 2025ರ ಒಳಗೆ ಆರು ವರ್ಷಗಳನ್ನು ಪೂರ್ಣಗೊಳಿಸಿದ ಮಕ್ಕಳು 2025-26 ಶೈಕ್ಷಣಿಕ ವರ್ಷಕ್ಕೆ ಒಂದನೇ ತರಗತಿಗೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ. ಇದರಿಂದ ಸಾವಿರಾರು ಮಕ್ಕಳ ಪ್ರವೇಶಕ್ಕೆ ಅಡ್ಡಿಯಾಗಿದೆ. ಮೊದಲು ಇದ್ದಂತೆ ಪೋಷಕರ ಇಚ್ಛೆಗೆ ಅನುಗುಣವಾಗಿ ಶಾಲೆಗೆ ಸೇರಿಸಲು ವಯೋಮಿತಿ ಸಡಿಲಿಕೆಯ ಅವಕಾಶ ನೀಡಬೇಕು ಎಂದು ಹಲವು ಪೋಷಕರು ಮನವಿ ಮಾಡಿದ್ದರು.

ರಾಜ್ಯ ಶಿಕ್ಷಣ ನೀತಿ ಆಯೋಗ ವರದಿ ನೀಡಿದ ನಂತರ ಮುಖ್ಯಮಂತ್ರಿ ಜತೆ ಚರ್ಚಿಸಿ, ಖಚಿತ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದರು. ಪೋಷಕರ ವಿನಂತಿಯನ್ನು ಆಯೋಗದ ಗಮನಕ್ಕೆ ತಂದಿದ್ದರು.

'ಶೈಕ್ಷಣಿಕ ವರ್ಷ ಆರಂಭವಾಗುತ್ತಿರುವ ಕಾರಣ ಪೋಷಕರಲ್ಲಿನ ಗೊಂದಲ ನಿವಾರಿಸಲು ಆಯೋಗ ಕೆಲ ಶಿಫಾರಸುಗಳನ್ನು ಮಾಡಿದೆ. 2025–26ನೇ ಸಾಲಿನ ಪ್ರವೇಶವನ್ನು ಹಿಂದಿನ ವರ್ಷ ಇದ್ದಂತೆ ಮುಂದುವರಿಸಬೇಕು. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಎಲ್‌ಕೆಜಿ ಪ್ರವೇಶಕ್ಕೆ 4 ವರ್ಷ ಕಡ್ಡಾಯಗೊಳಿಸಬೇಕು ಎಂದು ಸೂಚಿಸಲಾಗಿದೆ' ಎಂದು ಆಯೋಗದ ಮೂಲಗಳು ಹೇಳಿವೆ. ಈ ಕುರಿತು ಶಾಲಾ ಶಿಕ್ಷಣ ಇಲಾಖೆ ಬುಧವಾರ ಅಧಿಕೃತ ನಿರ್ಧಾರ ಪ್ರಕಟಿಸಲಿದೆ.

ಕಾಂಗ್ರೆಸ್ ಮಾಜಿ ಸಚಿವರ ಮನೆಯಲ್ಲಿ ಇ.ಡಿ.ಶೋಧ

ಜೈಪುರ/ಮೊಹಾಲಿ (ಪಿಟಿಐ): ಪಿಎಸಿಎಲ್ ನಕಲಿ ಕಂಪನಿಯ ₹48,000 ಕೋಟಿ ವಂಚನೆಗೆ ಸಂಬಂಧಿಸಿ ರಾಜಸ್ಥಾನ ಕಾಂಗ್ರೆಸ್‌ನ ಮಾಜಿ ನಾಯಕ ಪ್ರತಾಪ್ ಸಿಂಗ್ ಖಾಚರಿಯಾವಾಸ್ ಮತ್ತು ಪಂಜಾಬ್ ಎಎಪಿ ಶಾಸಕ ಕುಲ್ವಂತ್ ಸಿಂಗ್‌ಗೆ ಸೇರಿದ ಮನೆ, ಕಚೇರಿಗಳಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ.)ಮಂಗಳವಾರ ಶೋಧ ನಡೆಸಿದೆ. ಹಣ ಅಕ್ರಮ ವರ್ಗಾವಣೆ ಪ್ರಕರಣ ದಾಖಲಿಸಿ ಇ.ಡಿ. ತನಿಖೆ ಮಾಡುತ್ತಿದೆ.

ಮಾಜಿ ಉಪರಾಷ್ಟ್ರಪತಿ ಭೈರೋನ್ ಸಿಂಗ್ ಶೆಖಾವತ್ ಅವರ ಸೋದರ ಸಂಬಂಧಿ ಖಾಚರಿಯಾವಾಸ್, ರಾಜಸ್ಥಾನದ ಅಶೋಕ್ ಗೆಹಲೋತ್ ಸಂಪುಟದಲ್ಲಿ ವಿವಿಧ ಇಲಾಖೆಗಳನ್ನು ನಿರ್ವಹಿಸಿದ್ದರು. ಅವರ ಮಾಲೀಕತ್ವದ ಜೈಪುರದಲ್ಲಿರುವ ಮನೆ ಸೇರಿದಂತೆ 15 ಸ್ಥಳಗಳಲ್ಲಿ ಶೋಧ ನಡೆದಿದೆ.

ಎಎಪಿ ಶಾಸಕ ಕುಲ್ವಂತ್ ಸಿಂಗ್ ಅವರು ಜನತಾ ಲ್ಯಾಂಡ್ ಪ್ರಮೋಟರ್ಸ್ ಲಿಮಿಟೆಡ್ (ಜೆಎಲ್‌ಪಿಎಲ್) ಸಂಸ್ಥಾಪಕರಾಗಿದ್ದು, ₹1000 ಕೋಟಿ ಸಂಪತ್ತಿನೊಂದಿಗೆ ಪಂಜಾಬ್‌ನ ಅತಿ ಶ್ರೀಮಂತ ಶಾಸಕ ಎನಿಸಿದ್ದಾರೆ. ಅವರ ಮೊಹಾಲಿ ನಿವಾಸ ಸೇರಿ ಹಲವೆಡೆ ಇ.ಡಿ. ಅಧಿಕಾರಿಗಳು ಶೋಧ ನಡೆಸಿದರು.

ಇ.ಡಿ. ಶೋಧವು ರಾಜಕೀಯ ಪ್ರೇರಿತವಾಗಿದೆ ಎಂದು ರಾಜಸ್ಥಾನ ಕಾಂಗ್ರೆಸ್ ಆರೋಪ ಮಾಡಿದೆ.

ಮುಂಗಾರಿನಲ್ಲಿ ವಾಡಿಕೆಗಿಂತ ಹೆಚ್ಚು ಮಳೆ

ಈ ಬಾರಿ ಇಲ್ಲ ಎಲ್‌ನಿನೊ ಪರಿಣಾಮ: ಭಾರತೀಯ ಹವಾಮಾನ ಇಲಾಖೆ



ನವದೆಹಲಿ(ಪಿಟಿಐ): ದೇಶದಲ್ಲಿ ಈ ಬಾರಿ ಮುಂಗಾರಿನಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಲಿದೆ. ಮಳೆಗಾಲದ ಋತುಮಾನವಿಡೀ ಎಲ್‌ನಿನೊ ಪರಿಣಾಮದ ಸಾಧ್ಯತೆಗಳು ಕಡಿಮೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮಂಗಳವಾರ ತಿಳಿಸಿದೆ.

ಉತ್ತರ ಕರ್ನಾಟಕ, ಮರಾಠವಾಡ, ರಾಯಲಸೀಮಾ, ಉತ್ತರ ಆಂಧ್ರಪ್ರದೇಶ ಮತ್ತು ಛತ್ತೀಸಗಢದ ಬಸ್ತಾರ್ ಪ್ರದೇಶದಲ್ಲಿ ಮುಂಗಾರು ಹಂಗಾಮಿನಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಆದರೆ, ತಮಿಳುನಾಡು, ಲಡಾಖ್ ಮತ್ತು ಈಶಾನ್ಯ ಭಾರತದಲ್ಲಿ ಮುಂಗಾರು ಮಳೆ ಕಡಿಮೆ ಪ್ರಮಾಣದಲ್ಲಿ ಆಗುವ ಸಾಧ್ಯತೆಯಿದೆ ಎಂದು ಐಎಂಡಿ ಮುಖ್ಯಸ್ಥ ಮೃತ್ಯುಂಜಯ ಮೊಹಾಪಾತ್ರ ಅವರು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ನಾಲ್ಕು ತಿಂಗಳ ಮುಂಗಾರು ಹಂಗಾಮಿನಲ್ಲಿ (ಜೂನ್‌ನಿಂದ ಸೆಪ್ಟೆಂಬರ್) ದೇಶದ ಹಲವೆಡೆ ವಾಡಿಕೆಗಿಂತ ಹೆಚ್ಚು ಮಳೆ ಬೀಳಲಿದೆ. ಈ ಬಾರಿ ಶೇ 105ರಷ್ಟು ಮಳೆಯಾಗುವ ನಿರೀಕ್ಷೆ ಇದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ದೇಶದ ಹಲವು ಭಾಗಗಳಲ್ಲಿ ಈಗಾಗಲೇ ತೀವ್ರ ಬಿಸಿ ಗಾಳಿ ಕಾಣಿಸಿಕೊಂಡಿದೆ. ಏಪ್ರಿಲ್‌ನಿಂದ ಜೂನ್ ಅವಧಿಯಲ್ಲಿ ಬಿಸಿ ಗಾಳಿ ಇನ್ನಷ್ಟು ಹೆಚ್ಚುವ ಸಾಧ್ಯತೆಗಳಿವೆ. ಇದು ವಿದ್ಯುತ್ ಉತ್ಪಾದನೆಗೆ ನೀರಿನ ಕೊರತೆಯನ್ನು ಉಂಟಾಗಿಸಬಹುದು ಎಂದು ಅವರು ತಿಳಿಸಿದ್ದಾರೆ.

ಭಾರತದಲ್ಲಿ ಕೃಷಿ ಚಟುವಟಿಕೆಗೆ ಮುಂಗಾರು ಮಳೆ ತುಂಬಾ ಮುಖ್ಯ. ಶೇ 42.3ರಷ್ಟು ಜನರಿಗೆ ಇಂದಿಗೂ ಕೃಷಿಯೇ ಜೀವನಾಧಾರ. ಕೃಷಿ ಕ್ಷೇತ್ರವು ದೇಶದ ಜಿಡಿಪಿಗೆ ಶೇ 18.2ರಷ್ಟು ಕೊಡುಗೆ ನೀಡುತ್ತಿದೆ. ಒಟ್ಟು ಕೃಷಿ ಪ್ರದೇಶದ ಶೇ 52ರಷ್ಟು ಭಾಗವು ಮಳೆಯನ್ನೇ ಅವಲಂಬಿಸಿದೆ. ಅಲ್ಲದೆ, ದೇಶದಾದ್ಯಂತ ವಿದ್ಯುತ್ ಉತ್ಪಾದನೆಯ ಜೊತೆಗೆ, ಕುಡಿಯುವ ನೀರಿಗೂ ಅಗತ್ಯವಾಗಿರುವ ಜಲಾಶಯಗಳ ಭರ್ತಿಗೂ ಮುಂಗಾರು ಮಳೆ ನಿರ್ಣಾಯಕವಾಗಿದೆ. ಹಾಗಾಗಿ, ಮಳೆಗಾಲದಲ್ಲಿ ವಾಡಿಕೆ ಮಳೆಯಾಗುವ ಮುನ್ಸೂಚನೆಯು ರಾಷ್ಟ್ರಕ್ಕೆ ದೊಡ್ಡ ಪರಿಹಾರವನ್ನು ನೀಡುತ್ತದೆ.

ಕಡಿಮೆಯಾಗುತ್ತಿವೆ ಮಳೆ ಬರುವ ದಿನಗಳು: ಆದಾಗ್ಯೂ ಹವಾಮಾನ ತಜ್ಞರು, 'ಹವಾಮಾನ ಬದಲಾವಣೆಯಿಂದಾಗಿ ಮಳೆ ಸುರಿಯುವ ವಿಧಾನ ಮತ್ತು ವಾಡಿಕೆಯಲ್ಲಿ ಭಾರಿ ವ್ಯತ್ಯಾಸಗಳಾಗುತ್ತಿವೆ. ಮಳೆ ಸುರಿಯುವ ದಿನಗಳು ಕಡಿಮೆಯಾಗುತ್ತಿವೆ. ಒಂದೇ ಬಾರಿಗೆ, ಕಡಿಮೆ ಅವಧಿಯಲ್ಲಿ ಭಾರಿ ಮಳೆ ಸುರಿಯುವುದು ಹೆಚ್ಚುತ್ತಿದೆ. ಇದು ಆಗಾಗ್ಗೆ ಪ್ರವಾಹ ಮತ್ತು ಬರಗಾಲಕ್ಕೆ ಕಾರಣವಾಗುತ್ತಿದೆ' ಎಂದು ಹೇಳಿದ್ದಾರೆ.



ಹೊಸ ವರ್ಷ ಸಂಭ್ರಮ...

ಬಂಗಾಳಿ ಜನರ ಹೊಸ ವರ್ಷವನ್ನು ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯಲ್ಲಿ ಮಹಿಳೆಯರು ಅಲಂಕೃತ ಬಿದಿರಿನ ಮೊರ ಹಿಡಿದು ಸ್ವಾಗತಿಸಿದರು– ಪಿಟಿಐ ಚಿತ್ರ

ಕೋಮುದ್ವೇಷ ಉಗುಳುವ ಪ್ರಧಾನಿ ಮೋದಿ: ಮುಖ್ಯಮಂತ್ರಿ ಸಿದ್ದರಾಮಯ್ಯ

'ಧರ್ಮಾಧಾರಿತ ಮೀಸಲಾತಿ ನೀಡಿಲ್ಲ'

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: 'ಕರ್ನಾಟಕದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ಆಧರಿಸಿ ಮುಸ್ಲಿಮರಿಗೆ ಮೀಸಲಾತಿ ನೀಡಲಾಗಿದೆಯೇ ಹೊರತು ಧರ್ಮದ ಆಧಾರದಲ್ಲಿ ನೀಡಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿಪಾದಿಸಿದ್ದಾರೆ.

'ಪರಿಶಿಷ್ಟರು ಮತ್ತು ಹಿಂದುಳಿದವರ ಮೀಸಲಾತಿ ಕಿತ್ತುಕೊಂಡು ಮುಸ್ಲಿಮರಿಗೆ ಮೀಸಲಾತಿ ನೀಡಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸುಳ್ಳು ಹೇಳಿದ್ದಾರೆ. ಇಂತಹ ತಲೆಬುಡ ಇಲ್ಲದ ಆರೋಪಗಳನ್ನು ಮಾಡುವಾಗ, ಪ್ರಧಾನಿಯವರು ಕನಿಷ್ಠ ವಾಸ್ತವಾಂಶ ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು' ಎಂದು ಹೇಳಿದ್ದಾರೆ.

'ತ್ರಿವಳಿ ತಲಾಖ್ ನಿಷೇಧ ಮಾಡಿದ್ದೇವೆ, ವಕ್ಫ್ ಕಾಯ್ದೆಗೆ ತಿದ್ದುಪಡಿ ಮಾಡಿದ್ದೇವೆ ಎಂದು ಒಂದು ಕಡೆ ತಮ್ಮನ್ನು ಮುಸ್ಲಿಂ ಸಮುದಾಯದ ಸುಧಾರಕರಂತೆ ಬಿಂಬಿಸಿಕೊಳ್ಳುತ್ತಿರುವ ನರೇಂದ್ರ ಮೋದಿ, ಇನ್ನೊಂದೆಡೆ ಬಜರಂಗ ದಳದ ಕಾರ್ಯಕರ್ತನಂತೆ ಕೋಮುದ್ವೇಷ ಉಗುಳುತ್ತಿದ್ದಾರೆ. ಇದು ಅವರು ಕೂತಿರುವ ಕುರ್ಚಿಗೆ ಮಾಡುತ್ತಿರುವ ಅಪಮಾನ' ಎಂದು ಹೇಳಿದ್ದಾರೆ.

'ಧರ್ಮದ ಆಧಾರದಲ್ಲಿ ಮೀಸಲಾತಿ ನೀಡಬಾರದು ಎಂದು ಡಾ.ಬಿ.ಆರ್. ಅಂಬೇಡ್ಕರ್ ಹೇಳಿದ್ದಾರೆ ಎನ್ನುವುದು ಹಸಿ ಸುಳ್ಳು. ದೇಶದ ಪ್ರಧಾನಿ ಮೋದಿ ಅವರು ಹೇಳಿರುವುದು ಅತ್ಯಂತ ವಿಷಾದನೀಯ. ಮತೀಯ ದ್ವೇಷ ಹುಟ್ಟಿಸಬೇಕೆಂಬ ಏಕೈಕ ದುರುದ್ದೇಶದಿಂದ ಈ ರೀತಿಯ ಸುಳ್ಳುಗಳನ್ನು ಹೇಳುತ್ತಿದ್ದಾರೆ' ಎಂದು ಕಿಡಿ ಕಾರಿದ್ದಾರೆ.

'ಅಂಬೇಡ್ಕರ್ ಅವರ ಭಾಷಣ ಮತ್ತು ಬರವಣಿಗೆಗಳ ಹನ್ನೆರಡು ಸಂಪುಟಗಳನ್ನು ಮಹಾರಾಷ್ಟ್ರ ಸರ್ಕಾರ ಹಲವು ವರ್ಷಗಳ ಹಿಂದೆಯೇ ಪ್ರಕಟ ಮಾಡಿದೆ. ಅವುಗಳ ಕನ್ನಡ ಅನುವಾದವನ್ನು ನಮ್ಮ ಸರ್ಕಾರವೇ ಮುದ್ರಿಸಿದೆ. ಅಲ್ಲೆಲ್ಲಾದರೂ ಧರ್ಮಾಧಾರಿತ ಮೀಸಲಾತಿ ಬೇಡ ಎನ್ನುವ ಅಂಬೇಡ್ಕರ್ ಅವರ ಅಭಿಪ್ರಾಯ ಉಲ್ಲೇಖ ಇದ್ದರೆ ದೇಶದ ಜನರ ಮುಂದಿಡಬೇಕು. ಇಲ್ಲವಾದರೆ, ಇಂತಹದ್ದೊಂದು ಸುಳ್ಳನ್ನು ಹೇಳಿರುವುದಕ್ಕಾಗಿ ದೇಶದ ಜನರ ಕ್ಷಮೆ ಯಾಚಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲಾಗಿದೆಯೇ ಹೊರತು ಕಡಿಮೆ ಮಾಡಿಲ್ಲ. ನ್ಯಾಯಮೂರ್ತಿ ನಾಗಮೋಹನ್‌ದಾಸ್ ಸಮಿತಿ ಶಿಫಾರಸಿನ ಆಧಾರದಲ್ಲಿ ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ 15ರಿಂದ ಶೇ 17ಕ್ಕೆ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 3ರಿಂದ ಶೇ 7ಕ್ಕೆ ಹೆಚ್ಚಿಸಲಾಗಿದೆ. ಹೀಗಿರುವಾಗ ಅವರಿಂದ ಕಿತ್ತುಕೊಳ್ಳುವುದು ಎಲ್ಲಿಂದ ಬಂತು? ಕನಿಷ್ಠ ಮಾಹಿತಿಯೂ ಇಲ್ಲದ ಮೋದಿಯವರು ನಮ್ಮ ಸರ್ಕಾರದ ಮೇಲೆ ಸುಳ್ಳು ಆರೋಪ ಮಾಡಿ ತಮ್ಮ ಘನತೆಯನ್ನು ತಾವೇ ಹಾಳುಗೆಡಹುತ್ತಿದ್ದಾರೆ' ಎಂದಿದ್ದಾರೆ.

'ಮುಸ್ಲಿಮರಲ್ಲಿನ ಹಿಂದುಳಿದಿರುವಿಕೆಯ ಬಗ್ಗೆ ಇನ್ನಷ್ಟು ಮಾಹಿತಿಯನ್ನು ಮೋದಿಯವರು ತಿಳಿದುಕೊಳ್ಳಲು ಬಯಸುವುದಾದರೆ ಈ ಬಗ್ಗೆ ಅಧ್ಯಯನ ಮಾಡಿರುವ ಸಾಚಾರ್ ಸಮಿತಿಯ ವರದಿಯನ್ನು ಪರಿಶೀಲಿಸುವ ಕಷ್ಟ ತೆಗೆದುಕೊಳ್ಳಬೇಕು. ಆ ವರದಿಯ ಪ್ರಕಾರ ಶಿಕ್ಷಣ ಮತ್ತು ಉದ್ಯೋಗದ ಕ್ಷೇತ್ರಗಳಲ್ಲಿ ಮುಸ್ಲಿಮರ ಪ್ರಾತಿನಿಧ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಿಂತಲೂ ಕಡಿಮೆ ಇದೆ' ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಮುಡಾ ಹಗರಣ: ಮುಂದುವರಿದ ತನಿಖೆಗೆ ಕೋರ್ಟ್ ಅನುಮತಿ

ಬೆಂಗಳೂರು: 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ಮುಂದುವರಿಸಲು ಅನುಮತಿ ನೀಡಬೇಕು' ಎಂಬ ಲೋಕಾಯುಕ್ತ ಪೊಲೀಸರ ಕೋರಿಕೆಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಪುರಸ್ಕರಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಸಲ್ಲಿಸಿರುವ 'ಬಿ' ಅಂತಿಮ ವರದಿ ವಿರೋಧಿಸಿ ದೂರುದಾರ ಸ್ನೇಹಮಯಿ ಕೃಷ್ಣ ಮತ್ತು 'ವಿರೋಧದ ಅರ್ಜಿ ಸಲ್ಲಿಸಲು ನಮಗೂ ಅನುಮತಿ ನೀಡಬೇಕು' ಎಂದು ಕೋರಿ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿದ್ದ ಅರ್ಜಿಗಳ ಮೇಲಿನ ಕಾಯ್ದಿರಿಸಿದ್ದ ಆದೇಶವನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಮಂಗಳವಾರ ಪ್ರಕಟಿಸಿದರು.

'ಸೀಮಿತ ವ್ಯಾಪ್ತಿಗೆ ಜಾರಿ ನಿರ್ದೇಶನಾಲಯವನ್ನು ಬಾಧಿತ ವ್ಯಕ್ತಿ ಎಂದು ಪರಿಗಣಿಸಲಾಗಿದೆ. ಲೋಕಾಯುಕ್ತ ಪೊಲೀಸರು ನಿರ್ಣಾಯಕವಾದ ಅಂತಿಮ ವರದಿ ಸಲ್ಲಿಸುವವರೆಗೆ 'ಬಿ ವರದಿ' ಪರಿಗಣಿಸುವುದು ಅಥವಾ ತಿರಸ್ಕರಿಸುವ ಪ್ರಶ್ನೆಯನ್ನು ಬಾಕಿ ಉಳಿಸಲಾಗಿದೆ' ಎಂದು ನ್ಯಾಯಾಲಯ ಆದೇಶದಲ್ಲಿ ವಿವರಿಸಿದೆ.

'ಮುಂದುವರಿದ ತನಿಖೆ ನಡೆಸಿ, ಮೇ 7ರ ಒಳಗಾಗಿ ಸಮಗ್ರವಾದ ನಿರ್ಣಾಯಕ ವರದಿ ಸಲ್ಲಿಸಿ' ಎಂದು ಲೋಕಾಯುಕ್ತಕ್ಕೆ ನಿರ್ದೇಶಿಸಿದ ನ್ಯಾಯಾಧೀಶರು ವಿಚಾರಣೆ ಮುಂದೂಡಿದರು.

'ಮುಡಾ ನಿವೇಶನ ಹಂಚಿಕೆ ಅಕ್ರಮ ಆರೋಪದ ಪ್ರಕರಣದಲ್ಲಿ ಮೊದಲ ಆರೋಪಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಅಪರಾಧ ಸಾಬೀತುಪಡಿಸುವ ಯಾವುದೇ ಅಂಶಗಳಿಲ್ಲ' ಎಂಬ ಷರಾ ಬರೆದಿರುವ 'ಬಿ' ಅಂತಿಮ ವರದಿಯನ್ನು ಲೋಕಾಯುಕ್ತ ಪೊಲೀಸರು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ 2025ರ ಫೆಬ್ರುವರಿ 20ರಂದು ಸಲ್ಲಿಸಿದ್ದಾರೆ.

ಸಾರಿಗೆ ನೌಕರರ ಬೇಡಿಕೆ ಶೀಘ್ರವೇ ಮತ್ತೊಂದು ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ವಿವಿಧ ಬೇಡಿಕೆಗಳ ಈಡೇರಿಕೆ ಕುರಿತು ಕಾರ್ಮಿಕ ಸಂಘಟನೆಗಳ ಜತೆ ಆದಷ್ಟು ಬೇಗ ಇನ್ನೊಮ್ಮೆ ಸಭೆ ಕರೆಯುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜತೆ ಮಂಗಳವಾರ ಸಭೆ ನಡೆಸಿದ ಮುಖ್ಯಮಂತ್ರಿಯವರು, ಸಾರಿಗೆ ನೌಕರರಿಗೆ ಸಮಾನ ವೇತನ ಜಾರಿ ಸೇರಿ ಎಲ್ಲಾ ಬೇಡಿಕೆಗಳ ಕುರಿತು ಪರಿಶೀಲನೆ ನಡೆಸುವುದಾಗಿಯೂ ಭರವಸೆ ನೀಡಿದರು.

ರಾಜ್ಯ ಸರ್ಕಾರ ಸದಾ ದುಡಿಯುವ ವರ್ಗದ ಪರವಾಗಿದೆ. ಹಿಂದಿನ ಸರ್ಕಾರ ಸುಮಾರು ₹40 ಸಾವಿರ ಕೋಟಿ ಬಾಕಿ ಬಿಲ್‌ಗಳನ್ನು ಉಳಿಸಿ ಹೋಗಿದೆ. ಇದು ಸರ್ಕಾರದ ಮೇಲೆ ಆರ್ಥಿಕ ಹೊರೆ ಉಂಟು ಮಾಡಿದೆ. ಸರ್ಕಾರ ತನ್ನ ಇತಿಮಿತಿಯ ಒಳಗೆ ಬೇಡಿಕೆಗಳನ್ನು ಪರಿಶೀಲಿಸಲಿದೆ ಎಂದರು.

ಚಾಲಕ ಮತ್ತು ನಿರ್ವಾಹಕರ ಮಾದರಿಯಲ್ಲಿ ಮೆಕ್ಯಾನಿಕ್‌ಗಳ ನೇಮಕಾತಿಗೆ ಅನುಮತಿ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಸಿದ್ದರಾಮಯ್ಯ ಹೇಳಿದರು.

'ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಸಂಸ್ಥೆಗೆ ₹4,000 ಕೋಟಿಯಷ್ಟು ಮೊತ್ತವನ್ನು ಹಿಂದಿನ ಸರ್ಕಾರ ಬಾಕಿ ಉಳಿಸಿ ಹೋಗಿತ್ತು. ಸಾರಿಗೆ ಸಂಸ್ಥೆಯನ್ನು ಬಲಪಡಿಸಲು ಸರ್ಕಾರ ಎಲ್ಲಾ ಕ್ರಮಗಳನ್ನೂ ಕೈಗೊಂಡಿದೆ. ನೌಕರರಿಗೆ ನಗದು ರಹಿತ ಚಿಕಿತ್ಸೆ ಸೇರಿದಂತೆ ಹಲವು ಸೌಲಭ್ಯಗಳನ್ನು ಒದಗಿಸಲಾಗಿದೆ. ಈ ವರ್ಷದ ಬಜೆಟ್‌ನಲ್ಲಿ ₹350 ಕೋಟಿ ಸಾಲ ಪಡೆಯಲು ಸಂಸ್ಥೆಗೆ ಅನುಮತಿ ನೀಡಲಾಗಿದೆ. ಸಂಸ್ಥೆಯನ್ನು ಬಲಪಡಿಸಲು 2 ಸಾವಿರ ಬಸ್‌ಗಳನ್ನು ಹೊಸದಾಗಿ ಖರೀದಿ ಮಾಡಲಾಗುವುದು' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾಹಿತಿ ನೀಡಿದರು.

ಸಭೆಯಲ್ಲಿ ಸಚಿವರಾದ ಜಿ. ಪರಮೇಶ್ವರ, ಬೈರತಿ ಸುರೇಶ್, ಸಾರಿಗೆ ನಿಗಮಗಳ ಅಧ್ಯಕ್ಷರಾದ ಎಸ್.ಆರ್.ಶ್ರೀನಿವಾಸ್, ರಾಜು ಕಾಗೆ ಉಪಸ್ಥಿತರಿದ್ದರು.

ಕಾರ್ಮಿಕ ಸಂಘದ ಬೇಡಿಕೆಗಳು:

- 2024ರ ಜನವರಿಯಿಂದ ಜಾರಿಗೆ ಬರುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಅಧಿಕಾರಿಗಳ ಮತ್ತು ನೌಕರರ ವೇತನ ಪರಿಷ್ಕರಣೆ ಮಾಡಬೇಕು. ಸರ್ಕಾರಿ ನೌಕರರಿಗೆ ಸರಿ ಸಮಾನವಾದ ವೇತನವನ್ನು ಸಾರಿಗೆ ನೌಕರರಿಗೂ ಜಾರಿಗೊಳಿಸಬೇಕು.
- 2020ರ ಜನವರಿಯಿಂದ ಜಾರಿ ಆಗಬೇಕಾದ ವೇತನ ಪರಿಷ್ಕರಣೆ 2023ರ ಮಾರ್ಚ್ 1 ರಿಂದ ಅನುಷ್ಠಾನಕ್ಕೆ ಬಂದಿದ್ದು, 38 ತಿಂಗಳ ಬಾಕಿ ಹಣವನ್ನು ಪಾವತಿಸಬೇಕು.
- ಈ ಹಿಂದೆ 2020 ಮತ್ತು 2021ರ ಸಾರಿಗೆ ಮುಷ್ಕರ ಸಂದರ್ಭದಲ್ಲಿ ನೌಕರರ ಮೇಲೆ ಹಾಕಲಾಗಿರುವ ಎಲ್ಲಾ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಬೇಕು.
- ಸಾರಿಗೆ ನಿಗಮದ ವಿದ್ಯುತ್ ಬಸ್‌ಗಳಲ್ಲಿ ಸಂಸ್ಥೆಯ ಚಾಲಕರನ್ನೇ ಚಾಲನಾ ಕೆಲಸಕ್ಕೆ ನಿಯೋಜಿಸಬೇಕು. ಈ ಬಸ್‌ಗಳ ನಿರ್ವಹಣೆಯನ್ನು ಖಾಸಗಿ ಗುತ್ತಿಗೆದಾರರಿಗೆ ನೀಡುವ ಪದ್ಧತಿ ಕೈಬಿಡಬೇಕು.

ಅಗತ್ಯ ವಸ್ತುಗಳ ಪೂರೈಕೆಯಲ್ಲಿ ವ್ಯತ್ಯಯ, ಸಚಿವರ ಮನವಿಗೆ ಮಣಿಯದ ಸಂಘದ ಮುಖಂಡರು

ಸಂಧಾನ ವಿಫಲ: 3 ನೇ ದಿನಕ್ಕೆ ಲಾರಿ ಮುಷ್ಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮುಷ್ಕರ ಆರಂಭಿಸಿರುವ ಲಾರಿ ಮಾಲೀಕರು ಮತ್ತು ಏಜೆಂಟರ ಸಂಘದ ಪದಾಧಿಕಾರಿಗಳೊಂದಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ನಡೆಸಿದ ಎರಡು ಸುತ್ತಿನ ಸಂಧಾನ ಸಭೆಗಳು ಫಲ ನೀಡಿಲ್ಲ. ಇದರಿಂದಾಗಿ ಲಾರಿ ಮುಷ್ಕರ ಮೂರನೇ ದಿನಕ್ಕೆ ಕಾಲಿರಿಸಿದೆ.

ಡೀಸೆಲ್ ದರ ಇಳಿಕೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯದ ಲಾರಿ ಮಾಲೀಕರು ಸೋಮವಾರ ಮಧ್ಯರಾತ್ರಿಯಿಂದಲೇ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದ್ದಾರೆ. ಇದರಿಂದ ಅಗತ್ಯ ವಸ್ತುಗಳ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವ ಆತಂಕ ಎದುರಾಗಿದೆ.

ಶಾಂತಿನಗರದಲ್ಲಿರುವ ಕೆಎಸ್‌ಆರ್‌ಟಿಸಿ ಕಚೇರಿಯಲ್ಲಿ ಲಾರಿ ಮಾಲೀಕರ ಹಾಗೂ ಏಜೆಂಟರ ಸಂಘದ ಅಧ್ಯಕ್ಷ ಜಿ.ಆರ್.ಷಣ್ಮುಖಪ್ಪ ಹಾಗೂ ಪದಾಧಿಕಾರಿಗಳ ಜೊತೆ ರಾಮಲಿಂಗಾರೆಡ್ಡಿ ಅವರು ಮಂಗಳವಾರ ಮಧ್ಯಾಹ್ನ ಸುದೀರ್ಘ ಸಭೆ ನಡೆಸಿದರು. ಆದರೆ, ಮುಷ್ಕರ ಕೈಬಿಡಬೇಕೆಂಬ ಸಚಿವರ ಮನವಿಗೆ ಸಂಘದ ಪ್ರಮುಖರು ಮಣಿಯಲಿಲ್ಲ.

ಬಳಿಕ, ತಮ್ಮ ಗೃಹ ಕಚೇರಿಯಲ್ಲಿ ಸಭೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ರಾಜ್ಯ ಮತ್ತು ಇತರ ರಾಜ್ಯಗಳಲ್ಲಿನ ಡೀಸೆಲ್ ದರದ ಕುರಿತು ಮಾಹಿತಿ ಹಂಚಿಕೊಂಡರು. ಮುಷ್ಕರ ಸ್ಥಗಿತಗೊಳಿಸುವಂತೆ ಲಾರಿ ಮಾಲೀಕರ ಮತ್ತು ಏಜೆಂಟರ ಸಂಘದ ಪದಾಧಿಕಾರಿಗಳಲ್ಲಿ ಮನವಿ ಮಾಡಿದರು.

ರಾಮಲಿಂಗಾರೆಡ್ಡಿ, ಗೃಹ ಸಚಿವ ಜಿ. ಪರಮೇಶ್ವರ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಕೂಡ ಸಭೆಯಲ್ಲಿದ್ದರು. ನಗರಗಳಲ್ಲಿ ಲಾರಿಗಳ ಪ್ರವೇಶ ನಿರ್ಬಂಧ ಸಡಿಲಿಕೆ ಸೇರಿದಂತೆ ಕೆಲವು ಬೇಡಿಕೆಗಳ ಬಗ್ಗೆ ಪರಿಶೀಲಿಸಿ, ನಿರ್ಧಾರ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದರು. ಆದರೂ, ಷಣ್ಮುಖಪ್ಪ ಮತ್ತು ಇತರ ಪದಾಧಿಕಾರಿಗಳು ಮುಷ್ಕರ ಕೈಬಿಡಲು ಒಪ್ಪಲಿಲ್ಲ.

ಸಾಲುಗಟ್ಟಿ ನಿಂತ ಲಾರಿಗಳು: ಮುಷ್ಕರಕ್ಕೆ ಕರ್ನಾಟಕ ಸರಕು ಸಾಗಾಣಿಕೆದಾರ ಸಂಘ, ಎಐಎಂಟಿಸಿ, ಎಸ್‌ಐಎಂಟಿಎ, ಬಿಸಿಟಿಎ, ಎಲ್‌ಪಿಜಿ ಟ್ಯಾಂಕರ್ಸ್, ಪೆಟ್ರೋಲ್ ಪಂಪ್ ಅಸೋಸಿಯೇಷನ್, ಏರ್‌ಪೋರ್ಟ್ ಟ್ಯಾಕ್ಸಿ ಅಸೋಸಿಯೇಷನ್ ಸೇರಿದಂತೆ ಹಲವು ಸಂಘಟನೆಗಳು ಬೆಂಬಲ ನೀಡಿವೆ.

ಹೆದ್ದಾರಿಗಳ ಪಕ್ಕ, ಮಾರುಕಟ್ಟೆ, ಯಶವಂತಪುರದ ಡಿ. ದೇವರಾಜ ಅರಸು ಟ್ರಕ್ ಟರ್ಮಿನಲ್‌ನಲ್ಲಿ ಲಾರಿಗಳು ಸಾಲು ಸಾಲಾಗಿ ನಿಂತಿದ್ದು, ಕಾರ್ಯ ಚಟುವಟಿಕೆಗಳು ಸ್ಥಗಿತಗೊಂಡಿವೆ. ಹೊರ ರಾಜ್ಯಗಳಿಂದ ಸರಕು ಸಾಗಣೆ ಲಾರಿಗಳು ಬರುತ್ತಿಲ್ಲ. ಮರಳು, ಜಲ್ಲಿ, ಸಿಮೆಂಟ್, ಕಬ್ಬಿಣ ಸಾಗಾಟ ಸ್ಥಗಿತಗೊಂಡಿದೆ.

ಮಾರುಕಟ್ಟೆ ಮತ್ತಿತರ ಸ್ಥಳಗಳಿಗೆ ಅಗತ್ಯವಸ್ತುಗಳು, ಎಲೆಕ್ಟ್ರಾನಿಕ್ಸ್, ಸರಕು ಸಾಗಣಿಕೆ ವಾಹನಗಳ ಸೇರಿ ಸುಮಾರು 6 ಲಕ್ಷ ಲಾರಿಗಳು ರಾಜ್ಯದಾದ್ಯಂತ ಸಂಚಾರ ಸ್ಥಗಿತಗೊಳಿಸಿವೆ ಎಂದು ಸಂಘ ಹೇಳಿದೆ.

ಮುಷ್ಕರಕ್ಕೆ ಟ್ಯಾಕ್ಸಿ ಚಾಲಕರು ಸಹ ಬೆಂಬಲ ವ್ಯಕ್ತಪಡಿಸಿದ್ದಾರೆ. ಆದರೂ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಎಂದಿನಂತೆ ಟ್ಯಾಕ್ಸಿಗಳು ಸಂಚರಿಸುತ್ತಿವೆ. ಓಲಾ, ಉಬರ್, ಏರ್‌ಪೋರ್ಟ್ ಟ್ಯಾಕ್ಸಿ ಸೇರಿದಂತೆ ಎಲ್ಲಾ ಕ್ಯಾಬ್‌ಗಳು ಸಂಚರಿಸುತ್ತಿದ್ದವು.

ಯಾವ ಸೇವೆ ಲಭ್ಯ

- ಹಾಲು, ಔಷಧ, ಗೃಹ ಬಳಕೆ
- ಎಲ್‌ಪಿಜಿ, ಹಣ್ಣು–ತರಕಾರಿ, ಆಂಬುಲೆನ್ಸ್, ಅಗ್ನಿಶಾಮಕ ಸೇವೆ



ಲಾರಿ ಮುಷ್ಕರದ ಕಾರಣದಿಂದ ಬೆಂಗಳೂರಿನ ಯಶವಂತಪುರದ ಎಪಿಎಂಸಿ ಯಾರ್ಡ್‌ನಲ್ಲಿ ಚಾಲಕರೊಬ್ಬರು ಲಾರಿಯೊಳಗೇ ಅಡುಗೆ ಸಿದ್ಧಪಡಿಸಿದ ದೃಶ್ಯ ಮಂಗಳವಾರ ಕಂಡುಬಂತು ಚಿತ್ರ: ಪ್ರಶಾಂತ್ ಎಚ್‌.ಜಿ.

ರಾಜ್ಯದಲ್ಲಿ ಡಿಸೇಲ್ ದರ ಕಡಿಮೆ: ಸಿ.ಎಂ

'ಈ ಬಾರಿ ಬಜೆಟ್‌ನಲ್ಲಿ ಡಿಸೇಲ್ ಮೇಲಿನ ಸುಂಕವನ್ನು ₹2 ಹೆಚ್ಚಳ ಮಾಡಲಾಗಿದೆ. ನೆರೆ ರಾಜ್ಯಗಳಿಗೆ ಹೋಲಿಸಿದರೆ ಡಿಸೇಲ್ ದರ ರಾಜ್ಯದಲ್ಲಿ ಕಡಿಮೆಯಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಲಾರಿ ಮಾಲೀಕರ ಹಾಗೂ ಏಜೆಂಟರ ಸಂಘಗಳ ಪ್ರತಿನಿಧಿಗಳ ಜತೆ ಸಭೆ ನಡೆಸಿದ ಅವರು, 'ರಸ್ತೆಗಳ ಸುಧಾರಣೆಗೆ ರಾಜ್ಯ ಸರ್ಕಾರ ಪ್ರತಿ ವರ್ಷ ಸುಮಾರು ₹14 ಸಾವಿರ ಕೋಟಿ ವೆಚ್ಚ ಮಾಡುತ್ತಿದೆ' ಎಂದರು.

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೋರ್ಟ್‌ಗಳಲ್ಲಿ ನ್ಯಾಯಾಧೀಶರ ಕೊರತೆ



21,285 ಭಾರತದಲ್ಲಿರುವ ನ್ಯಾಯಾಧೀಶರು

15 ಪ್ರತಿ 10 ಲಕ್ಷ ಜನಸಂಖ್ಯೆಗೆ ಇರುವ ನ್ಯಾಯಾಧೀಶರು

2,200 ದೇಶದಲ್ಲಿ ಜಿಲ್ಲಾ ನ್ಯಾಯಾಧೀಶರೊಬ್ಬರ ಸರಾಸರಿ ಕಾರ್ಯಭಾರ ಪ್ರಕರಣಗಳು

50 1987ರ ಕಾನೂನು ಆಯೋಗದ ಶಿಫಾರಸಿನಂತೆ ಪ್ರತಿ 10 ಲಕ್ಷ ಜನಸಂಖ್ಯೆಗೆ ಇರಬೇಕಾದ ನ್ಯಾಯಾಧೀಶರು

ಆಧಾರ: ಭಾರತದ ನ್ಯಾಯಾಂಗ ವ್ಯವಸ್ಥೆ–2025 ವರದಿ

ಆಳ-ಅಗಲ
ಬೇಕಾಗಿದ್ದಾರೆ... ದೇಶಭ್ರಷ್ಟರ ಕರೆತರಲು ಭಾರತದ ಯತ್ನ

ಪ್ರಜಾ ಪ್ಲಸ್
ವೆಬ್ ಸರಣಿ ಪರ್ಯಾಯ ಉದ್ಯಮ 9

ತರಕಾರಿ, ಮೊಟ್ಟೆ ಅಗ್ಗ 8

ವಕ್ಫ್ ಕಾಯ್ದೆ ಪ್ರಶ್ನಿಸಿ ಹೊಸ ಅರ್ಜಿ 9

ಸೆನ್ಸೆಕ್ಸ್	ನಿಫ್ಟಿ	₹/$
76,734	23,328	85.80

ಜಾತಿ ದತ್ತಾಂಶಕ್ಕೆ ವಿರೋಧ

ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆ ಆಧರಿಸಿದ ‘ದತ್ತಾಂಶ ಅಧ್ಯಯನ ವರದಿ’ಗೆ ತೀವ್ರ ತಕರಾರು ಎದುರಾಗಿದ್ದು, ವಿವಿಧ ಸಮುದಾಯಗಳು ವರದಿಯ ಶಿಫಾರಸು ಜಾರಿ ಮಾಡದಂತೆ ಒತ್ತಡ ಹೇರುವ ತಂತ್ರದ ಮೊರೆ ಹೋಗಿವೆ. ಏತನ್ಮಧ್ಯೆ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಒಕ್ಕಲಿಗ ಸಮುದಾಯದ ಶಾಸಕರ ಸಭೆ ನಡೆಸಿ, ಅಭಿಪ್ರಾಯ ಸಂಗ್ರಹಿಸಿದ್ದಾರೆ

‘ಸರ್ಕಾರ ಕೆಡಹುತ್ತೇವೆ’

ಬೆಂಗಳೂರು: ವೀರಶೈವ ಲಿಂಗಾಯತ, ಬ್ರಾಹ್ಮಣ ಸೇರಿದಂತೆ ಅನ್ಯಾಯಕ್ಕೊಳಗಾಗಿರುವ ಎಲ್ಲ ಸಮುದಾಯಗಳನ್ನು ಒಟ್ಟುಗೂಡಿಸಿ ರಾಜ್ಯದಾದ್ಯಂತ ಜಾತಿ ಜನಗಣತಿ ವಿರುದ್ಧ ಹೋರಾಟ ನಡೆಸುವುದಾಗಿ ರಾಜ್ಯ ಒಕ್ಕಲಿಗರ ಸಂಘ ಘೋಷಿಸಿದೆ.

ಸಂಘದ ನಿರ್ದೇಶಕರು ಮತ್ತು ಪದಾಧಿಕಾರಿಗಳ ಜತೆ ಸಭೆ ನಡೆಸಿದ ಬಳಿಕ ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಬಿ. ಕೆಂಚಪ್ಪ ಗೌಡ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

8ನೇ ಪುಟ ನೋಡಿ

‘ಎಲ್ಲರಿಗೂ ತೊಂದರೆ’

ರಾಜ್ಯ ಸರ್ಕಾರ ನಡೆಸಿದ ಸಾಮಾಜಿಕ ಮತ್ತ ಶೈಕ್ಷಣಿಕ ಸಮೀಕ್ಷೆಯ ಶಿಫಾರಸುಗಳು ಜಾರಿಯಾದರೆ ಲಿಂಗಾಯತರಿಗೆ ಮಾತ್ರವಲ್ಲ ಪರಿಶಿಷ್ಟ ಜಾತಿ, ಪಂಗಡ ಸೇರಿ ಎಲ್ಲ ವರ್ಗದ ವರಿಗೂ ತೊಂದರೆ ಆಗಲಿದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ ಹೇಳಿದರು.

‘ಪ್ರವರ್ಗ 3ಬಿ’ಯಲ್ಲಿ ಈ ಹಿಂದೆ 75 ಲಕ್ಷ ಜನಸಂಖ್ಯೆ ಇತ್ತು’ ಎಂದರು.

8ನೇ ಪುಟ ನೋಡಿ

‘ಒಕ್ಕಲಿಗರಿಗೆ ಮರಣಶಾಸನ’

ಮುಖ್ಯಮಂತ್ರಿ ಕುರ್ಚಿ ಹತ್ತಲು ‘ಒಂದ್ ಸಲ ನಂಗೂ ಪೆನ್ನು-ಪೇಪರ್ ಕೊಡಿ’ ಎಂದಿದ್ದ ವ್ಯಕ್ತಿಗೆ ಅಧಿಕಾರ ಕೊಟ್ಟ ಒಕ್ಕಲಿಗ ಸಮಾಜ ಬೆಲೆ ತೆರುತ್ತಿದೆ ಎಂದು ಕೇಂದ್ರ ಕೈಗಾರಿಕಾ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಟೀಕೆ ಮಾಡಿದ್ದಾರೆ. ‘ಎಕ್ಸ್’ ವೇದಿಕೆಯಲ್ಲಿ ಹೇಳಿಕೆ ನೀಡಿರುವ ಅವರು, ‘ಕುರ್ಚಿ ದುರಾಸೆಗೆ ಈ ವ್ಯಕ್ತಿ ಅದೇ ಪೆನ್ನಿನಲ್ಲಿ ಸಮಾಜದ ಮರಣಶಾಸನ ಬರೆಯುತ್ತಿದ್ದಾರೆ’ ಎಂದರು.

8ನೇ ಪುಟ ನೋಡಿ

ಪ್ರವರ್ಗ 1 ಒಕ್ಕೂಟ ವಿರೋಧ

ಆಯೋಗದ ವರದಿಯಲ್ಲಿ ಅಲೆ ಮಾರಿ ಹಾಗೂ ಅರೆ ಅಲೆಮಾರಿ ಗುಣಲಕ್ಷಣ ಹೊಂದಿರುವ ಅತ್ಯಂತ ಹಿಂದುಳಿದ 147 ಜಾತಿಗಳಿಗೆ ಕೆನೆ ಪದರ ನೀತಿಯಡಿ ಆದಾಯ ಮಿತಿಯನ್ನು ಅಳವಡಿಸುವಂತೆ ಶಿಫಾರಸು ಮಾಡಿರುವುದನ್ನು ಕರ್ನಾಟಕ ರಾಜ್ಯ ಪ್ರವರ್ಗ–1ರ ಜಾತಿಗಳ ಒಕ್ಕೂಟ ವಿರೋಧಿಸಿದೆ. ಒಕ್ಕೂಟದ ಅಧ್ಯಕ್ಷ ಡಿ.ಟಿ. ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಎ.ವಿ. ಲೋಕೇಶಪ್ಪ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

8ನೇ ಪುಟ ನೋಡಿ

ಇಂದು, ನಾಳೆ ಸಿಇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಇಂದು (ಏ.16) ಮತ್ತು ನಾಳೆ (ಏ.17) ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ನಡೆಯಲಿದೆ.

ಏ.16ರಂದು ಭೌತ ವಿಜ್ಞಾನ (ಬೆಳಿಗ್ಗೆ 10.30ರಿಂದ 11.50) ಮತ್ತು ರಸಾಯನ ವಿಜ್ಞಾನ (ಮಧ್ಯಾಹ್ನ 2.30ರಿಂದ 3.50) ಹಾಗೂ ಏ.17ರಂದು ಗಣಿತ (ಬೆಳಿಗ್ಗೆ 10.30ರಿಂದ 11.50) ಮತ್ತು ಜೀವ ವಿಜ್ಞಾನ (ಮಧ್ಯಾಹ್ನ 2.30ರಿಂದ 3.50) ವಿಷಯಗಳ ಪರೀಕ್ಷೆಗಳು ನಡೆಯಲಿದೆ.

ಸಿ.ಸಿ.ಟಿ.ವಿ ಕ್ಯಾಮೆರಾ ಕಣ್ಗಾವಲು ಇರುತ್ತದೆ. ವೆಬ್‌ಕಾಸ್ಟಿಂಗ್ ಮೂಲಕ ಎಲ್ಲ 775 ಪರೀಕ್ಷಾ ಕೇಂದ್ರಗಳ ಮೇಲೆ ನಿಗಾ ಇಡುವ ವ್ಯವಸ್ಥೆ ಮಾಡಲಾಗಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವ ಹಣಾಧಿಕಾರಿ ಮೇಲುಸ್ತುವಾರಿ ನಡೆಸಲಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಜಾರಕಿಹೊಳಿ ವಿರುದ್ಧದ ಚಾರ್ಜ್‌ಶೀಟ್‌ಗೆ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಕ್ಕರೆ ಕಾರ್ಖಾನೆಯ ಅಭಿವೃದ್ಧಿಗಾಗಿ ಪಡೆದಿರುವ ಸಾಲ ಮತ್ತು ಅದರ ಬಡ್ಡಿ ಸೇರಿದಂತೆ ಒಟ್ಟು ₹439 ಕೋಟಿ ಪಾವತಿ ಮಾಡದೆ ವಂಚಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಹಾಗೂ ಇನ್ನಿಬ್ಬರ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಲು ಸಿಐಡಿಗೆ ಹೈಕೋರ್ಟ್ ಅನುಮತಿ ನೀಡಿದೆ.

ಈ ಸಂಬಂಧ, ‘ಸೌಭಾಗ್ಯಲಕ್ಷ್ಮಿ ಶುಗರ್ಸ್ ಲಿಮಿಟೆಡ್’ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ರಮೇಶ ಜಾರಕಿಹೊಳಿ, ನಿರ್ದೇಶಕರಾಗಿದ್ದ ವಸಂತ ಪಾಟೀಲ ಮತ್ತು ಶಂಕರ್ ಪವಾಡೆ ಸಲ್ಲಿಸಿದ್ದ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರು ಮಂಗಳವಾರ ವಿಚಾರಣೆ ನಡೆಸಿದರು. ‘ಸಿಐಡಿಯು ಸಕ್ಷಮ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಬಹುದು. ಆದರೆ, ಹೈಕೋರ್ಟ್ ಮುಂದಿನ ಆದೇಶ ಮಾಡುವತನಕ ದೋಷಾರೋಪ ಪಟ್ಟಿಗೆ ಸಂಬಂಧಿಸಿದಂತೆ ಯಾವುದೇ ಆತುರದ ಕ್ರಮ ಕೈಗೊಳ್ಳಬಾರದು’ ಎಂದು ನ್ಯಾಯಪೀಠ ವಿಶೇಷ ನ್ಯಾಯಾಲಯಕ್ಕೆ ನಿರ್ದೇಶಿಸಿದೆ.

ಅಲಹಾಬಾದ್ ಹೈಕೋರ್ಟ್ ಮಾತಿಗೆ ‘ಸುಪ್ರೀಂ’ ಆಕ್ಷೇಪ



ನವದೆಹಲಿ (ಪಿಟಿಐ): ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿಯೊಬ್ಬರು ಅತ್ಯಾಚಾರಕ್ಕೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ‘ದೂರುದಾರ ಮಹಿಳೆಯೇ ಸಮಸ್ಯೆ ತಂದುಕೊಂಡಳು’ ಎಂದು ಈಚೆಗೆ ಆಡಿದ ಮಾತುಗಳಿಗೆ ಸುಪ್ರೀಂ ಕೋರ್ಟ್ ಆಕ್ಷೇಪ ವ್ಯಕ್ತಪಡಿಸಿದೆ.

ಜಾಮೀನು ಅರ್ಜಿಯನ್ನು ಇತ್ಯರ್ಥ-ಪಡಿಸುವಾಗ ಇಂತಹ ಮಾತುಗಳನ್ನು ಆಡಿದ್ದು ಏಕೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಪ್ರಶ್ನಿಸಿದೆ. ಅತ್ಯಾಚಾರ ಪ್ರಕರಣದಲ್ಲಿ ಆರೋಪಿಗೆ ಜಾಮೀನು ಮಂಜೂರು ಮಾಡಿರುವ ಹೈಕೋರ್ಟ್, ಆರೋಪಿಯ ಮನೆಗೆ ಮದ್ಯ ಕುಡಿದ ನಂತರ ಹೋಗಲು ಒಪ್ಪಿಕೊಳ್ಳುವ ಮೂಲಕ ಮಹಿಳೆ ‘ತಾನಾಗಿಯೇ ಸಮಸ್ಯೆ ತಂದುಕೊಂಡಳು’ ಎಂದು ಹೇಳಿತ್ತು.

ಮಹಿಳೆಯ ಸ್ತನ ಹಿಡಿದುಕೊಳ್ಳುವುದು, ಮಹಿಳೆಯ ಪೈಜಾಮಾದ ಲಾಡಿ ಎಳೆಯುವುದು ಅತ್ಯಾಚಾರ ಯತ್ನ ಆಗುವುದಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ಇನ್ನೊಂದು ಪ್ರಕರಣದ ಆದೇಶದಲ್ಲಿ ಹೇಳಿದ್ದ ಮಾತುಗಳ ಕುರಿತು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ.

5ನೇ ಪುಟ ನೋಡಿ

ಹವಾಮಾನ ಕ್ರಿಯಾ ಕೋಶ ಫೆಲೋಶಿಪ್‌ಗೆ ಅರ್ಜಿ

ಬೆಂಗಳೂರು: ಹವಾಮಾನ ಕ್ರಿಯಾ ಕೋಶ (ಸಿಎಸಿ) ಫೆಲೋಶಿಪ್‌ನ ಎರಡು ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಬಿಬಿಎಂಪಿ ಹವಾಮಾನ ಕ್ರಿಯಾ ಕೋಶದ ಅಧ್ಯಕ್ಷೆ ಪ್ರೀತಿ ಗೆಹಲೋತ್ ತಿಳಿಸಿದ್ದಾರೆ.

ಎಂ.ಇ.ಆರ್, ಹವಾಮಾನ ಆಯವ್ಯಯ (1 ಹುದ್ದೆ), ಸಲಹೆಗಾರ - ಸಂವಹನ ಮತ್ತು ಪ್ರಚಾರ (1 ಹುದ್ದೆ) ಹುದ್ದೆಗಳಿಗೆ ಅರ್ಹರ ಆಯ್ಕೆಗಾಗಿ ಅರ್ಜಿ ಆಹ್ವಾನಿಸಲಾಗಿದೆ.

12 ತಿಂಗಳ ಈ ಹುದ್ದೆಗಳಿಗೆ ತಿಂಗಳಿಗೆ ₹50,000 ವೇತನ ನೀಡಲಾಗುವುದು. https://apps.bbmpgov.in/bcap/ ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ವಿವರವಾದ ಮಾಹಿತಿ ಮತ್ತು ಮಾರ್ಗಸೂಚಿಗಳು ಪೋರ್ಟಲ್ ನಲ್ಲಿ ಲಭ್ಯವಿವೆ. ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಏ. 30. ಆಯ್ಕೆಯಾದ ಅಭ್ಯರ್ಥಿಗಳು ಮೇ 15ರಿಂದ ಕೆಲಸ ಪ್ರಾರಂಭಿಸಬಹುದು. ಮಾಹಿತಿಗೆ bbmpclimateactioncell@gmail.comಗೆ ಮೇಲ್ ಮಾಡಬಹುದು.

ನ್ಯಾ. ದಿನೇಶ್ ಮಾಹೇಶ್ವರಿ ನೇಮಕ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ದಿನೇಶ್ ಮಾಹೇಶ್ವರಿ ಅವರನ್ನು ಕಾನೂನು ಆಯೋಗದ 23ನೇ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದು ಮಂಗಳವಾರ ಅಧಿಕಾರ ಸ್ವೀಕರಿಸಿದ್ದಾರೆ ಎಂದು ಕಾನೂನು ಸಚಿವಾಲಯ 'ಎಕ್ಸ್'ನಲ್ಲಿ ತಿಳಿಸಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮು.ಪ್ರವ್ಯ(ತಾ)/ಉ.ಪ್ರವ್ಯ(ಎಪಿಸಿಸಿ & ಪ್ರೊ)/ಕಾನಿಇಂ–ಪ್ರೊ/ಸ.ಕಾ.ನಿ.ಇಂ–1/2025–26/100–118 ದಿನಾಂಕ: 15.04.2025

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ (ಮರು ಟೆಂಡರ್–2ನೇ ಕರೆ)

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣೆ ಸಂಖ್ಯೆ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಮರು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆ / ಕಾಮಗಾರಿಯ ವಿವರ
ಕವಿಪ್ರನಿನಿ/2025–26/ಎಸ್‌ಎಸ್/ವರ್ಕ್_ಇಂಡೆಂಟ್2217
ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ, **ಕಾಮಗಾರಿ–ಎ:** ಚಾಮರಾಜನಗರ ಜಿಲ್ಲೆಯ ಮತ್ತು ತಾಲ್ಲೂಕಿನ **66/11ಕೆವಿ ಅತ್ತಿಗುಳಿಪುರ ಉಪಕೇಂದ್ರದಲ್ಲಿ** 1X8ಎಂವಿಎ, 66/11ಕೆವಿ ವಿದ್ಯುತ್ **ಪರಿವರ್ತಕ–1ನ್ನು** 1X20ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ–ಬಿ:** ಚಾಮರಾಜನಗರ ಜಿಲ್ಲೆಯ ಮತ್ತು ತಾಲ್ಲೂಕಿನ 66/11ಕೆವಿ **ಅತ್ತಿಗುಳಿಪುರ ಉಪಕೇಂದ್ರದಲ್ಲಿ** 1X8ಎಂವಿಎ, 66/11ಕೆವಿ ವಿದ್ಯುತ್ **ಪರಿವರ್ತಕ–2ನ್ನು** 1X20ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ–ಸಿ:** ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ **66/11ಕೆವಿ ರಾಮಾಪುರ ಉಪಕೇಂದ್ರದಲ್ಲಿ** 2X8ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನು 2X20ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ–ಡಿ:** ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ **66/11ಕೆವಿ ಬೊಮ್ಮಲಾಪುರ ಉಪಕೇಂದ್ರದಲ್ಲಿ** 1X6.3ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನು 1X20ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ–ಇ:** ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ **66/11ಕೆವಿ ಸಾತೇಗಾಲ ಉಪಕೇಂದ್ರದಲ್ಲಿ** 1X8ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನು 1X20ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿಗಳನ್ನು **ಭಾಗಶ: ಟರ್ನ್‌ಕೀ ಆಧಾರದ ಮೇಲೆ** ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸರಬರಾಜು (11ಕೆವಿ ಸ್ವಿಚ್‌ಗೇರ್ ಪೂರೈಕೆಯನ್ನು ಹೊರತುಪಡಿಸಿ) ಮತ್ತು ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸ್ಥಾಪನೆ (ಕಳಚಿಹಾಕುವಿಕೆ ಮತ್ತು ಸಿವಿಲ್ ಕಾಮಗಾರಿಯನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.

ಬಿಡ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ "ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ" ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ ದಿನಾಂಕ: **17.04.2025ರಂದು 15.00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ: **03.05.2025 15.00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ದುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ),
ಕವಿಪ್ರನಿನಿ, ನಿಗಮ ಕಚೇರಿ, 2ನೇ ಮಹಡಿ, ಕಾವೇರಿ ಭವನ,
ಬೆಂಗಳೂರು–560 009.

ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ನಂ.430, ಮೊದಲನೇ ಮಹಡಿ, ಅಣ್ಣ ಬಿಲ್ಡಿಂಗ್, ಹೆನ್ನಗಾರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560 099,

ದಿನಾಂಕ: 09.04.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಆನೇಕಲ್ ಯೋಜನಾ ಪ್ರಾಧಿಕಾರದಲ್ಲಿನ ಅಭಿಲೇಖಾಲಯಗಳನ್ನು ಸ್ಕ್ಯಾನಿಂಗ್ ಮತ್ತು ವಿದ್ಯುನ್ಮಾನೀಕರಣ (Digitalisation) ಮಾಡುವ ಸಂಬಂಧ ಸರ್ಕಾರದ ಮಾನ್ಯತೆ ಪಡೆದ ಅರ್ಹ ಸಂಸ್ಥೆಗಳಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ:**05.04.2025**ರಂದು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಆದರೆ, ತಾಂತ್ರಿಕ ಕಾರಣಗಳಿಂದಾಗಿ ಸದರಿ ದಿನದಂದು ಟೆಂಡರ್ ಅಪಲೋಡ್ ಮಾಡಿರುವುದಿಲ್ಲ. ಆದ್ದರಿಂದ ಟೆಂಡರ್ ಆಹ್ವಾನಿಸುವ ದಿನಾಂಕವನ್ನು ನಂತರದಲ್ಲಿ ತಿಳಿಸಲಾಗುವುದು.

ಸಹಿ/–
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

DIPR/CP/VCPL/ 220/2025-26

ಸಂಗೀತ ನಾಟಕ ಅಕಾಡೆಮಿ | Sangeet Natak Akademi

ರಾಷ್ಟ್ರೀಯ ಸಂಗೀತ, ನೃತ್ಯ ಮತ್ತು ನಾಟಕ ಅಕಾಡೆಮಿ
ರಬೀಂದ್ರ ಭವನ, 35 ಫಿರೋಜ್ ಶಹಾ ರಸ್ತೆ, ನವದೆಹಲಿ–110 001
ಫೋನ್:011–23386648, 23387246, 23387247, 23387248
ಇಮೇಲ್: mail@sangeetnatak.gov.in

ಕೇರಳದ ತಿರುವನಂತಪುರಂನ ಕುಟಿಯಾಟ್ಟಂ ಕೇಂದ್ರದಲ್ಲಿನ ಯೋಜನಾ ನಿರ್ದೇಶಕ ಹುದ್ದೆಯನ್ನು ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಂಗೀತ ನಾಟಕ ಅಕಾಡೆಮಿ, ಇದೊಂದು ಸ್ವಾಯತ್ತ ಸಂಸ್ಥೆಯಾಗಿದ್ದು, ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದಿಂದ ಅನುದಾನಿತ ಸಂಸ್ಥೆಯಾಗಿರುತ್ತದೆ ಮತ್ತು ಸದರಿ ಸಂಸ್ಥೆಯು ಇದೀಗ ಕೇರಳದ ತಿರುವನಂತಪುರಂನ ಕುಟಿಯಾಟ್ಟಂ ಕೇಂದ್ರದಲ್ಲಿನ ಯೋಜನಾ ನಿರ್ದೇಶಕ ಹುದ್ದೆಯನ್ನು ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಅರ್ಹ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಿರುತ್ತದೆ. ಆರಂಭಿಕವಾಗಿ ಸದರಿ ಹುದ್ದೆಯ ಅವಧಿ ಒಂದು ವರ್ಷವಾಗಿದ್ದು, ಮುಂದಿನ ದಿನಗಳಲ್ಲಿ ವರ್ಷದಿಂದ ವರ್ಷದ ಆಧಾರದ ಮೇರೆಗೆ ಈ ಅವಧಿಯನ್ನು ಗರಿಷ್ಠ 3 ವರ್ಷ ಕಾಲ ವಿಸ್ತರಿಸಬಹುದಾಗಿರುತ್ತದೆ. ಕುಟಿಯಾಟ್ಟಂ ಕೇಂದ್ರ, ಇದು ಸಂಗೀತ ನಾಟಕ ಅಕಾಡೆಮಿಯ (ಎಸ್‌ಎನ್‌ಎ), ನವದೆಹಲಿ ಇವರ ಒಂದು ಕೇಂದ್ರವಾಗಿರುತ್ತದೆ.

ಅರ್ಹತಾ ಮಾನದಂಡಗಳು ಎಂದರೆ., ಶೈಕ್ಷಣಿಕ ವಿದ್ಯಾರ್ಹತೆಗಳು, ಅನುಭವ, ಪ್ರಾಯ, ಸಂಭಾವನೆ ಮತ್ತು ಅರ್ಜಿ ನಮೂನೆ ಇತ್ಯಾದಿ ವಿವರಗಳಿಗಾಗಿ, ದಯವಿಟ್ಟು ನಮ್ಮ ವೆಬ್‌ಸೈಟ್‌ಗೆ (http://sangeetnatak.gov.in/sna) ಭೇಟಿ ಕೊಡಿ. ಸದರಿ ಜಾಹೀರಾತು ದಿನಾಂಕದಿಂದ 20 ದಿನಗಳ ಅವಧಿಯು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ.

ಯಾವುದೇ ಕಾರಣ ನೀಡದೆಯೆ ಯಾವುದೇ ಸಮಯದಲ್ಲಾದರೂ ಸರಿ, ಯಾವುದೇ / ಎಲ್ಲಾ ಅರ್ಜಿಗಳನ್ನು ತಿರಸ್ಕರಿಸುವ ಅಥವಾ ಸದರಿ ಪ್ರಕ್ರಿಯೆಗಳನ್ನು / ನೇಮಕಾತಿಯನ್ನು ರದ್ದುಪಡಿಸುವ ಹಕ್ಕನ್ನು ಅಕಾಡೆಮಿ ಕಾಯ್ದಿರಿಸಿಕೊಂಡಿರುತ್ತದೆ.

ಕಾರ್ಯದರ್ಶಿ
ಸಂಗೀತ ನಾಟಕ ಅಕಾಡೆಮಿ
ನವದೆಹಲಿ

CBC 09114/12/0001/2526

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

HOLY ANGEL'S High School, Hampinagar, Vijayanagar, Bengaluru-560104 Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2025-26 for Nursery, Primary, High-School, Computer Teacher & P.E.Teacher. STATE & ICSE Qualification: B.A./B.Sc., B.Ed, M.A./M.Sc., M.Ed, N.T.T. CP.Ed. Only English Medium Candidates need to apply

WANTED ENGLISH MEDIUM TRAINED LADY TEACHERS to Teach Nursery and Primary/ B.A., B.Ed to Teach Hindi for High School/ Computer Science Graduates, Salary with P.F and ESI facilities. Contact in person (10.00 am-3.00 pm on all working days) -Secretary, Deccan Educational Society®, No. 95, 3rd Cross, Srirampuram, Bengaluru- 560021 (Near Sampige Theater, Malleswaram).

REPUTED CBSE SCHOOL IN BASAVANAGUDI, BENGALURU
REQUIRES
Experienced Coordinator and Teachers for the Kindergarten section with NTT qualification.
Note: Attractive package commensurate with higher qualifications and experience.
Qualified Accountant with experience in school accounts
Apply within 7 days to:
Email: bloomfieldadm@gmail.com
Contact:
9900084476 , 9900084468

WANTED TRAINED and EXPERIENCED TEACHERS For B.Sc,(PCM) B.Ed., MATH'S and PHYSICS. K.R.L.S. PATEL RAMA REDDY ENGLISH HIGH SCHOOL, DOMLUR LAYOUT, BANGALORE-71. PHONE:25350421. krlsschools@gmail.com

CAMLIN HIGH SCHOOL, 4th Cross, Near 7th Main Bus Stop, Hampinagar, Bangalore-560104. CALL: 080-23301363 Require Teachers to Teach ENGLISH, SOCIAL, MATHS, DRAWING. email: camlinschool84@gmail.com Contact with Resume.

WANTED TEACHERS: Nursery, Primary and High School Classes for all the Subjects including Computer. 'SRI VIDYA KENDRA' Peenya 1st stage, Bangalore-58. 9900708182, 28398833, 41179155

HERITAGE PUBLIC SCHOOL Konanakunte requires HIGH SCHOOL TEACHERS for Maths Physics Chemistry Biology and Social PRIMARY TEACHERS for Maths EVS and English KG COORDINATOR and TEACHERS.Salary is not a constraint for deserving candidates Resume can be sent through WhatsApp or email Mob:.9901733776. Ph:080 26322111. Email: heritagepublicschoolkk@gmail.com

REQUIRED TRAINED Female graduates to teach Physics, Geography, English for High School and Computer science, English,Social science, Hindi in Primary. Contact: 7019800780.

GURUKULA INTERNATIONAL School Requires Nursery Teachers, English, Social, Maths, Science and Kannada Teachers for High School, 9th Cross, Near Magadi Road, Metro Station, Bangalore-23. 7829338292 9148660555

Accounts & Finance

SENIOR ACCOUNTANT Male/Female Candidate, 30-40 years, 2+ years experience in Accounting & HR. with degree Holder Required. Location: Near Avenue Road, Competitive Salary. Apply with resume to Email: admin@texofil.in WhatsApp: 9886522755

WANTED SENIOR ACCOUNTANT. 3-5 years experience. Graduate/ post-Graduate. Contact Gayathri Associates, Byrathi, Bangalore-77. Phone: 8453353646/ 6362872796/ 9448488536.

WANTED FEMALE Accounts Assistant (B.Com) with Computer knowledge for Kalyana Mantapan at Sarjapura contact: 9242140303

WANTED FEMALE Office Assistant Any Degree Knowing Tally Fluent In English, Kannada, Hindi, Location: Rajajinagar Contact: 9108458798

Walk-in

Bharatiya Vidya Bhavan Is looking out for:
1. MAINTENANCE ENGINEER To oversee the operations of Auditoriums & School Buildings including Maintenance & AMC contracts.
2. TECHNICAL ASSISTANT To manage independently Auditorium Stage Sound & Lighting and other equipments.
3. PROGRAM COORDINATOR To assist in planning, organizing and overseeing the execution of various programs.
Salary based on qualification and experience.
Send CV to prakashkamathbvb@gmail.com
OR **Walk-in Interview** on **23rd and 24th April 2025** Time: 11.30 am to 1.30 pm
Venue: **Bharatiya Vidya Bhavan** No.43, Race Course Road, Bengaluru.

Hospital & Medical Jobs

A Reputed Multi-Speciality Hospital in Jayanagar, Bengaluru.
Requires Experienced **PHARMACIST & PHARMA-AID** immediately.
Submit your resume to **bloomfieldadm@gmail.com**
Contact: **9900084468 / 9686507746** for more details.

Cook

WANTED FOR Resort in COORG 1].South Indian Cook 2].WAITER 3]Front office assistant 4].MEP Engineers. Good Package: 9945684950 gm@asterholidays.com

Drivers

WANTED IMMEDIATELY CAR DRIVER with SSLC from Bilekalli, Bannerghatta Road nearby places. Good Salary. Call: 99000-54462

Graphic Designers

WANTED MALE Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 9845579620

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Sites

Anjanapura

20'X30' BDA Site for sale in Anjanapura 5th 'G' Block ,for immediate registration 68L,Direct:9008716584

Industrial & Factory

Tumkur Road

SALE OR Built to Suit, 10 Acres Industrial Converted Land. Suitable for Industry/ Warehouse. 9141326819

AUTOMOTIVE

Four Wheelers Selling

Mahindra

SCHOOL VAN FOR SALE- MAHINDRA TOURISTER- 2008 Model, 18+1 seater in good running condition, Contact b/w 9.00 am to 5 pm. Mob: 7094390262/ 9535352147

BUSINESS

Business Offers

Finance

REQUIRED INVESTORS for a Bangalore based Investment Advisory Services firm. Minimum Investment 5 Lacs. Guaranteed Monthly ROI 15k. 100% Secured. Whatsapp: 9739122894.

PERSONAL

Change of Name

I, PRABHU A @ WILSON PRABHU, R/a #42, Velmurugapuram, Dr.TCM Royan Road, Chickpet, Bangalore-53, declare that both the names pertain to me and henceforth I shall be known as PRABHU. A, vide affidavit dated 09.04.2025 before notary L. Shankaranayana Bangalore.

CHANGE OF NAME
I, "THATAMANGALAM KRISHNAIYER SAROJA" alias "T.K SAROJA" D/o Krishna Iyer, aged about 81 years, R/o C-8, Aditya Nest, 13 Cross, 4 Main, Malleswaram, BLR-560003, do hereby declare that I have changed my name from "SAROJA EASWARAN"/ "SAROJA ESHWARAN"/ "T.K. SAROJA ESWARAN"/ "SAROJA TATHAMANGALAM KRISHNA IYER" to "THATAMANGALAM KRISHNAIYER SAROJA" vide affidavit # IN-KA02445115272081X dated 8/4/25 sworn to before Notary, V. RangaRamu #491, Bangalore.

CHANGE OF NAME
I, **Niranjan Nicholas .S** No. 14649441N, Rank: NK (Retd), Residing at 3/1/1, Bachammal Road, Cox Town, Fraser Town, Bengaluru-560005, have changed my Minor Daughter's name from **N. Sherlin Nicholas** to **N SHERLIN IMMACULATE** vide affidavit dated 11-04-2025 before notary S.I. Balaguru, Bengaluru.

CHANGE OF NAME
I, **Athekqa Banu** W/o Jaffar Sadiq, residing at # 6/1, M.V .Street, Near T V Tower, J.C. Nagar, Bengaluru-560006, have changed my name to **ATHEEQA BANU** W/o **MOHAMMED SADIQ** vide affidavit dated 15-04-2025, sworn before Notary Leela, Bengaluru.

I,FARUKALI, S/O Ahammadsab Chopadar residing at No.102 1st Cross B-Block Kanakanagar Near R.K.Palace R.T.Nagar Post Bengaluru-560032 have changed my name to FAROOK ALI CHOPADAR, vide affidavit dated:12-04-2025 before Notary SIVAKUMARA M N, Bengaluru

EDUCATIONAL

General

WANTED ENGLISH Speaking Female Warden PUC/Degree salary 20k with Food & Accommodation, Male Junior Administrator with 3years Experience Degree/Pg Salary 30k For Education Institute @ kengeri Age 30-40 years, Contact:63632 88544

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಹಳಿಯಲ್ಲಿ ದೋಷ: ಮೆಟ್ರೊ ಸಂಚಾರ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಲಕ್ಷ್ಮಿ ನಿಲ್ದಾಣದ ಬಳಿ ಹಳಿಯಲ್ಲಿ ದೋಷ ಕಂಡುಬಂದ ಕಾರಣ ಹಸಿರು ಮಾರ್ಗದಲ್ಲಿ ಮೆಟ್ರೊ ರೈಲುಗಳ ಸಂಚಾರದಲ್ಲಿ ಮಂಗಳವಾರ ಸಂಜೆ ಸ್ವಲ್ಪ ಹೊತ್ತು ವ್ಯತ್ಯಯ ಉಂಟಾಗಿತ್ತು.

ನಮ್ಮ ಮೆಟ್ರೊ

'ಹಳಿಯಲ್ಲಿ ದೋಷವಿರುವುದು ಕಂಡುಬಂದ ಕಾರಣ ತಕ್ಷಣ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಯಿತು. ಇದರಿಂದಾಗಿ ಸಂಜೆ 3.28ರಿಂದ 4.05ರವರೆಗೆ ಹಸಿರು ಮಾರ್ಗದಲ್ಲಿ ಮೆಟ್ರೊ ರೈಲುಗಳ ಸಂಚಾರ ಸ್ಥಗಿತಗೊಂಡಿತ್ತು' ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ ತಿಳಿಸಿದೆ.

ಬಿಎಂಆರ್‌ಸಿಎಲ್ ಪ್ರಯಾಣಿಕರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುತ್ತದೆ. ಈ ಕಾರಣಕ್ಕಾಗಿಯೇ ತ್ವರಿತವಾಗಿ ದುರಸ್ತಿ ಕೆಲಸವನ್ನು ಕೈಗೊಳ್ಳಲಾಯಿತು. ಸಂಜೆ 4.05ರ ಬಳಿಕ ಹಸಿರು ಮಾರ್ಗದಲ್ಲಿ ಮೆಟ್ರೊ ರೈಲುಗಳ ಸಂಚಾರ ಪುನರಾರಂಭವಾಯಿತು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಝಾಯೆದ್ ನೊಮನ್ ನೇಮಕ

ಬೆಂಗಳೂರು: ಕಾನ್ಫೆಡರೇಷನ್ ಆಫ್ ರಿಯಲ್ ಎಸ್ಟೇಟ್ ಡೆವಲಪರ್ಸ್ ಅಸೋಸಿಯೇಷನ್ಸ್ ಆಫ್ ಇಂಡಿಯಾದ (ಕ್ರೆಡೈ) ಬೆಂಗಳೂರು ಘಟಕದ ಅಧ್ಯಕ್ಷರಾಗಿ ಝಾಯೆದ್ ನೊಮನ್ ನೇಮಕವಾಗಿದ್ದಾರೆ.

ಕ್ರೆಡೈ ಬೆಂಗಳೂರು ಘಟಕದ ನೂತನ ಪದಾಧಿಕಾರಿಗಳಾಗಿ ನಿಯೋಜಿತ ಅಧ್ಯಕ್ಷ ಬಿಮಲ್ ಹೆಗ್ಡೆ(ಚಾರ್ಟರ್ಡ್ ಹೌಸಿಂಗ್ ವ್ಯವಸ್ಥಾಪಕ ನಿರ್ದೇಶಕರು), ಉಪಾಧ್ಯಕ್ಷ ಕರಣ್ ಆರ್. ಶೆಟ್ಟಿ(ಆರ್.ಜೆ. ಸಮೂಹದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ), ಕಾರ್ಯದರ್ಶಿ ನಿಶ್ಚಯ್ ಜೈಶಂಕರ್ (ಆದರ್ಶ್ ಸಮೂಹದ ಉಪ ವ್ಯವಸ್ಥಾಪಕ ನಿರ್ದೇಶಕರು), ಖಜಾಂಚಿ ಶಿವರಾಮ್ ಕುಮಾರ್ ಮಲಕಲ (ಹ್ಯಾಬಿಟ್ಯಾಟ್ ವೆಂಚರ್ಸ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕರು), ಜಂಟಿ ಕಾರ್ಯದರ್ಶಿ ಅಭಿಷೇಕ್ ಅಹುಜ (ಎಸ್ಸಿಮ್ ಸಮೂಹದ ನಿರ್ದೇಶಕರು) ಆಯ್ಕೆಯಾಗಿದ್ದಾರೆ.



ಝಾಯೆದ್ ನೊಮನ್

ಅರ್ಜಿ ಆಹ್ವಾನ

ಬೆಂಗಳೂರು: ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ 2025-26ನೇ ಸಾಲಿಗೆ ಜಿಲ್ಲಾ ಪ್ರಾಣಿ ದಯಾ ಸಂಘದ ಸಾಮಾನ್ಯ ಸದಸ್ಯತ್ವ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಏಪ್ರಿಲ್ 27ರೊಳಗೆ ಅರ್ಜಿಯನ್ನು ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 98450 45651, 99640 79166

PUBLIC NOTICE

Publics are hereby informed that my client **M/s. DS-Max Properties Pvt. Ltd.**, having its office at No. 1854, 17th Main, 30th 'B' Cross, HBR Layout, 1st Stage, 5th Block, Bengaluru- 43 and intend to enter into **Absolute Sale Deed** with Owner/s **Sri. G.Muniraju** s/o Late Gali Hanumaiah and family **Sri.Munichowdaiah** s/o Late Narasimhaiah and family in respect of converted land property bearing **Sy. No. 3**, which measuring **4 acre 15 guntas** and exclusive of **08 guntas** 'A' Kharab, out of **6 acre 28 guntas**, situated at **Ajjanahalli Village**, Tavareker Hobli, Bengaluru South Taluk, Bengaluru District and referred to as **"schedule property"** and bounded on **East by:** Land of Sy.No. 26, **West by:** Road & Land of Sy. No. 1 & 29, **North by:** Remaining Land of Sy.No.3, **South by:** Road & Land of Sy. No.29.

Any person or Any Promoters or Any Court claims having any asserting right, title, interest and claims to oppose for Absolute Sale Deed of property and further having any manner of right, title, claims etc., and may lodge their objections, claims over the property along with relevant papers in support of their claims, right to the below address within **10** days from the date of this notice, if any objections fails to comply, my client shall take further steps and shall be entering into Absolute Sale Deed of property.

LINGARAJ. S. NADAGOUDA., ADVOCATE
No.1854, 17th Main, 30th 'B' Cross, HBR Layout, 1st Stage, 5th Block, Bangalore - 560 043.
Mob : 96204 74780 , 94481 35970

ಲೈಂಗಿಕ ಕಿರುಕುಳ ಆರೋಪಿಯ ಸ್ಕೂಟರ್ ಜಪ್ತಿ

ಬೆಂಗಳೂರು: ಸುದ್ದಗುಂಟೆಪಾಳ್ಯದ ಭಾರತಿ ಲೇಔಟ್‌ನ ಒಂದನೇ ಕ್ರಾಸ್‌ನ ಅಡ್ಡರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಯುವತಿಗೆ ಲೈಂಗಿಕ ಕಿರುಕುಳ ನೀಡಿ ಪರಾರಿಯಾಗಿದ್ದ ಆರೋಪಿ, ತಿಲಕ್‌ನಗರದ ನಿವಾಸಿ ಸಂತೋಷ್ ಡೇನಿಯಲ್(26) ಎಂಬಾತನನ್ನು ಕಸ್ಟಡಿಗೆ ಪಡೆದುಕೊಂಡಿರುವ ಪೊಲೀಸರು, ಮಂಗಳವಾರ ವಿಚಾರಣೆಗೆ ಒಳಪಡಿಸಿದರು.

‘ಸಂತೋಷ್ ತಮಿಳುನಾಡಿಗೆ ಪರಾರಿ ಆಗುವುದಕ್ಕೂ ಮೊದಲು ಹೊಸೂರಿನ ನಿರ್ಜನ ಪ್ರದೇಶದಲ್ಲಿ ಸ್ಕೂಟರ್ ನಿಲುಗಡೆ ಮಾಡಿದ್ದ. ಅಲ್ಲಿಂದ ಸ್ಕೂಟರ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಏಪ್ರಿಲ್ 3ರಂದು ಆರೋಪಿ ತನ್ನ ಸ್ನೇಹಿತನ ಜತೆಗೆ ಪಾರ್ಟಿಗೆ ತೆರಳಿದ್ದ. ಪಾರ್ಟಿ ಮುಗಿಸಿಕೊಂಡು ತಿಲಕ್‌ನಗರದಲ್ಲಿ ಇರುವ ಮನೆಗೆ ತೆರಳಲು ಸ್ಕೂಟರ್‌ನಲ್ಲಿ ಬರುತ್ತಿದ್ದ. ಅದೇ ಮಾರ್ಗದಲ್ಲಿ ಸ್ನೇಹಿತೆಯ ಜತೆಗೆ ತೆರಳುತ್ತಿದ್ದ ಯುವತಿಯನ್ನು ಹಿಂಬಾಲಿಸಿ, ಲೈಂಗಿಕ ಕಿರುಕುಳ ನೀಡಿ ಪರಾರಿಯಾಗಿದ್ದ’ ಎಂದು ಪೊಲೀಸರು ಹೇಳಿದರು.

ಎಂಜಿನಿಯರ್, ವಿದೇಶಿ ಪ್ರಜೆ ಸೇರಿ ಹತ್ತು ಆರೋಪಿಗಳ ಸೆರೆ • ಸಿಸಿಬಿ ಕಾರ್ಯಾಚರಣೆ

₹7 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ


ಜಿಜೊ ಪ್ರಸಾದ್


ಕ್ರಿಸ್ಟಿನ್

ಬೆಂಗಳೂರು: ಇಲ್ಲಿನ ಎಲೆಕ್ಟ್ರಾನಿಕ್ ಸಿಟಿಯ ಎರಡನೇ ಹಂತ, ಬೇಗೂರು ಹಾಗೂ ಯಲಹಂಕ ನ್ಯೂ ಟೌನ್‌ನಲ್ಲಿ ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಆರೋಪಿಗಳಿಂದ ₹7 ಕೋಟಿ ಮೌಲ್ಯದ ವಿವಿಧ ಮಾದರಿಯ ಮಾದಕ ವಸ್ತುಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ.

ಕಾಲೇಜು ವಿದ್ಯಾರ್ಥಿಗಳು, ಪೇಯಿಂಗ್ ಗೆಸ್ಟ್ ನಿವಾಸಿಗಳು ಹಾಗೂ ಸಾಫ್ಟ್‌ವೇರ್ ಎಂಜಿನಿಯರ್‌ಗಳಿಗೆ ಡ್ರಗ್ಸ್ ಪೂರೈಸುತ್ತಿದ್ದ ಆರೋಪದ ಮೇರೆಗೆ ಸಾಫ್ಟ್‌ವೇರ್ ಎಂಜಿನಿಯರ್, ವಿದೇಶಿ ಪೆಡ್ಲರ್‌ಗಳೂ ಸೇರಿ ಹತ್ತು ಮಂದಿಯನ್ನು ಬಂಧಿಸಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿ ಎರಡನೇ ಹಂತದ ಡಿ ಮಾರ್ಟ್ ಹಿಂಭಾಗ ಗಾಂಜಾ ಮಾರಾಟ ಮಾಡುತ್ತಿದ್ದ ಕೇರಳದ ಸಾಫ್ಟ್‌ವೇರ್ ಎಂಜಿನಿಯರ್ ಜಿಜೊ ಪ್ರಸಾದ್(25) ಎಂಬಾತನನ್ನು ಬಂಧಿಸಲಾಗಿದೆ. ಈತನ ಸ್ನೇಹಿತ ಪರಾರಿ ಆಗಿದ್ದು, ಶೋಧ ಕಾರ್ಯ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಆರೋಪಿಯಿಂದ 3 ಕೆ.ಜಿ 554 ಗ್ರಾಂ. ಹೈಡ್ರೊಪೋನಿಕ್ ಗಾಂಜಾ, ₹26 ಲಕ್ಷ ನಗದು, ಒಂದು ಮೊಬೈಲ್ ಜಪ್ತಿ ಮಾಡಲಾಗಿದೆ. ಇವುಗಳ ಒಟ್ಟು ಮೌಲ್ಯ ₹4.52 ಕೋಟಿಯೆಂದು ಅಂದಾಜಿಸಲಾಗಿದೆ.


ವಶಕ್ಕೆ ಪಡೆದ ಡ್ರಗ್ಸ್

ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ವಶಕ್ಕೆ ಪಡೆದು, ಬಂಧಿಸಲಾಯಿತು. ಆರೋಪಿಯನ್ನು ಹೆಚ್ಚಿನ ವಿಚಾರಣೆಗಾಗಿ ಮೂರು ದಿನ ಕಸ್ಟಡಿಗೆ ಪಡೆಯಲಾಗಿದೆ. ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ಬೊಮ್ಮಸಂದ್ರದ ಅಪಾರ್ಟ್‌ಮೆಂಟ್‌ವೊಂದರಲ್ಲಿ ವಾಸವಿದ್ದ ಆರೋಪಿ, ಕೇರಳದಲ್ಲಿ ಹೈಡ್ರೊಪೋನಿಕ್ ಗಾಂಜಾವನ್ನು ಕಡಿಮೆ ಬೆಲೆಗೆ ಖರೀದಿಸಿ, ನಗರಕ್ಕೆ ತರುತ್ತಿದ್ದ. ನಗರದಲ್ಲಿ ಸ್ನೇಹಿತನೊಂದಿಗೆ ಎಲೆಕ್ಟ್ರಾನಿಕ್ ಸಿಟಿ, ಬೊಮ್ಮಸಂದ್ರ ಸೇರಿ ಹಲವು ಕಡೆಗಳಲ್ಲಿ ಮಾರುತ್ತಿದ್ದ’ ಎಂದು ತನಿಖಾಧಿಕಾರಿಯೊಬ್ಬರು ತಿಳಿಸಿದರು.

ಒಂದು ಗ್ರಾಂಗೆ ₹12 ಸಾವಿರ: ‘ಯಾರಿಗೂ ಅನುಮಾನ ಬಾರದಂತೆ ಎರಡು ಪದರದ ಪ್ಲಾಸ್ಟಿಕ್ ಕವರ್‌ನಲ್ಲಿ ತಲಾ 10 ಗ್ರಾಂ.ನಂತೆ ಡ್ರಗ್ಸ್‌ನ ಪೊಟ್ಟಣ ಮಾಡಿ, ಬ್ಯಾಗ್‌ನಲ್ಲಿ ಇಟ್ಟುಕೊಂಡು ಮಾರಾಟ ಮಾಡಲಾಗುತ್ತಿತ್ತು. ಒಂದು ಗ್ರಾಂಗೆ ₹12 ಸಾವಿರ ಪಡೆಯುತ್ತಿದ್ದರು’ ಎಂದು ಪೊಲೀಸರು ಮಾಹಿತಿ ನೀಡಿದರು.

₹2 ಕೋಟಿ ಮೌಲ್ಯದ ವಸ್ತು ಜಪ್ತಿ: ಬೇಗೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಡ್ರಗ್ಸ್ ಪೆಡ್ಲಿಂಗ್ ಮಾಡುತ್ತಿದ್ದ ವಿದೇಶಿ ಪ್ರಜೆ ಕ್ರಿಸ್ಟಿನ್ ಸೊಪುರುಚುಕ್ವು ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಬಂಧಿತನಿಂದ ಒಂದು ಕೆ.ಜಿ ಎಂಡಿಎಂಎ ಕ್ರಿಸ್ಟಲ್, ಮೊಬೈಲ್, ದ್ವಿಚಕ್ರ ವಾಹನವನ್ನು ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹2 ಕೋಟಿ ಎಂದು ಅಂದಾಜಿಸಲಾಗಿದೆ.

2012ರಲ್ಲಿ ವಾಣಿಜ್ಯ ವೀಸಾ ಪಡೆದು ಭಾರತಕ್ಕೆ ಬಂದಿದ್ದ ಆರೋಪಿ, ಮೋಜಿನ ಜೀವನಕ್ಕಾಗಿ ಎಂಡಿಎಂಎ ಮಾರಾಟದಲ್ಲಿ ತೊಡಗಿದ್ದ. ಒಂದು ಗ್ರಾಂ. ಡ್ರಗ್ಸ್ ಅನ್ನು ₹20 ಸಾವಿರಕ್ಕೆ ಮಾರಾಟ ಮಾಡುತ್ತಿದ್ದ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಆರೋಪಿಯು ನಕಲಿ ದಾಖಲೆ ಸೃಷ್ಟಿಸಿಕೊಂಡು ಭಾರತದಲ್ಲಿ ಅಕ್ರಮವಾಗಿ ನೆಲಸಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಈ ಕುರಿತು ವಿದೇಶಿಯರ ಪ್ರಾದೇಶಿಕ ನೋಂದಣಿ ಕೇಂದ್ರಕ್ಕೆ(ಎಫ್‌ಆರ್‌ಆರ್‌ಒ) ಪತ್ರ ಬರೆಯಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಎಂಟು ಮಂದಿ ಡ್ರಗ್ಸ್ ಪೆಡ್ಲರ್ಸ್ ವಶಕ್ಕೆ

ಯಲಹಂಕ ನ್ಯೂಟೌನ್ ಪೊಲೀಸ್ ಠಾಣಾ ವ್ಯಾಪ್ತಿಯ ಅಟ್ಟೂರು ಲೇಔಟ್‌ನಲ್ಲಿ ಲಾಡ್ಜ್ ಮೇಲೆ ದಾಳಿ ನಡೆಸಿದ ಪೊಲೀಸರು, ಡ್ರಗ್ಸ್ ಮಾರಾಟ ಮಾಡುತ್ತಿದ್ದ ಕೇರಳದ ಎಂಟು ಡ್ರಗ್ಸ್ ಪೆಡ್ಲರ್‌ಗಳನ್ನು ಬಂಧಿಸಿದ್ದಾರೆ.

ಆರೋಪಿಗಳಿಂದ 110 ಗ್ರಾಂ. ಎಂಡಿಎಂಎ ಕ್ರಿಸ್ಟಲ್, 10 ಮೊಬೈಲ್ ಫೋನ್, ಒಂದು ಟ್ಯಾಬ್ ಹಾಗೂ ಕೃತ್ಯಕ್ಕೆ ಉಪಯೋಗಿಸುತ್ತಿದ್ದ ಎರಡು ಕಾರುಗಳನ್ನು ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹27 ಲಕ್ಷ ಎಂದು ಅಂದಾಜಿಸಲಾಗಿದೆ. ಕೇರಳದಿಂದ ಬಂದು ಲಾಡ್ಜ್‌ನಲ್ಲಿ ವಾಸ್ತವ್ಯ ಮಾಡಿಕೊಂಡು ಡ್ರಗ್ಸ್ ಮಾರಾಟ ಮಾಡುತ್ತಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಲಾಗಿತ್ತು ಎಂದು ಪೊಲೀಸರು ಹೇಳಿದರು.

‘ಆರೋಪಿಗಳು ಕೆಲಸ ಅರಸಿ ಬೆಂಗಳೂರಿಗೆ ಬಂದಿದ್ದರು. ಮೋಜಿನ ಜೀವನ ಹಾಗೂ ಕಡಿಮೆ ಅವಧಿಯಲ್ಲಿ ಹೆಚ್ಚಿನ ಹಣ ಸಂಪಾದಿಸಲು ಬೆಂಗಳೂರಿನಲ್ಲಿ ನೆಲಸಿರುವ ವಿದೇಶಿ ಡ್ರಗ್ಸ್ ಪೆಡ್ಲರ್‌ಗಳಿಂದ ಕಡಿಮೆ ಬೆಲೆಗೆ ಎಂಡಿಎಂಎ ಕ್ರಿಸ್ಟಲ್ ಖರೀದಿಸಿ ಅದನ್ನು ಹೆಚ್ಚಿನ ಬೆಲೆಗೆ ಕಾಲೇಜು ವಿದ್ಯಾರ್ಥಿಗಳು, ಐ.ಟಿ–ಬಿ.ಟಿ ಉದ್ಯೋಗಿಗಳಿಗೆ ಮಾರಾಟ ಮಾಡುತ್ತಿದ್ದರು. ಒಂದು ಗ್ರಾಂ. ಡ್ರಗ್ಸ್‌ಗೆ ₹ 15ರಿಂದ ₹20 ಸಾವಿರ ತೆಗೆದುಕೊಳ್ಳುತ್ತಿದ್ದರು’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.


ಯುವತಿಯ ಚಿನ್ನದ ಸರ ಕಸಿದು ಪರಾರಿಯಾಗಿದ್ದ ಆರೋಪಿ ಸೆರೆ

ಬೆಂಗಳೂರು: ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಯುವತಿಯ ಚಿನ್ನದ ಸರ ಕಳ್ಳತನ ಮಾಡಿ ಪರಾರಿಯಾಗಿದ್ದ ಆರೋಪಿ, ಆಂಧ್ರಪ್ರದೇಶದ ಮುನೀರ್ ಬಾಷಾ(23) ಎಂಬಾತನನ್ನು ಯಲಹಂಕ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ ₹1.20 ಲಕ್ಷ ಮೌಲ್ಯದ 15 ಗ್ರಾಂ. ತೂಕದ ಚಿನ್ನದ ಸರ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

‘ಶಾಪಿಂಗ್‌ಗೆ ತೆರಳಿದ್ದ ಯುವತಿ ಕಟ್ಟಿಗೇನಹಳ್ಳಿಯ ಪೇಯಿಂಗ್ ಗೆಸ್ಟ್‌ಗೆ(ಪಿ.ಜಿ) ವಾಪಸ್ ಹೋಗುತ್ತಿದ್ದರು. ಆಗ ಎದುರಿನಿಂದ ಬಂದಿದ್ದ ಆರೋಪಿ, ಯುವತಿಯ ಕುತ್ತಿಗೆಗೆ ಕೈಹಾಕಿ ಸರ ಕಸಿದುಕೊಂಡು ಪರಾರಿಯಾಗಿದ್ದ’ ಎಂದು ಪೊಲೀಸರು ಹೇಳಿದರು.

‘ಬಾತ್ಮೀದಾರರು ನೀಡಿದ ಖಚಿತ ಮಾಹಿತಿ ಆಧರಿಸಿ ಕಟ್ಟಿಗೇನಹಳ್ಳಿ ಮುಖ್ಯ ರಸ್ತೆಯಲ್ಲಿ ವ್ಯಕ್ತಿಯನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದಾಗ ಸರ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ’ ಎಂದು ಮೂಲಗಳು ತಿಳಿಸಿವೆ.



‘ಕದ್ದ ಚಿನ್ನದ ಸರವನ್ನು ಆರೋಪಿ ಆಂಧ್ರಪ್ರದೇಶದ ಮದನಪಲ್ಲಿಯ ಗಿರವಿ ಅಂಗಡಿಯಲ್ಲಿ ಅಡಮಾನ ಇಟ್ಟಿದ್ದ. ಅಲ್ಲಿಂದ ಚಿನ್ನವನ್ನು ಜಪ್ತಿ ಮಾಡಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಆಭರಣ ಕಳವು: ನಾಲ್ವರ ಸೆರೆ

ಬೆಂಗಳೂರು: ನಾಲ್ಕು ಪ್ರತ್ಯೇಕ ಪ್ರಕರಣಗಳಲ್ಲಿ ನಂಬಿಕೆ ದ್ರೋಹ ಮತ್ತು ಮೋಸ ಮಾಡಿ ಚಿನ್ನಾಭರಣ ಮತ್ತು ಬೆಳ್ಳಿಯ ಆಭರಣಗಳನ್ನು ಕಳ್ಳತನ ಮಾಡಿದ್ದ ನಾಲ್ವರು ಆರೋಪಿಗಳನ್ನು ಹಲಸೂರು ಗೇಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಪಶ್ಚಿಮ ಬಂಗಾಳದ ತಸ್ಲಿಂ ಆರೀಫ್ ಮೊಲ್ಲಾ, ಆತನ ಪುತ್ರ ಎಂ.ಡಿ. ಸಮೀವುಲ್ಲಾ ಸೇರಿ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ದೂರುದಾರ ಹುಸೇನ್ ಅಲಿ ಶೇಖ್ ಅವರು ನಗರ್ತಪೇಟೆಯಲ್ಲಿ ಆಲ್ಫಿ ಕಾತೂನ್ ಹೆಸರಿನ ಚಿನ್ನಾಭರಣ ಅಂಗಡಿ ನಡೆಸುತ್ತಿದ್ದಾರೆ. ಅವರ ಅಂಗಡಿಯಲ್ಲಿ ಆರೋಪಿಗಳಾದ ತಸ್ಲಿಂ ಆರೀಫ್ ಮೊಲ್ಲಾ ಹಾಗೂ ಎಂ.ಡಿ.ಸಮೀವುಲ್ಲಾ ಅವರು ಕೆಲಸ ಮಾಡುತ್ತಿದ್ದರು. ಮಾಲೀಕರು ತಂದುಕೊಡುತ್ತಿದ್ದ ಚಿನ್ನದ ಗಟ್ಟಿಯನ್ನು ಬಳಸಿ ಆಭರಣ ತಯಾರಿಸಿ ಕೊಡುತ್ತಿದ್ದರು. ಜನವರಿ 2ರಿಂದ 7ರವರೆಗೆ ಮಾಲೀಕರು 257 ಗ್ರಾಂ. ಚಿನ್ನದ ಗಟ್ಟಿಯನ್ನು ತಂದುಕೊಟ್ಟು ಆಭರಣ ತಯಾರಿಸಿಕೊಡುವಂತೆ ಸೂಚಿಸಿದ್ದರು. ಆದರೆ, ಆರೋಪಿಗಳನ್ನು ಚಿನ್ನದ ಗಟ್ಟಿಯಿಂದ ಆಭರಣ ತಯಾರಿಸಿಕೊಡದೇ ತಮ್ಮ ರಾಜ್ಯಕ್ಕೆ ಪರಾರಿ ಆಗಿದ್ದರು’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು. ಪಶ್ಚಿಮ ಬಂಗಾಳದ ಬರ್ಧಮಾನ್‌ನಲ್ಲಿ ಆರೋಪಿಗಳನ್ನು ವಶಕ್ಕೆ ಪಡೆದು ನಗರಕ್ಕೆ ಕರೆತರಲಾಯಿತು’ ಎಂದು ಪೊಲೀಸರು ಹೇಳಿದರು.

ನಗರ್ತಪೇಟೆಯಲ್ಲಿ ನಿಲುಗಡೆ ಮಾಡಿದ್ದ ಬೈಕ್‌ನಲ್ಲಿ ಇಟ್ಟಿದ್ದ ಚಿನ್ನದ ಗಟ್ಟಿಯನ್ನು ಕಳ್ಳತನ ಮಾಡಿದ್ದ ಮತ್ತಿಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಚಿನ್ನ ಕಳ್ಳ ಸಾಗಣೆ ಪ್ರಕರಣ: ಸಾಹಿಲ್ ಜಾಮೀನು ಅರ್ಜಿ ತಿರಸ್ಕೃತ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಚಿನ್ನ ಕಳ್ಳ ಸಾಗಣೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಬಳ್ಳಾರಿಯ ಚಿನ್ನದ ವ್ಯಾಪಾರಿ ಸಾಹಿಲ್ ಜೈನ್ ಅವರು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಾಲಯವು ತಿರಸ್ಕರಿಸಿದೆ.

ವಿಚಾರಣೆ ನಡೆಸಿದ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ವಿಶ್ವನಾಥ್ ಚನ್ನಬಸಪ್ಪ ಗೌಡರ್, ಪ್ರಕರಣದ ಮೂರನೇ ಆರೋಪಿಯು ಬಿಎನ್‌ಎಸ್ ಸೆಕ್ಷನ್ 480 ಅಡಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ತಿರಸ್ಕರಿಸಿದರು.

ಡಿಆರ್‌ಐ ಪರ ವಾದ ಮಂಡಿಸಿದ ವಕೀಲರು, ಜಾಮೀನು ಅರ್ಜಿಗೆ ಆಕ್ಷೇಪಣೆ ಸಲ್ಲಿಸಿದ್ದು, ಸಾಹಿಲ್ ಜೈನ್‌ಗೆ ಜಾಮೀನು ನೀಡಬಾರದು ಎಂದು ಕೋರಿದ್ದರು. ಆದೇಶವನ್ನು ಮಂಗಳವಾರ ಪ್ರಕಟಿಸುವುದಾಗಿ ನ್ಯಾಯಾಧೀಶರು ಹೇಳಿದ್ದರು.

‘ಜನವರಿ ಮತ್ತು ಫೆಬ್ರುವರಿಯಲ್ಲಿ ಕ್ರಮವಾಗಿ ₹11 ಕೋಟಿ ಮತ್ತು ₹11.25 ಕೋಟಿಗಳನ್ನು ಹವಾಲಾ ಮಾರ್ಗದ ಮೂಲಕ ದುಬೈಗೆ ವರ್ಗಾಯಿಸಲು ಹಾಗೂ ₹40.13 ಕೋಟಿ ಮೌಲ್ಯದ 49 ಕೆ.ಜಿ. ಚಿನ್ನವನ್ನು ವಿಲೇವಾರಿ ಮಾಡಲು ರನ್ಯಾಗೆ ಜೈನ್ ಸಹಾಯ ಮಾಡಿದ್ದಾರೆ. ಪ್ರತಿ ವಹಿವಾಟಿಗೆ ₹55 ಸಾವಿರ ಕಮಿಷನ್ ರೂಪದಲ್ಲಿ ಪಡೆದಿದ್ದಾರೆ’ ಎಂದು ಡಿಆರ್‌ಐ ಆರೋಪಿಸಿದೆ.

ದುಬೈನಿಂದ ಚಿನ್ನ ಕಳ್ಳ ಸಾಗಣೆ ಮಾಡಿದ್ದ ಆರೋಪದ ಅಡಿ ನಟಿ ರನ್ಯಾ ರಾವ್ ಅವರನ್ನು ರೆವಿನ್ಯೂ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು ಬಂಧಿಸಿದ್ದರು. ರನ್ಯಾ ಅವರು ತಂದಿದ್ದ ಚಿನ್ನವನ್ನು ಖರೀದಿಸಿದ ಆರೋಪದಡಿ ಸಾಹಿಲ್ ಅವರನ್ನು ಬಂಧಿಸಿದ್ದ ಡಿಆರ್‌ಐ ಅಧಿಕಾರಿಗಳು, ಹೆಚ್ಚಿನ ವಿಚಾರಣೆಗಾಗಿ ತಮ್ಮ ಕಸ್ಟಡಿಗೆ ಪಡೆದುಕೊಂಡಿದ್ದರು.

ರನ್ಯಾ ಹೇಳಿಕೆ ಪಡೆಯಲು ಕೋರ್ಟ್‌ಗೆ ಅರ್ಜಿ

ಪ್ರಸ್ತುತ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ರನ್ಯಾ ರಾವ್ ಅವರ ಹೇಳಿಕೆಯನ್ನು ಏಪ್ರಿಲ್ 18 ಮತ್ತು 19ರಂದು ಪಡೆಯಲು ಅನುಮತಿ ಕೋರಿ ಡಿಆರ್‌ಐ ಪರ ವಕೀಲರು ವಿಶೇಷ ನ್ಯಾಯಾಲಯಕ್ಕೆ ಹೊಸದಾಗಿ ಅರ್ಜಿ ಸಲ್ಲಿಸಿದರು. ಆಕ್ಷೇಪಣೆ ಸಲ್ಲಿಸುವಂತೆ ರನ್ಯಾ ಪರ ವಕೀಲರಿಗೆ ಸೂಚಿಸಿದ ನ್ಯಾಯಾಲಯ, ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿದೆ.

₹6 ಲಕ್ಷ ಮೌಲ್ಯದ 87 ಗ್ರಾಂ. ಚಿನ್ನಾಭರಣ ಜಪ್ತಿ

ಸರಗಳ್ಳತನ: ಅಂತರರಾಜ್ಯ ಕಳ್ಳರ ಬಂಧನ

ಪ್ರಜಾವಾಣಿ ವಾರ್ತೆ


ತನ್ವೀರ್


ಶಾಹಿದ್


ಅಲಿನಕ್ಕಿ


ಶಬ್ಬೀರ್

ಬೆಂಗಳೂರು: ಮಹಾರಾಷ್ಟ್ರದಿಂದ ನಗರಕ್ಕೆ ಬಂದು ಸರಗಳ್ಳತನ ಮಾಡುತ್ತಿದ್ದ ನಾಲ್ವರು ಅಂತರ ರಾಜ್ಯ ಕಳ್ಳರನ್ನು ಜೆ.ಸಿ. ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಶಾಹಿದ್ ಅಲಿ(34), ಶಬ್ಬೀರ್ ಅಲಿ (39), ತನ್ವೀರ್ ಹುಸೇನ್ (37) ಹಾಗೂ ಅಲಿನಕ್ಕಿ (21) ಬಂಧಿತರು. ಬಂಧಿತರಿಂದ 87 ಗ್ರಾಂ. ಚಿನ್ನಾಭರಣ ಜಪ್ತಿ ಮಾಡಿಕೊಳ್ಳಲಾಗಿದೆ. ಇದರ ಮೌಲ್ಯ ₹6 ಲಕ್ಷ ಎಂದು ಅಂದಾಜಿಸಲಾಗಿದೆ.

ಠಾಣಾ ವ್ಯಾಪ್ತಿಯ ಜಯಮಹಲ್ ರಸ್ತೆಯ ನಿವಾಸಿ ಖುರ್ಷಿದಾ ಬಾನು ಅವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ, ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದರು.

‘ಖುರ್ಷಿದಾ ಬಾನು ಅವರು ಮನೆಯ ಎದುರಿನ ರಸ್ತೆಯಲ್ಲಿ ವಾಯು ವಿಹಾರಕ್ಕೆ ತೆರಳಿದ್ದರು. ಹೆಲ್ಮೆಟ್ ಹಾಕಿಕೊಂಡು ಬೈಕ್‌ನಲ್ಲಿ ಬಂದಿದ್ದ ಇಬ್ಬರು ಆರೋಪಿಗಳು, ದೂರುದಾರರ ಕೊರಳಿನಲ್ಲಿದ್ದ 15 ಗ್ರಾಂ. ತೂಕದ ಚಿನ್ನದ ಸರವನ್ನು ಕಸಿದುಕೊಂಡು ಪರಾರಿ ಆಗಿದ್ದರು. ಇಬ್ಬರು ಆರೋಪಿಗಳನ್ನು ಮೈಸೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ವಶಕ್ಕೆ ಪಡೆದುಕೊಳ್ಳಲಾಯಿತು. ಅವರು ನೀಡಿದ ಮಾಹಿತಿ ಆಧರಿಸಿ ಬೆಂಗಳೂರಿನಲ್ಲಿ ಮತ್ತಿಬ್ಬರನ್ನು ವಶಕ್ಕೆ ಪಡೆದು ಬಂಧಿಸಲಾಯಿತು’ ಎಂದು ಪೊಲೀಸರು ಹೇಳಿದರು.

‘ನಾಲ್ವರು ಆರೋಪಿಗಳನ್ನು 14 ದಿನ ಕಸ್ಟಡಿಗೆ ಪಡೆದುಕೊಂಡು ವಿಚಾರಣೆ ನಡೆಸಲಾಗುತ್ತಿದೆ. ಮಹಾರಾಷ್ಟ್ರದ ನಾಗಪುರದಲ್ಲಿನ ಚಿನ್ನಾಭರಣ ಅಂಗಡಿಗೆ ಮಾರಾಟ ಮಾಡಿದ್ದ 87 ಗ್ರಾಂ. ಚಿನ್ನಾಭರಣವನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಆರೋಪಿಗಳ ಬಂಧನದಿಂದ ಅಶೋಕನಗರ, ಸದಾಶಿವನಗರ, ಜೆ.ಸಿ. ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಸರ ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ. ಮೊದಲ ಆರೋಪಿ ಶಾಹಿದ್ ವಿರುದ್ಧ ಮಹಾರಾಷ್ಟ್ರದ ವಿವಿಧ ಠಾಣೆಗಳಲ್ಲಿ ಎಂಟು ಪ್ರಕರಣಗಳು ದಾಖಲಾಗಿವೆ’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಬಾಡಿಗೆ ಬೈಕ್‌ನಲ್ಲಿ ಸುತ್ತಾಟ: ಸರ ಕಳವು


ನಿತಿನ್


ಪ್ರಭು

ಬೆಂಗಳೂರು: ಸರಗಳ್ಳತನ ಮಾಡುತ್ತಿದ್ದ ಭದ್ರಾವತಿಯ ಪ್ರಭು (22) ಹಾಗೂ ಬೆಂಗಳೂರಿನ ಉತ್ತರಹಳ್ಳಿಯ ನಿತಿನ್ (24) ಎಂಬುವವರನ್ನು ಕೋಣನಕುಂಟೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ

ಬಂಧಿತರಿಂದ 38 ಗ್ರಾಂ. ತೂಕದ ಚಿನ್ನದ ಸರ ಹಾಗೂ ಒಂದು ಬೈಕ್ ಅನ್ನು ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹ 2.50 ಲಕ್ಷ ಎಂದು ಅಂದಾಜಿಸಲಾಗಿದೆ.

ವೆಂಕಟೇಶ್ವರ ಲೇಔಟ್‌ನಲ್ಲಿ ನೆಲಸಿದ್ದ ದೂರುದಾರರು ಬಿ.ಕೆ. ವೃತ್ತದಲ್ಲಿ ನಡೆದು ಹೋಗುತ್ತಿದ್ದರು. ಅವರ ಕೊರಳಿನಲ್ಲಿದ್ದ 30 ಗ್ರಾಂ. ತೂಕದ ಚಿನ್ನದ ಸರವನ್ನು ಕಸಿದುಕೊಂಡು ಆರೋಪಿಗಳು ಪರಾರಿಯಾಗಿದ್ದರು. ಗೌಡನಪಾಳ್ಯದ ಮಂಜುನಾಥ್ ನಗರದಲ್ಲಿ ನೆಲಸಿದ್ದ ಇಬ್ಬರನ್ನೂ ವಶಕ್ಕೆ ಪಡೆದು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಆರೋಪಿಗಳು ಬಾಡಿಗೆಗೆ ಬೈಕ್ ಪಡೆದುಕೊಂಡು ನಗರದ ವಿವಿಧೆಡೆ ಸುತ್ತಾಟ ನಡೆಸುತ್ತಿದ್ದರು. ರಸ್ತೆಯಲ್ಲಿ ಒಂಟಿಯಾಗಿ ನಡೆದು ಹೋಗುತ್ತಿದ್ದ ಮಹಿಳೆಯರ ಕೊರಳಿನಲ್ಲಿದ್ದ ಚಿನ್ನದ ಸರವನ್ನು ಕಳ್ಳತನ ಮಾಡಿಕೊಂಡು ಪರಾರಿ ಆಗುತ್ತಿದ್ದರು. ಆರೋಪಿಗಳಿಗೆ ಬಾಡಿಗೆಗೆ ಬೈಕ್ ನೀಡಿದ್ದ ಅಂಗಡಿ ಮಾಲೀಕನಿಗೆ ನೋಟಿಸ್ ಜಾರಿ ಮಾಡಲಾಗಿದೆ. ಕಳ್ಳತನ ಮಾಡಿದ್ದ ಚಿನ್ನವನ್ನು ಆರೋಪಿಗಳು ಫೈನಾನ್ಸ್ ಸಂಸ್ಥೆಯಲ್ಲಿ ಅಡಮಾನ ಇಟ್ಟಿದ್ದರು. ಅಲ್ಲಿಂದ ಚಿನ್ನವನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಬೆಂಗಳೂರು ಅರಮನೆ ಮೈದಾನ ನಿಯಂತ್ರಣ ಮಸೂದೆಗೆ ಅಂಕಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು:ಬೆಂಗಳೂರು ಅರಮನೆ ಮೈದಾನ ಪ್ರದೇಶದ ಬಳಕೆ ಮತ್ತು ನಿಯಂತ್ರಣ ಅಧಿಕಾರವನ್ನು ರಾಜ್ಯ ಸರ್ಕಾರದ ಬಳಿಯೇ ಇಟ್ಟುಕೊಳ್ಳುವ ಉದ್ದೇಶದ ‘ಬೆಂಗಳೂರು ಅರಮನೆ (ಭೂಕಬಳಿಕೆ ಮತ್ತು ನಿಯಂತ್ರಣ) ತಿದ್ದುಪಡಿ ಮಸೂದೆ 2025’ಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಒಪ್ಪಿಗೆ ನೀಡಿದ್ದಾರೆ.


ಥಾವರಚಂದ್ ಗೆಹಲೋತ್

ಬೆಂಗಳೂರು ಅರಮನೆಯ ಪ್ರದೇಶಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಯಾವುದೇ ಆದೇಶ ಅಥವಾ ತೀರ್ಪಿಗೆ ಅನುಸಾರ ಈಗಾಗಲೇ ನಷ್ಟ ಪರಿಹಾರ ಪಾವತಿಸಿದ್ದರೆ, ಸರ್ಕಾರದ ಕ್ರಮ ರಕ್ಷಿತವಾಗುವುದು. ಅಂದರೆ, 1996 ರಲ್ಲಿ ಅರಮನೆ ಮೈದಾನವನ್ನು ಸ್ವಾಧೀನಕ್ಕೆ ತೆಗೆದುಕೊಂಡಾಗ ಪರಿಹಾರವಾಗಿ ಸರ್ಕಾರ ರಾಜಮನೆತನಕ್ಕೆ ₹11 ಕೋಟಿ ನೀಡಿತ್ತು. ಆ ಕ್ರಮವನ್ನು ರಕ್ಷಿಸುವುದು ತಿದ್ದುಪಡಿಯ ಉದ್ದೇಶವಾಗಿದೆ.

ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ಮೊದಲು ಮತ್ತು ನ್ಯಾಯಾಲಯದ ತೀರ್ಪು ಅಥವಾ ಆದೇಶಕ್ಕೆ ಅನುಗುಣವಾಗಿ ಸರ್ಕಾರದ ತೀರ್ಮಾನದ ಪ್ರಕಾರ ನಷ್ಟ ಪರಿಹಾರ ಪಾವತಿಸಿದ್ದರೆ, ಮತ್ತೊಮ್ಮೆ ನಷ್ಟ ಪರಿಹಾರ ಪಾವತಿಸುವ ಅಗತ್ಯವಿಲ್ಲ. ಅಂದರೆ, ಈಗಾಗಲೇ ₹11 ಕೋಟಿ ಪರಿಹಾರ ಎಂದು ನಿಗದಿ ಮಾಡಿದ್ದರಿಂದ ಮತ್ತೆ ಪರಿಹಾರ ಮೊತ್ತ ಪರಿಷ್ಕರಣೆ ಮಾಡುವುದರಿಂದ ರಕ್ಷಣೆ ಪಡೆಯಲು ಈ ತಿದ್ದುಪಡಿ ಮಾಡಲಾಗಿದೆ.

ಅಲ್ಲದೇ, ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ತಿದ್ದುಪಡಿ ಮಸೂದೆ 2025 ಕ್ಕೂ ರಾಜ್ಯಪಾಲರು ಒಪ್ಪಿಗೆ ನೀಡಿದ್ದಾರೆ.



ಬಿರುದು ಪ್ರದಾನ

ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಡಾ.ಸಿಸಿರಾ ಸ್ನೇಹ ಬಳಗ ಮತ್ತು ಸಾಹಿತ್ಯ ಸರಸ್ವತಿ ಕಲಾ ವೇದಿಕೆ ಹಾಗೂ ಸ್ನೇಹ ಕೂಟ ಸಾಂಸ್ಕೃತಿಕ ವೇದಿಕೆ ಏರ್ಪಡಿಸಿದ್ದ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಹಂ.ಪ.ನಾಗರಾಜಯ್ಯ ಅವರು ಎಸ್. ರಾಮಲಿಂಗೇಶ್ವರ (ಸಿಸಿರಾ) ಅವರಿಗೆ ಜನೋಪಕಾರಿ ಎಂಬ ಬಿರುದು ನೀಡಿ ಅಭಿನಂದಿಸಿದರು. ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್, ಗಾಂಧಿ ಭವನದ ಅಧ್ಯಕ್ಷ ವೂಡೇ ಪಿ. ಕೃಷ್ಣ, ಕಲಾವಿದೆ ಶಾಂತಿ ವಾಸು, ಪ್ರಾಧ್ಯಾಪಕ ಆರ್. ವಾದಿರಾಜ್, ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನೀ.ಸು.ಅಡಿಗ, ಖಜಾನೆ ಇಲಾಖೆಯ ಸಿ. ಹೇಮಾವತಿ ಉಪಸ್ಥಿತರಿದ್ದರು

‘ದೇಶದ ಅಭಿವೃದ್ಧಿಗೆ ಆದ್ಯತೆ ನೀಡಿ’

ಬೆಂಗಳೂರು: ‘ಮನುಷ್ಯ ದೇಹ ಸೌಂದರ್ಯಕ್ಕಿಂತ ದೇಶದ ಅಭಿವೃದ್ಧಿಯ ಕಡೆಗೆ ಆದ್ಯತೆ ನೀಡಬೇಕು’ ಎಂದು ಸಾಹಿತಿ ಹಿರೇಮಗಳೂರು ಕಣ್ಣನ್ ಹೇಳಿದರು.

ಲಯನ್ಸ್ ಇಂಟರ್‌ನ್ಯಾಷನಲ್ ಜಿಲ್ಲೆ 317ಎ ಆಯೋಜಿಸಿದ್ದ ಪ್ರಾಂತೀಯ 2ರ ಪ್ರಾಂತೀಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು. ‘ಸೇವೆಯಲ್ಲಿ ಸಾರ್ಥಕತೆ’ ಎಂಬ ವಿಷಯದ ಕುರಿತು ಹಿರೇಮಗಳೂರು ಕಣ್ಣನ್ ಹಾಗೂ ನಾಗಶ್ರೀ ತ್ಯಾಗರಾಜ್ ಅವರು ಉಪನ್ಯಾಸ ನೀಡಿದರು. ಲಯನ್ಸ್ ಇಂಟರ್ ನ್ಯಾಷನಲ್ ಜಿಲ್ಲೆ 317ಎ ಜಿಲ್ಲಾ ಗವರ್ನರ್ ಎನ್. ಮೋಹನ್ ಕುಮಾರ್, ಪ್ರಾಂತ್ಯ 2ರ ಅಧ್ಯಕ್ಷರಾದ ಎಸ್. ಮನೋಜ್ ಕುಮಾರ್ ಉಪಸ್ಥಿತರಿದ್ದರು.

ಟೀ ಅಂಗಡಿ ತೆರೆಯಲು ಚಿನ್ನ ಕಳ್ಳತನ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಗಮನಿಸಿ ಕಳ್ಳತನ ಮಾಡುತ್ತಿದ್ದ ಫುಡ್ ಡೆಲಿವರಿ ಬಾಯ್ ಸೇರಿ ಮೂವರು ಆರೋಪಿಗಳನ್ನು ಬೆಳ್ಳಂದೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕೊಡತಿ ಗೇಟ್‌ನ ದೀಕ್ಷಿತ್, ಕ್ಲಿಂಟನ್ ಹಾಗೂ ಆಭರಣ ಅಂಗಡಿ ಮಾಲೀಕ ಮೋತಿಲಾಲ್ ಬಂಧಿತರು.

ಬಂಧಿತರಿಂದ 70 ಗ್ರಾಂ. ಚಿನ್ನ, ಕೃತ್ಯಕ್ಕೆ ಬಳಸಿದ್ದ ಎರಡು ದ್ವಿಚಕ್ರ ವಾಹನ ವಶಕ್ಕೆ ಪಡೆದುಕೊಳ್ಳಲಾಗಿದೆ. ಬೆಳ್ಳಂದೂರಿನ ನಿವಾಸಿ ಸುಧಾಕರ್ ಅವರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಮೂವರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಡೆಲಿವರಿ ಬಾಯ್ ಆಗಿ ದೀಕ್ಷಿತ್ ಕೆಲಸ ಮಾಡುತ್ತಿದ್ದ. ಹೆಚ್ಚಿನ ಹಣ ಸಂಪಾದನೆಗಾಗಿ ಕಳ್ಳತನ ಮಾಡಲು ಮುಂದಾಗಿದ್ದ. ಮಾರ್ಚ್ 2ರಂದು ಬೆಳ್ಳಂದೂರಿನ ಶುಭಾ ಎನ್‌ಕ್ಲೇವ್ ಲೇಔಟ್ ಬಳಿ ಫುಡ್ ಡೆಲಿವರಿ ಮಾಡಲು ಬಂದಿದ್ದ. ಈ ವೇಳೆ ದೂರುದಾರರ ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಗಮನಿಸಿ, ತನ್ನ ಸ್ನೇಹಿತ ಕ್ಲಿಂಟನ್‌ನನ್ನು ಸ್ಥಳಕ್ಕೆ ಕರೆಸಿಕೊಂಡಿದ್ದ. ಇಬ್ಬರೂ ಸೇರಿಕೊಂಡು ಮನೆಯಲ್ಲಿದ್ದ 210 ಗ್ರಾಂ. ಚಿನ್ನ ಹಾಗೂ ₹50 ಸಾವಿರ ನಗದು ಕಳ್ಳತನ ಮಾಡಿ ಪರಾರಿ ಆಗಿದ್ದರು. ಕದ್ದ ಚಿನ್ನವನ್ನು ಚಿನ್ನದ ವ್ಯಾಪಾರಿ ಮೋತಿಲಾಲ್ ಬಳಿ ಅಡಮಾನ ಇಟ್ಟಿದ್ದರು’ ಎಂದು ಪೊಲೀಸರು ತಿಳಿಸಿದರು.


ಬಂಧಿತ ಆರೋಪಿಗಳು

‘ಆರೋಪಿಗಳು ಚಿನ್ನವನ್ನು ಮಾರಾಟ ಮಾಡಿ ಅದರಿಂದ ಬಂದ ಹಣದಿಂದ ಟೀ ಅಂಗಡಿ ತೆರೆಯಲು ನಿರ್ಧರಿಸಿದ್ದರು’ ಎಂದು ಪೊಲೀಸರು ಹೇಳಿದರು.

ನಿಧನ ವಾರ್ತೆ

ಮಂಜುಳಾ ಬಿ.ಸಿ.



ಬೆಂಗಳೂರು: ಮೈಸೂರಿನ ಬಾಸುದೇವ ಸೋಮಾನಿ ಕಾಲೇಜಿನ ನಿವೃತ್ತ ಕನ್ನಡ ಅಧ್ಯಾಪಕಿ ಮಂಜುಳಾ ಬಿ.ಸಿ. (65) ಅವರು ನಗರದಲ್ಲಿ ಸೋಮವಾರ ರಾತ್ರಿ ನಿಧನರಾಗಿದ್ದಾರೆ.

ಕೆಲ ದಿನಗಳಿಂದ ಅನಾರೋಗ್ಯಕ್ಕೊಳಗಾಗಿದ್ದ ಅವರು ಅಂಗಾಂಗ ವೈಫಲ್ಯದಿಂದ ಮೃತಪಟ್ಟಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಪತಿ ರಾಜಪ್ಪ ದಳವಾಯಿ, ಭಾರತೀಯ ಸೇನೆಯಲ್ಲಿ ಮೇಜರ್ ಹುದ್ದೆಯಲ್ಲಿರುವ ಪುತ್ರ ಭಾರತಿನಂದ ಇದ್ದಾರೆ.

ಬುಧವಾರ ಬೆಳಿಗ್ಗೆ 8 ಗಂಟೆಯಿಂದ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ, 11ರಿಂದ ಮೈಸೂರಿನ ವಾಗ್ದೇವಿ ನಗರದಲ್ಲಿರುವ ಅವರ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಮಧ್ಯಾಹ್ನ 2 ಗಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಹಾಸನ ಸಮೀಪದ ಬುಸ್ತೇನಹಳ್ಳಿಯಲ್ಲಿ ಜನಿಸಿದ ಮಂಜುಳಾ ಅವರು ಮಹಿಳಾ ಸಂಘಟನೆಯಲ್ಲಿ ಕ್ರಿಯಾಶೀಲರಾಗಿದ್ದರು, ಅನೇಕ ಲೇಖನಗಳನ್ನು ಕೂಡ ಬರೆದಿದ್ದಾರೆ.

ನಗರದಲ್ಲಿ ಇಂದು

ಭಕ್ತಸಮಾಗಮ ಕಾರ್ಯಕ್ರಮ, ಸ್ವಸ್ಥಿ ವಿದ್ಯಾರ್ಥಿನಿ ನಿಲಯದ ಉದ್ಘಾಟನೆ ಮತ್ತು ದೇವಾಲಯದ ಕುಂಭಾಭಿಷೇಕ ಮಹೋತ್ಸವ ಹಾಗೂ ಲೋಕಾರ್ಪಣೆ ಸಮಾರಂಭ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ಶಿವರುದ್ರ ಸ್ವಾಮೀಜಿ, ಉದ್ಘಾಟನೆ: ಎಚ್.ಡಿ. ದೇವೇಗೌಡ, ವಿದ್ಯಾರ್ಥಿನಿ ನಿಲಯದ ಉದ್ಘಾಟನೆ: ಎಚ್.ಡಿ. ಕುಮಾರಸ್ವಾಮಿ, ಗೋರಕ್ಷ ಬೋಧೆ ಗ್ರಂಥ ಬಿಡುಗಡೆ: ಆರ್. ಅಶೋಕ, ಸಿದ್ಧ ಸಿದ್ಧಾಂತಿ ಪದ್ಧತಿ ಗ್ರಂಥ ಬಿಡುಗಡೆ: ವಿ. ಸೋಮಣ್ಣ, ಅತಿಥಿಗಳು: ಡಾ. ಕೆ. ಸುಧಾಕರ್, ರಾಮಲಿಂಗಾರೆಡ್ಡಿ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಕೆ. ಗೋಪಾಲಯ್ಯ, ಶರತ್ ಬಚ್ಚೇಗೌಡ, ಆಯೋಜನೆ: ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಸ್ಥಳ: ಮಹಾಲಕ್ಷ್ಮಿ ಬಡಾವಣೆ, ಮಧ್ಯಾಹ್ನ 12ರಿಂದ


ನಿರ್ಮಲಾನಂದನಾಥ ಸ್ವಾಮೀಜಿ

‘ದಿ ವರ್ಲ್ಡ್ ಆರ್ಡರ್ ಇನ್ ಫ್ಲಕ್ಸ್’ ಸಂವಾದ: ಭಾಗವಹಿಸುವವರು: ಕೋರ್ಡ್ ಜಾಕೋಬೀಟ್, ಸೌರವ್ ಶರ್ಮಾ, ಶಾಂತಲಾ ಧರ್ಮರಾಜ್, ಚಾರು ರತ್ನಾ ದುಬೆ, ಆಯೋಜನೆ: ಚಾಣಕ್ಯ ವಿಶ್ವವಿದ್ಯಾಲಯ, ಸ್ಥಳ: ಯುವಪಥ, ಜಯನಗರ, ಮಧ್ಯಾಹ್ನ 3.30

‘ಯೋಗಶ್ರೀ’ ಅಂತರರಾಷ್ಟ್ರೀಯ ಯೋಗ ದಿನಾಚರಣೆ: ಅತಿಥಿ: ದಾಮೋದರ್ ಎಂ.ಡಿ., ಅಧ್ಯಕ್ಷತೆ: ಗೋಪಾಲಕೃಷ್ಣ ಕೆ.ಎಸ್., ಆಯೋಜನೆ ಮತ್ತು ಸ್ಥಳ: ಬಿಇಎಸ್ ಕಲೆ ಮತ್ತು ವಾಣಿಜ್ಯ ಸಂಜೆ ಮಹಾವಿದ್ಯಾಲಯ, ಜಯನಗರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in



87ನೇ ಶ್ರೀ ರಾಮೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ: ಯುಗಳ ಕೊಳಲು ವಾದನ: ವಿಷ್ಣು ಪ್ರಸನ್ನ, ಸುಮಂತ್ ಶ್ರೀಧರ್, ಪಿಟೀಲು: ವರಲಕ್ಷ್ಮಿ ಆರ್., ಮೃದಂಗ: ಬಿ.ಎಸ್. ಸಮರ್ಥ್, ‘ಪ್ರಭು ಶ್ರೀರಾಮಚಂದ್ರರ ಆದರ್ಶ ವ್ಯಕ್ತಿತ್ವ’ ಚಿಂತನ ಮಂಥನ: ಚಕ್ರವರ್ತಿ ಸೂಲಿಬೆಲೆ, ‘ಪಾದುಕಾ ಪಟ್ಟಾಭಿಷೇಕ’ ಯಕ್ಷಗಾನ ಪ್ರದರ್ಶನ: ನಿರ್ದೇಶನ: ಕೆ. ಕೃಷ್ಣಮೂರ್ತಿ ತುಂಗಾ, ಆಯೋಜನೆ: ಎನ್.ಆರ್. ಕಾಲೊನಿ ಶ್ರೀರಾಮಮಂದಿರಂ ಟ್ರಸ್ಟ್, ಎನ್.ಆರ್. ಕಾಲೊನಿ, ಸಂಜೆ 4.15

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ಅಲೇಖಾ ಕೊಮ್ಮುಜೋಯಿಸಲು, ವಿಶೇಷ ಕರ್ನಾಟಕ ಸಂಗೀತ ಕಛೇರಿ: ಶಿವಶ್ರೀ ಸ್ಕಂದಪ್ರಸಾದ್, ಪಿಟೀಲು: ರಂಗಪ್ರಿಯ ಶಂಕರನಾರಾಯಣನ್, ಘಟ: ಅದಮ್ಯ ರಮಾನಂದ, ಭರದ್ವಾಜ್ ಸಥವಲ್ಲಿ, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5

ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ನ್ಯಾ. ಕೃಷ್ಣ ಎಸ್.ದಿಕ್ಷಿತ್ ಸಲಹೆ

‘ಸಂವಿಧಾನ ಕರಡು ಅಧ್ಯಯನ ಮಾಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂವಿಧಾನ ಕರಡನ್ನು ಅಧ್ಯಯನ ಮಾಡಿದಾಗ ಮಾತ್ರ ಅಂಬೇಡ್ಕರ್ ಅವರ ಮಹತ್ವ ತಿಳಿಯುತ್ತದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್.ದಿಕ್ಷಿತ್ ಹೇಳಿದರು.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಪುರಭವನದಲ್ಲಿ ನಡೆದ ಬಿ.ಆರ್. ಅಂಬೇಡ್ಕರ್ ಅವರ 134ನೇ ಜನ್ಮದಿನಾಚರಣೆ, ಸಾಧಕ, ಸಾಧಕಿಯರಿಗೆ ಮತ್ತು ಬಿಬಿಎಂಪಿ ಅಧಿಕಾರಿ, ನೌಕರರಿಗೆ ಅಂಬೇಡ್ಕರ್ ಹೆಸರಿನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

‘ಸಂವಿಧಾನ ರಚನೆ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸಿದ ಅವರು, ಕಾರ್ಮಿಕರ ಕನಿಷ್ಠ ವೇತನಕ್ಕೆ ಹೋರಾಟ ಮಾಡಿದರು. ರಿಸರ್ವ್ ಬ್ಯಾಂಕ್ ಸ್ಥಾಪನೆಗೂ ಕೊಡುಗೆ ನೀಡಿದರು. ಹಲವಾರು ಪುಸ್ತಕಗಳನ್ನು ಬರೆದರೂ ಪಂಡಿತ್ ಎಂಬ ಬಿರುದು ನೀಡಲಿಲ್ಲ’ ಎಂದು ಹೇಳಿದರು.

‘ಅಂಬೇಡ್ಕರ್ ಅವರನ್ನು ಚುನಾವಣೆಯಲ್ಲಿ ಸೋಲಿಸಿದರು. ಅವರ ವಿರುದ್ಧ ಗೆದ್ದ ವ್ಯಕ್ತಿಗೆ ಭಾರತರತ್ನ ನೀಡಲಾಯಿತು. ಮಹಾನ್ ನಾಯಕನ ಕುರಿತು ಯಥೇಚ್ಛವಾಗಿ ಮಾತನಾಡುವ ವ್ಯಕ್ತಿಗಳ ಬಗ್ಗೆ ಎಚ್ಚರವಾಗಿರಬೇಕು’ ಎಂದರು.

ನ್ಯಾಯಮೂರ್ತಿ ಆರ್.ದೇವದಾಸ್ ಮಾತನಾಡಿ, ‘ಅಂಬೇಡ್ಕರ್ ಸಮಾಜಕ್ಕೆ ಕೊಟ್ಟ ಕೊಡುಗೆ ಬಗ್ಗೆ ಮಕ್ಕಳಿಗೆ ತಿಳಿಸುವ ಕೆಲಸವಾಗಬೇಕು. ಎಲ್ಲರೂ ಕಾಯಕ ತತ್ವ ಅಳವಡಿಸಿಕೊಳ್ಳಬೇಕು ಮತ್ತು ದೇಶಪ್ರೇಮ ಬೆಳಸಿಕೊಳ್ಳಬೇಕು’ ಎಂದು ಕಿವಿಮಾತು ಹೇಳಿದರು.

ಸಾಧಕರಿಗೆ ಬಿ.ಆರ್.ಅಂಬೇಡ್ಕರ್ ಸಮಾಜಸೇವಾ ರತ್ನ ಪ್ರಶಸ್ತಿ, ಅಂಬೇಡ್ಕರ್ ರತ್ನ ಪ್ರಶಸ್ತಿ ಮತ್ತು ಬಿಬಿಎಂಪಿ ಅಧಿಕಾರಿ ಮತ್ತು ನೌಕರರಿಗೆ ಅಂಬೇಡ್ಕರ್ ಭೂಷಣ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜನಪದ ಗಾಯಕ ಗುರುರಾಜ್ ಹೊಸಕೋಟೆ ಮತ್ತು ತಂಡದವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ವಿದ್ವಾಂಸ ಮಲ್ಲೇಪುರಂ ಜಿ.ವೆಂಕಟೇಶ್, ಸುಮಂಗಲಿ ಸೇವಾಶ್ರಮದ ಎಸ್.ಟಿ.ಸುಶೀಲಮ್ಮ, ವಕೀಲ ಎ.ರಾಜೇಶ್ , ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ.ಅಮೃತ್ ರಾಜ್ ಹಾಜರಿದ್ದರು.


ನಗರದ ಪುರಭವನದಲ್ಲಿ ಬಿಬಿಎಂಪಿ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಲ್ಲೇಪುರಂ ಜಿ.ವೆಂಕಟೇಶ್, ಎಸ್.ಟಿ.ಸುಶೀಲಮ್ಮ ನ್ಯಾಯಮೂರ್ತಿ ಕೃಷ್ಣ ಎಸ್.ದಿಕ್ಷಿತ್, ನಾಗರಾಜ ಹೊಸಕೋಟೆ, ನ್ಯಾಯಮೂರ್ತಿ ಆರ್.ದೇವದಾಸ್, ಎ.ರಾಜೇಶ್, ಎ.ಅಮೃತ್ ರಾಜ್ ಪಾಲ್ಗೊಂಡಿದ್ದರು

ಕುಂಭಾಭಿಷೇಕ ಮಹೋತ್ಸವ ಮತ್ತು ಲೋಕಾರ್ಪಣಾ ಸಮಾರಂಭ

‘ಭಕ್ತಿ, ಜ್ಞಾನದ ಸಂಗಮ ಬಿಜಿಎಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಕ್ತಿ, ಜ್ಞಾನದ ಸಂಗಮವೇ ಬಿಜಿಎಸ್’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಮಹಾಲಕ್ಷ್ಮಿ ಲೇಔಟ್‌ನಲ್ಲಿರುವ ಆದಿಚುಂಚನಗಿರಿ ಮಠದ ಆವರಣದಲ್ಲಿ ಅಭಯ ಆಂಜನೇಯ ಸ್ವಾಮಿ, ಪ್ರಸನ್ನ ಮಹಾಗಣಪತಿ ಮತ್ತು ಮಾತಾ ಲಲಿತಾಂಬಿಕಾ ದೇವಾಲಯದ ಕುಂಭಾಭಿಷೇಕ ಮಹೋತ್ಸವ ಮತ್ತು ಲೋಕಾರ್ಪಣಾ ಸಮಾರಂಭದಲ್ಲಿ ಮಂಗಳವಾರ ಅವರು ಮಾತನಾಡಿದರು.

‘ದೇವರು ವರ ಹಾಗೂ ಶಾಪ ಎರಡನ್ನೂ ನೀಡುವುದಿಲ್ಲ. ಕೇವಲ ಅವಕಾಶ ನೀಡುತ್ತಾನೆ. ನಿಮಗೆ ಸಿಗುವ ಅವಕಾಶದಲ್ಲಿ ನೀವು ಏನು ಮಾಡುತ್ತೀರಿ ಎಂಬುದು ಬಹಳ ಮುಖ್ಯ. ನಮ್ಮ ಹಿರಿಯರು ಮನೆ ಹುಷಾರು, ಮಠ ಹುಷಾರು ಎಂದು ಹೇಳಿದ್ದಾರೆ. ನಾವು ನಮ್ಮ ಮನೆಗಳನ್ನು ಕಾಪಾಡಿಕೊಳ್ಳುವಂತೆ ಮಠಗಳನ್ನು ಕಾಪಾಡಿಕೊಳ್ಳಬೇಕು. ನಾವು ನಮ್ಮ ಶಕ್ತಿಗೆ ಅನುಸಾರ ಮಠಗಳಿಗೆ ದಾನ ಮಾಡಬೇಕು’ ಎಂದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ, ಶಾಸಕ ಕೆ. ಗೋಪಾಲಯ್ಯ, ಹೇಮಲತಾ ಗೋಪಾಲಯ್ಯ, ಕಾಂಗ್ರೆಸ್ ಮುಖಂಡರಾದ ಕುಸುಮಾ ಹನುಮಂತರಾಯಪ್ಪ ಉಪಸ್ಥಿತರಿದ್ದರು.



ಮಹಾಲಕ್ಷ್ಮಿ ಲೇಔಟ್‌ನಲ್ಲಿ ಮಂಗಳವಾರ ನಡೆದ ಲಲಿತ ಸಹಸ್ರನಾಮ ಪಾರಾಯಣ ಹಾಗೂ ಸತ್ಸಂಗ ಪ್ರವಚನ ಮತ್ತು ಧಾರ್ಮಿಕ ಸಭೆಯಲ್ಲಿ ಮಹಿಳೆಯರು ಮತ್ತು ವಿದ್ಯಾರ್ಥಿನಿಯರು ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರಗಳು



ಅಭಯಾಂಜನೇಯಸ್ವಾಮಿ, ಪ್ರಸನ್ನ ಮಹಾಗಣಪತಿ ಮತ್ತು ಮಾತಾ ಲಲಿತಾಂಬಿಕಾ ದೇವಾಲಯದ ಕುಂಭಾಭಿಷೇಕ ಮಹೋತ್ಸವ ಮತ್ತು ಲೋಕಾರ್ಪಣಾ ಸಮಾರಂಭದಲ್ಲಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಕಲಶಗಳಿಗೆ ಪೂಜೆ ಸಲ್ಲಿಸಿದರು. ಕೆ. ಗೋಪಾಲಯ್ಯ, ಡಿ.ವಿ. ಸದಾನಂದಗೌಡ ಮತ್ತು ಡಿ.ಕೆ. ಶಿವಕುಮಾರ್ ಉಪಸ್ಥಿತರಿದ್ದರು

ಎಂಇಎಸ್: ಜಾತಿ ನಿಂದನೆ ಆರೋಪ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದಲ್ಲಿರುವ ‘ಮೈಸೂರು ಶಿಕ್ಷಣ ಸೊಸೈಟಿ’ (ಎಂಇಎಸ್) ಕಾಲೇಜಿನ ಕಾರ್ಯದರ್ಶಿ ಮತ್ತು ಮುಖ್ಯ ಕಾರ್ಯನಿರ್ವಾಹಕರ ವಿರುದ್ಧ; ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ ದಾಖಲಿಸಿದ್ದ ಜಾತಿ ನಿಂದನೆ ಆರೋಪದ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿದೆ.

‘ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗದ ಮುಂದಿರುವ ದೂರನ್ನು ರದ್ದುಗೊಳಿಸಬೇಕು’ ಎಂದು ಕೋರಿ ಎಂಇಎಸ್ ಕಾರ್ಯದರ್ಶಿ ಸುಖೇನ ಪದ್ಮನಾಭ ಹಾಗೂ ಕಾರ್ಯ ನಿರ್ವಾಹಕ ಕೆ.ಎಂ.ರಾಘವೇಂದ್ರನ್ ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿ ಈ ಕುರಿತಂತೆ ಆದೇಶಿಸಿದೆ.

‘ನಮ್ಮ ಕಕ್ಷಿದಾರರು ಮರಳಿ ಸೇವೆಗೆ ಹೋದಾಗ ಅವರನ್ನು ಜಾತಿ ಹೆಸರಿನಲ್ಲಿ ನಿಂದಿಸಲಾಗಿದೆ. ಈ ಹಿನ್ನೆಲೆಯಲ್ಲಿ ಆಯೋಗ ತನಿಖೆಗೆ ಆದೇಶಿಸಿದ್ದು, ಈ ಪ್ರಕ್ರಿಯೆಯನ್ನು ಮುಂದುವರಿಸಲು ನ್ಯಾಯಾಲಯ ಅನುಮತಿಸಬೇಕು’ ಎಂಬ ದೂರುದಾರರ ಪರ ವಕೀಲರ ವಾದವನ್ನು ತಳ್ಳಿ ಹಾಕಿರುವ ಪೀಠ, ‘ದೂರುದಾರರು 10 ವರ್ಷಗಳಿಂದ ಜಾತಿ ನಿಂದನೆ ನಡೆಯುತ್ತಿತ್ತು ಎಂದು ಆರೋಪಿಸಿದ್ದಾರೆ. ಆದರೆ, ಅದಕ್ಕೆ ಯಾವುದೇ ಪೂರಕ ಸಾಕ್ಷ್ಯ ಒದಗಿಸಿಲ್ಲ. ಹಾಗಾಗಿ, ಪ್ರಕರಣವನ್ನು ರದ್ದುಗೊಳಿಸಲಾಗುತ್ತಿದೆ’ ಎಂದು ತಿಳಿಸಿತು.



ದಿಢೀರನೆ ಸುರಿದ ಮಳೆಯ ನಡುವೆ ಸೈಕಲ್ ಸವಾರರೊಬ್ಬರು ಸಾಗಿದರು

ನಗರದ ಹಲವೆಡೆ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಮಂಗಳವಾರ ರಾತ್ರಿ ಬಿರುಸಿನ ಮಳೆಯಾಗಿದೆ.

ಮಧ್ಯಾಹ್ನದವರೆಗೆ ಬಿರುಬಿಸಿಲಿನಿಂದ ಬೇಯುತ್ತಿದ್ದ ಉದ್ಯಾನ ನಗರದ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಕಬ್ಬನ್ ಪಾರ್ಕ್, ವಿಧಾನಸೌಧದ ಸುತ್ತಮುತ್ತ ರಾತ್ರಿ 8ಕ್ಕೆ ಸಣ್ಣದಾಗಿ ಮಳೆ ಸುರಿಯಲು ಆರಂಭಿಸಿತು. ನಂತರ ತುಸು ಜೋರಾಯಿತು. ಉತ್ತರಹಳ್ಳಿ, ಸಂಪಂಗಿರಾಮ ನಗರ, ಶಾಂತಿನಗರ ಭಾಗದಲ್ಲಿ ಬಿರುಸಿನ ಮಳೆಯಾಯಿತು.

ಯಶವಂತಪುರ, ಜಾಲಹಳ್ಳಿ, ಪೀಣ್ಯ, ರಾಜಾಜಿನಗರ, ಬಸವೇಶ್ವರ ನಗರ, ಮಲ್ಲೇಶ್ವರ, ಶೇಷಾದ್ರಿಪುರ, ಶಿವಾಜಿನಗರ ಸೇರಿದಂತೆ ಹಲವೆಡೆ ರಾತ್ರಿ 10.40ರಿಂದ ಶುರುವಾದ ಬಿರುಸಿನ ಮಳೆ, ತಡರಾತ್ರಿವರೆಗೂ ಮುಂದುವರಿದಿತ್ತು. ವಿದ್ಯಾರಣ್ಯಪುರ, ಯಲಹಂಕ, ಕೋರಮಂಗಲ ಮತ್ತು ಮಡಿವಾಳದಲ್ಲಿ ಮಳೆಯಾಯಿತು. ಕಂಟೋನ್ಮೆಂಟ್ ಪ್ರದೇಶ, ದೊಮ್ಮಲೂರು, ಇಂದಿರಾನಗರ, ದಾಸರಹಳ್ಳಿ, ನಾಗಸಂದ್ರ, ಎಚ್.ಎಂ.ಟಿ ಲೇಔಟ್ ಸುತ್ತಮುತ್ತ ಸಾಧಾರಣವಾಗಿ ಮಳೆಯಾಯಿತು. ಹೊಯ್ಸಳನಗರ ವ್ಯಾಪ್ತಿಯಲ್ಲಿ ಸುಮಾರು 21 ಮಿ.ಮೀ, ಪೀಣ್ಯ ಕೈಗಾರಿಕಾ ಪ್ರದೇಶ ವ್ಯಾಪ್ತಿಯಲ್ಲಿ 12 ಮಿ.ಮೀ ಮಳೆಯಾದ ವರದಿಯಾಗಿದೆ. ಮಳೆಯಿಂದಾಗಿ ನಗರದಾದ್ಯಂತ ತಣ್ಣನೆಯ ವಾತಾವರಣ ನಿರ್ಮಾಣವಾಯಿತು.

ಕಳೆದ 24 ಗಂಟೆಗಳಲ್ಲಿ ರಾಧಾಕೃಷ್ಣ ದೇವಾಲಯ ವಾರ್ಡ್, ಕೊಡಿಗೆಹಳ್ಳಿ, ಬಸವೇಶ್ವರ ನಗರ, ಅಗ್ರಹಾರ ದಾಸರಹಳ್ಳಿ, ಅಟ್ಟೂರು ಸುತ್ತಮುತ್ತ 15 ಮಿ.ಮೀ ನಿಂದ 21.4 ಮಿಮೀ ಮಳೆಯಾದ ವರದಿಯಾಗಿದೆ.



ನಗರದ ಬ್ರಿಗೇಡ್ ರಸ್ತೆಯಲ್ಲಿ ಮಹಿಳೆಯರು ಮಳೆಯಲ್ಲೇ ಸಾಗಿದರು – ಪ್ರಜಾವಾಣಿ ಚಿತ್ರಗಳು

‘ಸಚಿವ ಸಂಪುಟ ಸಭೆಯಲ್ಲಿ ನಮ್ಮ ಅಭಿಪ್ರಾಯ ತಿಳಿಸುತ್ತೇವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾತಿ ಜನಗಣತಿ ಕುರಿತ ಸಮುದಾಯದ ಸಚಿವರು, ಶಾಸಕರ ಅಭಿಪ್ರಾಯವನ್ನು ಇದೇ 17ರಂದು ನಡೆಯಲಿರುವ ಸಚಿವ ಸಂಪುಟ ಸಭೆಯ ಮುಂದಿಡುತ್ತೇವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ತಮ್ಮ ಸರ್ಕಾರಿ ನಿವಾಸದಲ್ಲಿ ಮಂಗಳವಾರ ರಾತ್ರಿ ಒಕ್ಕಲಿಗ ಸಚಿವರು, ಪಕ್ಷದ ಶಾಸಕರಿಂದ ಅಭಿಪ್ರಾಯ ಸಂಗ್ರಹಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಎಲ್ಲ ಸಮುದಾಯಗಳಿಗೂ ರಕ್ಷಣೆ ನೀಡುವ ಕೆಲಸ ಮಾಡುತ್ತೇವೆ’ ಎಂದರು.

‘ಹಿಂದುಳಿದ ವರ್ಗಗಳ ಆಯೋಗ ಸಮೀಕ್ಷೆಯನ್ನು ಸರಿಯಾಗಿ ಮಾಡಿದೆ. ಆದರೆ, ವಿಪಕ್ಷಗಳು ಗೊಂದಲ ಸೃಷ್ಟಿಸುತ್ತಿವೆ. ಎಲ್ಲ ಜಾತಿ, ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಯ ಮಾಹಿತಿ ಈಗ ಸಿಕ್ಕಿದೆ. ಅದನ್ನು ಶಾಸಕರಿಗೆ ಕಳುಹಿಸುತ್ತೇವೆ’ ಎಂದರು.

‘ಅಧ್ಯಯನ ವರದಿಯ ವಿವರವಾದ ಮಾಹಿತಿ ಬೇಕು ಎಂದು ಶಾಸಕರು ಕೇಳಿದ್ದಾರೆ. ಕೆಲವು ಮಾಧ್ಯಮಗಳಲ್ಲಿ ವಾಸ್ತವಾಂಶ ಬಿಟ್ಟು ತಪ್ಪಾಗಿ ವರದಿಯಾಗಿದೆ. ಮುಸ್ಲಿಮರ ಜನಸಂಖ್ಯೆ ಹೆಚ್ಚು ಇದೆ ಎಂದೂ ವರದಿಯಾಗಿದೆ. ಅದು ಸುಳ್ಳು. ಜನರಿಗೆ ವಾಸ್ತವಾಂಶ ತಿಳಿಸುವ ಕೆಲಸವನ್ನು ನಾವು ಮಾಡುತ್ತೇವೆ’ ಎಂದರು.

ಹಿಂದುಳಿದ ವರ್ಗಗಳ ಆಯೋಗವು ಸಮೀಕ್ಷೆ ವೇಳೆ ಸಂಗ್ರಹಿಸಿದ ವಿಧಾನಸಭಾ ಕ್ಷೇತ್ರವಾರು ಅಂಕಿ ಅಂಶವನ್ನು ಕೊಡಬೇಕು ಎಂದು ಕೆಲವು ಶಾಸಕರು ಆಗ್ರಹಿಸಿದರೆ, ಇನ್ನೂ ಕೆಲವರು, ‘ಹಲವು ಕಡೆ ಸಮೀಕ್ಷೆಯೇ ನಡೆದಿಲ್ಲ. ಹೀಗಾಗಿ ಈ ವರದಿಯನ್ನು ಒಪ್ಪಬೇಕಿಲ್ಲ’ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಚಿವರೂ, ಶಾಸಕರು ಸೇರಿ 35ಕ್ಕೂ ಹೆಚ್ಚು ಮಂದಿ ಸಭೆಯಲ್ಲಿ ಭಾಗವಹಿಸಿದರು. ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಕೆ. ಜಯಪ್ರಕಾಶ್ ಹೆಗ್ಡೆ ಸಭೆಯಲ್ಲಿದ್ದರು.

ಜಿಲ್ಲಾ ಮಟ್ಟದ ಸಮಾವೇಶಕ್ಕೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿ ವಿರುದ್ಧ ಮೇ 20ರಂದು ಹಮ್ಮಿಕೊಂಡಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದ ಯಶಸ್ವಿಗಾಗಿ ಏಪ್ರಿಲ್ 16ರಿಂದ ಮೇ 10ರೊಳಗೆ ಜಿಲ್ಲಾ ಮಟ್ಟದಲ್ಲಿ ಜಂಟಿ ಸಮಾವೇಶ ನಡೆಸಲು ಜೆಸಿಟಿಯು ನಿರ್ಧರಿಸಿದೆ.

ನಗರದಲ್ಲಿ ಮಂಗಳವಾರ ನಡೆದ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು)ಯ ರಾಜ್ಯ ಮಟ್ಟದ ಸಮಾವೇಶದಲ್ಲಿ ಆರು ತೀರ್ಮಾನಗಳನ್ನು ಕೈಗೊಳ್ಳಲಾಯಿತು.

ಕಾರ್ಮಿಕ ಸಂಹಿತೆಗಳನ್ನು ಘೋಷಿಸಿದ ಮರುದಿನವೇ ಪ್ರತಿಭಟನೆಗಳನ್ನು ಆಯೋಜಿಸುವುದು, ರಾಜ್ಯವ್ಯಾಪಿ ಜಂಟಿ ಮುಷ್ಕರದ ನೋಟಿಸ್‌ಗಳನ್ನು ಮೇ 3ರಂದು ಸರ್ಕಾರಕ್ಕೆ ನೀಡುವುದು, ಮೇ 1ರಂದು ತಾಲ್ಲೂಕು ಹಾಗೂ ಕೈಗಾರಿಕಾ ಪ್ರದೇಶಗಳಲ್ಲಿ ಕಾರ್ಮಿಕ ದಿನಾಚರಣೆ ನಡೆಸುವುದು. ಅಲ್ಲದೇ ಏಪ್ರಿಲ್, ಮೇ ತಿಂಗಳಲ್ಲಿ ಎಲ್ಲ ವರ್ಗದ ಕಾರ್ಮಿಕರು ಹಾಗೂ ಜನಸಾಮಾನ್ಯರ ನಡುವೆ ಮುಷ್ಕರದ ಕುರಿತು ಪ್ರಚಾರ ಮತ್ತು ಸಾರ್ವತ್ರಿಕ ಮುಷ್ಕರ ಯಶಸ್ವಿಗೆ ಶ್ರಮಿಸಲು ನಿರ್ಧರಿಸ ಲಾಗಿದೆ.

ಸಿಐಟಿಯು ರಾಜ್ಯ ಮಂಡಳಿ ಅಧ್ಯಕ್ಷೆ ಎಸ್. ವರಲಕ್ಷ್ಮಿ ಮಾತನಾಡಿ, ‘ರಾಜ್ಯದಲ್ಲಿರುವ ಅಸಂಘಟಿತ ಕಾರ್ಮಿಕರಿಗೆ ಅಂಬೇಡ್ಕರ್ ಸಹಾಯ ಹಸ್ತ ಯೋಜನೆಯಡಿ ಕೇವಲ ವಿಮಾ ಯೋಜನೆ ಜಾರಿ ಮಾಡಲಾಗಿದೆ. ಎಲ್ಲ ಅಸಂಘಟಿತ ಕಾರ್ಮಿಕರಿಗೆ ಸಮಗ್ರ ಸಾಮಾಜಿಕ ಭದ್ರತೆ ಭಾಗವಾಗಿ ಪಿಂಚಣಿ ಯೋಜನೆ ರೂಪಿಸಬೇಕು. ಅದಕ್ಕೆ ಅಗತ್ಯವಾದ ಅನುದಾನವನ್ನು ಬಜೆಟ್‌ನಲ್ಲಿ ನೀಡಬೇಕು’ ಎಂದು ಆಗ್ರಹಿಸಿದರು.

ಎಐಟಿಯುಸಿ ರಾಜ್ಯ ಕಾರ್ಯದರ್ಶಿ ವಿಜಯ ಭಾಸ್ಕರ್ ಮಾತನಾಡಿ, ‘ಅನ್ಯಾಯದ ವಿರುದ್ಧ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು ಮತ್ತು ಬುದ್ಧಿಜೀವಿಗಳು ಐಕ್ಯತೆಯಿಂದ ಕೆಲಸ ಮಾಡಬೇಕಾಗಿದೆ. ರಾಷ್ಟ್ರೀಯ ಆಸ್ತಿಗಳ ಲೂಟಿ ತಡೆಯಬೇಕಿದೆ’ ಎಂದು ಕರೆ ನೀಡಿದರು.

ಸಮಾವೇಶದಲ್ಲಿ ಎಐಟಿಯುಸಿಯ ವೀರೇಶ್, ಟಿಯುಸಿಸಿಯ ಜಿ.ಆರ್. ಶಿವಶಂಕರ್, ಎಚ್ಎಂಕೆಪಿ ಪ್ರಧಾನ ಕಾರ್ಯದರ್ಶಿ ಕಾಳಪ್ಪ, ಜೆಸಿಟಿಯು ರಾಜ್ಯ ಸಂಚಾಲಕ ಕೆ.ವಿ.ಭಟ್ ಪಾಲ್ಗೊಂಡಿದ್ದರು.



ನಗರದಲ್ಲಿ ಮಂಗಳವಾರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ರಾಜ್ಯ ಸಮಾವೇಶದಲ್ಲಿ ವೆಂಕಟೇಶ್, ನಾಗಾನಾಥ್ ಮತ್ತು ವರಲಕ್ಷ್ಮಿ ಸಮಾಲೋಚನೆ ನಡೆಸಿದರು. ದೀಪಕ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ


ಆಸ್ಪತ್ರೆಯಲ್ಲಿ ಗಗನಸಖಿ ಮೇಲೆ ಲೈಂಗಿಕ ದೌರ್ಜನ್ಯ


ಗುರುಗ್ರಾಮ (ಪಿಟಿಐ): ಇಲ್ಲಿನ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ ಗಗನಸಖಿಯೊಬ್ಬರ ಮೇಲೆ ಸಿಬ್ಬಂದಿ ಲೈಂಗಿಕ ದೌರ್ಜನ್ಯ ಎಸಗಿರುವ ಘಟನೆ ನಡೆದಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

‘ಸಂತ್ರಸ್ತೆಯ ಹೇಳಿಕೆಯನ್ನು ನ್ಯಾಯಾಲಯದಲ್ಲಿ ಮ್ಯಾಜಿಸ್ಟ್ರೇಟ್ ಮುಂದೆ ದಾಖಲಿಸಲಾಗಿದೆ. ಪೊಲೀಸ್ ತಂಡವು ಆಸ್ಪತ್ರೆಯ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳ ತುಣುಕನ್ನು ಪರಿಶೀಲಿಸುತ್ತಿದೆ. ಶೀಘ್ರದಲ್ಲೇ ಆರೋಪಿಯನ್ನು ಗುರುತಿಸಿ, ಬಂಧಿಸಲಾಗುವುದು’ ಎಂದು ಗುರುಗ್ರಾಮ ಪೊಲೀಸ್ ವಕ್ತಾರರು ತಿಳಿಸಿದ್ದಾರೆ.

ಪೊಲೀಸ್ ಮಾಹಿತಿ ಪ್ರಕಾರ, 46 ವರ್ಷದ ಗಗನಸಖಿ ತಾನು ತಂಗಿದ್ದ ಹೋಟೆಲ್‌ನ ಕೊಳದಲ್ಲಿ ಈಜುತ್ತಿದ್ದಾಗ ಅನಾರೋಗ್ಯಕ್ಕೆ ಒಳಗಾದ ಕಾರಣ ಏ.5 ರಂದು ಗುರುಗ್ರಾಮದ ಆಸ್ಪತ್ರೆಗೆ ದಾಖಲಾಗಿದ್ದರು. ಏ.6 ರಂದು ಆಸ್ಪತ್ರೆಯ ಕೆಲ ಸಿಬ್ಬಂದಿ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. ಆಗ ಆಕೆಯನ್ನು ವೆಂಟಿಲೇಟರ್‌ನಲ್ಲಿ ಇರಿಸಲಾಗಿತ್ತು. ಭಾನುವಾರ ಆಸ್ಪತ್ರೆಯಿಂದ ಆಕೆ ಬಿಡುಗಡೆಯಾದ ನಂತರ ತನ್ನ ಪತಿಗೆ ಘಟನೆ ಬಗ್ಗೆ ತಿಳಿಸಿದ್ದು, ಪೊಲೀಸರಿಗೆ ದೂರು ನೀಡಿದ್ದಾರೆ. ಸೋಮವಾರ ಆಸ್ಪತ್ರೆಯ ಅಪರಿಚಿತ ಸಿಬ್ಬಂದಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ತಂತ್ರಜ್ಞಾನ





ನಿಮ್ಮ ಫೋನಿಗೂ ಕಿವಿಗಳಿವೆ!

ಅವಿನಾಶ್ ಬಿ.

ಮದುವೆ ಅಥವಾ ಇನ್ಯಾವುದೋ ಕಾರ್ಯಕ್ರಮಕ್ಕೆ ಹೋಗಿರುತ್ತೇವೆ. ಅಲ್ಲಿ ಕೆಲವರನ್ನು ಮಾತನಾಡಿಸಿಯೂ ಆಯಿತು. ಮನೆಗೆ ಬಂದ ಮೇಲೆ ಫೇಸ್‌ಬುಕ್ ಜಾಲಾಡುವಾಗ ಅಚ್ಚರಿಯಾಗುತ್ತದೆ ನಮಗೆ! ಅರೆ, ಈಗಷ್ಟೇ ಮಾತನಾಡಿದ ವ್ಯಕ್ತಿಯ ಪ್ರೊಫೈಲ್ ನಮ್ಮ ಫೀಡ್‌ನಲ್ಲಿ 'ಫ್ರೆಂಡ್ ಸಜೆಷನ್' ರೂಪದಲ್ಲಿ ಕಾಣಿಸಿಕೊಳ್ಳುತ್ತದೆ.

ಇನ್ನೊಂದು ಸಂದರ್ಭ - ನೀವೂ ಗಮನಿಸಿರಬಹುದು. ಸ್ನೇಹಿತರು ಮಾತನಾಡುವಾಗ, ಇಂಥಾ ಬೈಕ್ ತಗೊಳ್ಳಬೇಕು, ಚೆನ್ನಾಗಿದೆ ಅನಿಸುತ್ತದೆ ಅಂತೆಲ್ಲ ಚರ್ಚೆ ಮಾಡಿರುತ್ತೇವೆ. ಬಳಿಕ ಫೇಸ್‌ಬುಕ್ ಅಥವಾ ಬೇರಾವುದೇ ಅಂತರ್ಜಾಲ ತಾಣಗಳನ್ನು ಜಾಲಾಡುವ ಸಂದರ್ಭದಲ್ಲಿ, ನಾವು ಆಗಷ್ಟೇ ಮಾತನಾಡಿದ ಬ್ರ್ಯಾಂಡ್ ಇಲ್ಲವೇ ಅನ್ಯ ಬ್ರ್ಯಾಂಡ್‌ನ ಬೈಕ್‌ಗಳ ಜಾಹೀರಾತುಗಳೇ ನಮಗೆ ಕಾಣಿಸತೊಡಗುತ್ತವೆ.

ಅಂತರ್ಜಾಲದಲ್ಲಿ ಪ್ರೈವೆಸಿ, ಖಾಸಗಿತನ, ಗೋಪ್ಯತೆ ಮುಂತಾದವುಗಳ ಉಲ್ಲಂಘನೆ ಅಂತ ಧಾಳಾಗಿ ಚರ್ಚೆಯಾಗುತ್ತಿರುವುದು ಈ ವಿಷಯದಲ್ಲೇ. ನಿಮಗೆ ಗೊತ್ತೇ? ವಾಸ್ತವವಾಗಿ ಇದು ಖಾಸಗಿತನದ 'ಉಲ್ಲಂಘನೆ' ಅಲ್ಲ; ನಾವಾಗಿ ನಮ್ಮ ಖಾಸಗಿ ಮಾಹಿತಿಯನ್ನು ಈ ತಾಣಗಳಿಗೆ ಧಾರೆ ಎರೆದುಕೊಟ್ಟಿರುತ್ತೇವೆ. ಮತ್ತು ಇಂಥ ಕೆಲವು ಮಾಹಿತಿಗಳೇ ಸೈಬರ್ ವಂಚಕರ ಕೈಗೆ ಹೋಗಿ, ಲಕ್ಷಾಂತರ ಹಣ ಕಳೆದುಕೊಳ್ಳುವುದು, ಡಿಜಿಟಲ್ ಅರೆಸ್ಟ್ ಆಗುವುದು...

ಗೊತ್ತಿದ್ದೂ ಮಾಡುವ ತಪ್ಪು, ಏನದು?

ಸ್ಮಾರ್ಟ್‌ಫೋನ್ ಯಾವಾಗ ನಮ್ಮ ಕೈಗೆ ಬಂತೋ, ಆ ಯಂತ್ರದ ಕೈಗೆ ನಮ್ಮ ಬುದ್ಧಿಯನ್ನೆಲ್ಲ ಕೊಟ್ಟಿರುತ್ತೇವೆ. ಹಾಗಾಗಕೂಡದು, ನಾವೂ ಸ್ಮಾರ್ಟ್ ಆಗಿಯೇ ಅದನ್ನು ಬಳಸಬೇಕಾಗುತ್ತದೆ ಎಂಬ ಅರಿವು ಅತ್ಯವಶ್ಯ. ಇದಕ್ಕೆಲ್ಲ ಕಾರಣ ನಮ್ಮದೇ ಉದಾಸೀನ ಅಥವಾ ನಿರ್ಲಕ್ಷ್ಯ. ಏನೇ ಬೇಕಿದ್ದರೂ ಮಾಡಿಕೊಡುವ, ಸಹಾಯ ಮಾಡುವ ಅಪ್ಲಿಕೇಶನ್‌ಗಳು (ಆ್ಯಪ್) ಸಾಕಷ್ಟು ಲಭ್ಯ ಇರುತ್ತವೆ. ನಮಗೆ ಬೇಕಾದುದನ್ನು ನಾವು ಡೌನ್‌ಲೋಡ್ ಮಾಡಿಕೊಂಡು ಅಳವಡಿಸಿಕೊಂಡಿರುತ್ತೇವೆ. ಆ್ಯಪ್ ಕುರಿತಾದ ವಿವರಣೆಯಲ್ಲಿ, 'ಷರತ್ತುಗಳು ಮತ್ತು ನಿಯಮಗಳು' ಎಂಬ ವಿಭಾಗದಲ್ಲಿ ಎಲ್ಲವನ್ನೂ ವಿವರಿಸಿರುತ್ತಾರೆ. ಆದರೆ ಜನಸಾಮಾನ್ಯರಿಗೆ ಅರ್ಥವಾಗದ ಕಾನೂನಿನ ಭಾಷೆಯಲ್ಲಿ ಅದು ಇರುತ್ತದೆ. ಹಾಗಾಗಿ ನಾವು ಅದನ್ನು ಓದದೇ ಇದ್ದರೂ 'ಓದಿದ್ದೇನೆ ಮತ್ತು ಸಮ್ಮತಿಸುತ್ತೇನೆ' ಅಂತ ಒಂದು ಚೆಕ್ ಬಾಕ್ಸ್‌ಗೆ ಟಿಕ್ ☑ ಗುರುತು ಹಾಕಿ, ಇನ್‌ಸ್ಟಾಲ್ ಮಾಡಿಕೊಂಡಿರುತ್ತೇವೆ.ಮೊದಲ ಬಾರಿಗೆ ಎಡವಿದ್ದು ಇಲ್ಲೇ. ನಂತರ ಆ್ಯಪ್ ಇನ್‌ಸ್ಟಾಲ್ ಮಾಡುವಾಗಲೂ, ನಮ್ಮ ಮೊಬೈಲ್ ಅಥವಾ ಕಂಪ್ಯೂಟರ್ ಸಾಧನದ ಕೆಲವೊಂದು ವೈಶಿಷ್ಟ್ಯಗಳು ಮತ್ತು ಹಾರ್ಡ್‌ವೇರ್‌ಗೆ ಅವು ನಮ್ಮಿಂದ ಪ್ರವೇಶಾನುಮತಿ (ಆ್ಯಕ್ಸೆಸ್) ಕೋರುತ್ತವೆ. ಇಲ್ಲಾದರೂ ನಾವು ಒಂದಿಷ್ಟು ಗಮನ ಹರಿಸಿದ್ದಿದ್ದರೆ ಸಾಕಾಗುತ್ತಿತ್ತು. ವಿಭಿನ್ನ ಆ್ಯಪ್‌ಗಳು ಅವುಗಳನ್ನು ಅಳವಡಿಸುವ ಹಂತದಲ್ಲಿ ಅಗತ್ಯವಿದ್ದರೂ, ಅಗತ್ಯವಿಲ್ಲದಿದ್ದರೂ ನಮ್ಮ ಕ್ಯಾಮೆರಾ, ಸಂಪರ್ಕಗಳು (ಕಾಂಟ್ಯಾಕ್ಟ್ಸ್), ಮೈಕ್ರೋಫೋನ್, ಲೊಕೇಷನ್ ಮುಂತಾದವುಗಳಿಗೆ ಪ್ರವೇಶಾನುಮತಿ ಕೋರುತ್ತವೆ. ಅಷ್ಟೇ ಅಲ್ಲ, ಬೇರೆ ಜಾಲತಾಣಗಳ ಜಾಲಾಟದ ಚರಿತ್ರೆಯನ್ನು ಕೂಡ ತಿಳಿದುಕೊಳ್ಳಬಹುದೇ ಅಂತ ಕೇಳಿರುತ್ತವೆ. ವಿಶೇಷವಾಗಿ ಐಒಎಸ್ (ಐಫೋನ್) ಆ್ಯಪ್‌ಗಳು ಇದನ್ನು ನಿರ್ದಿಷ್ಟವಾಗಿ (Permission to track) ಕೇಳುತ್ತವೆ ಮತ್ತು ಬೇಡ ಎಂದಾದರೆ 'No' ಅಂತ ಅನುಮತಿ ನಿರಾಕರಿಸುವ ಆಯ್ಕೆಯನ್ನೂ ನೀಡುತ್ತದೆ. ಆದರೆ ನಾವು ಧಾವಂತದಲ್ಲಿ ಎಲ್ಲದಕ್ಕೂ 'Yes, Yes' ಅಂತ ಹಸಿರುನಿಶಾನೆ ಕೊಡುತ್ತಾ ಹೋಗುತ್ತೇವೆ. ಅಲ್ಲಿಗೆ ನಮ್ಮ ಖಾಸಗಿತನದ ವಿಚಾರಗಳನ್ನು ತಿಳಿದುಕೊಳ್ಳಲು ಈ ಆ್ಯಪ್‌ಗಳಿಗೆ ನಾವು ಅನುಮತಿ ಕೊಟ್ಟಂತಾಯಿತು.


ಇದರಿಂದ ಏನಾಗುತ್ತದೆ?

ಮುಖ್ಯವಾಗಿ ನಾವು ನಮ್ಮ ಕಾಂಟ್ಯಾಕ್ಟ್ಸ್ ಆ್ಯಪ್‌ಗೆ ಪ್ರವೇಶಾನುಮತಿ ಕೊಟ್ಟರೆ, ನಿಮ್ಮ ಆಪ್ತರು, ಸ್ನೇಹಿತರು, ಸಹೋದ್ಯೋಗಿಗಳು ಯಾರು ಎಂಬುದು ನಿರ್ದಿಷ್ಟ ಆ್ಯಪ್‌ಗಳಿಗೆ ಅವರ ಮೊಬೈಲ್ ಸಂಖ್ಯೆ ಸಮೇತ ತಿಳಿದುಬಿಡುತ್ತದೆ. ಇದೇ ಕಾರಣದಿಂದಾಗಿಯೇ, ಟ್ರೂಕಾಲರ್‌ನಂಥ ಕಾಲರ್ ಐಡಿ ಆ್ಯಪ್‌ಗಳನ್ನು ಅಳವಡಿಸಿದರೆ, ನಮ್ಮಲ್ಲಿ ನಂಬರ್ ಸೇವ್ ಆಗಿಲ್ಲದಿದ್ದರೂ, ಯಾರಿಂದ ಕರೆ ಬರುತ್ತಿದೆ ಎಂಬುದನ್ನು ತಿಳಿಯುವುದು ಸಾಧ್ಯ. ಮೈಕ್ರೋಫೋನ್‌ಗೆ ಪ್ರವೇಶಾನುಮತಿ ಕೊಟ್ಟರೆ, ನಾವು ಮಾತನಾಡಿದ್ದೆಲ್ಲವನ್ನೂ ಆ ಆ್ಯಪ್ 'ಕೇಳಿಸಿ'ಕೊಳ್ಳುತ್ತದೆ. ಹೊಸ ಬೈಕ್ ಬಗ್ಗೆ ಚರ್ಚೆ ನಡೆಸಿದ ಬಳಿಕ, ಅಂತರ್ಜಾಲದಲ್ಲಿ ಅದರದ್ದೇ ಜಾಹೀರಾತು ಕಾಣಿಸಿಕೊಳ್ಳಲು ಇದುವೇ ಕಾರಣ. ಜಿಪಿಎಸ್ ವ್ಯವಸ್ಥೆಯಲ್ಲಿ ಲೊಕೇಷನ್ (ಸ್ಥಳ) ತಿಳಿಯುವ ಅನುಮತಿ ವಾಸ್ತವವಾಗಿ ಬೇಕಾಗಿರುವುದು ನಕ್ಷೆ (ಮ್ಯಾಪ್) ಬಳಸುವಾಗ ಅಥವಾ ವಾಟ್ಸ್‌ಆ್ಯಪ್‌ನಲ್ಲಿ ಲೊಕೇಷನ್ ಹಂಚಿಕೊಳ್ಳುವಾಗ. ಈ ಆ್ಯಪ್‌ಗಳಿಗೆ ತೀರಾ ಅಗತ್ಯವಿದ್ದಾಗ ಮಾತ್ರವೇ ಅನುಮತಿ ಕೊಡುವ ವ್ಯವಸ್ಥೆ ಇರುತ್ತದೆ. ಉಳಿದಂತೆ ಜಿಪಿಎಸ್ ಆಫ್ ಮಾಡಿಟ್ಟರೆ ಸುರಕ್ಷಿತ. ಇಲ್ಲವಾದರೆ, ಫೇಸ್‌ಬುಕ್‌ಗೆ ಲಾಗಿನ್ ಆಗಿರುತ್ತಾ, ಯಾವುದೇ ಕಾರ್ಯಕ್ರಮಗಳಿಗೆ ಹೋದಾಗ, ಅಲ್ಲಿ ಭೇಟಿಯಾದವರ ಲೊಕೇಷನ್ ಆನ್ ಇದ್ದರೆ, ಇಬ್ಬರೂ ಸಂಧಿಸಿದ ವಿಷಯ ಫೇಸ್‌ಬುಕ್‌ಗೆ, ಗೂಗಲ್‌ಗೆ ತಿಳಿಯುತ್ತದೆ. ಅವರು ನಿಮ್ಮ ಸ್ನೇಹಿತರ ಪಟ್ಟಿಯಲ್ಲಿ ಇಲ್ಲದಿದ್ದರೆ, 'People You may Know' ಎಂಬ ಪಟ್ಟಿ ಫೀಡ್‌ನಲ್ಲಿ ಪದೇ ಪದೇ ಕಾಣಿಸತೊಡಗುತ್ತದೆ. ಇನ್ನು, ಕ್ಯಾಮೆರಾ ಪ್ರವೇಶಾನುಮತಿ ಬಗ್ಗೆ ಹೇಳುವುದಾದರೆ, ಒಂದು ಬ್ರೌಸರ್ ಅಥವಾ ಮ್ಯೂಸಿಕ್ ಆ್ಯಪ್‌ಗೆ ಕ್ಯಾಮೆರಾ ಅನುಮತಿ ಯಾಕೆ ಬೇಕು ಅಂತ ನಮಗೆ ನಾವೇ ಪ್ರಶ್ನಿಸಿಕೊಳ್ಳಬೇಕು. ಕ್ಯಾಮೆರಾ ಅಥವಾ ಗ್ಯಾಲರಿಗೆ, ಸ್ಟೋರೇಜ್‌ಗೆ ಪ್ರವೇಶಾನುಮತಿ ಕೊಟ್ಟರೆ, ನಾವು ತೆಗೆದ ಚಿತ್ರಗಳು, ಅದರ ಬಯೋಮೆಟ್ರಿಕ್ ವಿವರಗಳು ಎಲ್ಲವೂ ಆ ಆ್ಯಪ್‌ನ ವಶವಾಗುತ್ತದೆ. ಸಾಮಾಜಿಕ ಜಾಲತಾಣದಲ್ಲಿ ಯಾವುದಾದರೂ ವಿಷಯಕ್ಕೆ 'ಲೈಕ್' ಒತ್ತಿದರೆ, ಆ ಪ್ರೊಫೈಲ್ ಅಥವಾ ಪೇಜ್‌ನಿಂದ ಹಾಗೂ ಅದೇ ವಿಷಯಕ್ಕೆ ಸಂಬಂಧಿಸಿದ ವಿಚಾರಗಳೇ ನಮ್ಮ ಫೀಡ್‌ನಲ್ಲಿ ಹೆಚ್ಚು ಹೆಚ್ಚು ಕಾಣಿಸಿಕೊಳ್ಳಲಾರಂಭಿಸುತ್ತವೆ. ಇದಕ್ಕೆ ಬೇರೆ ಜಾಲತಾಣಗಳ ಚಟುವಟಿಕೆಗಳನ್ನು ತಿಳಿದುಕೊಳ್ಳಲು ನಾವು ಆ ಆ್ಯಪ್‌ಗೆ ನೀಡಿರುವ ಪ್ರವೇಶಾನುಮತಿಯೇ ಕಾರಣ. ಪ್ರವೇಶಾನುಮತಿ ಪಡೆದ ಆ್ಯಪ್‌ಗಳು ಅಲ್ಲೆಲ್ಲ ನಮ್ಮ ಚಟುವಟಿಕೆಗಳನ್ನು 'ಗಮನಿಸುತ್ತಾ' ಇರುತ್ತವೆ.

ಮುಖ್ಯ ವಿಷಯವನ್ನೇ ನೋಡದೆ 'ಓಕೆ' ಒತ್ತುತ್ತಾ ಸಾಗುತ್ತೇವೆ ನಾವೆಂಬುದನ್ನು ಮನಗಂಡಿರುವ ಸೈಬರ್ ವಂಚಕರು, ತಮ್ಮದೇ ಆ್ಯಪ್‌ಗಳನ್ನು ಯಾವುದೋ ಲಿಂಕ್ ಮೂಲಕ, ಇನ್ಯಾವುದೋ ಆಮಿಷವೊಡ್ಡಿ ನಮ್ಮ ಫೋನ್‌ಗೆ ಸಂದೇಶಗಳಲ್ಲಿ, ಇಮೇಲ್‌ನಲ್ಲಿ, ವಾಟ್ಸ್‌ಆ್ಯಪ್‌ನಲ್ಲಿ ಕಳುಹಿಸಿ, ಎಲ್ಲದಕ್ಕೂ ಪ್ರವೇಶಾನುಮತಿ ಕೇಳುತ್ತಾ, ನಮ್ಮನ್ನು ಸುಲಭವಾಗಿ ಡಿಜಿಟಲ್ ಅರೆಸ್ಟ್ ಮಾಡಲು, ಬ್ಯಾಂಕ್ ಖಾತೆ ಖಾಲಿ ಮಾಡಲು ವೇದಿಕೆ ಸಿದ್ಧಮಾಡಿಕೊಂಡಿರುತ್ತಾರೆ. ಅಥವಾ ನಮ್ಮ ಫೋನ್‌ನಲ್ಲಿ ನಾವು ಸಂಗ್ರಹಿಸಿಟ್ಟುಕೊಂಡಿರುವ ಅಮೂಲ್ಯವಾದ ನಮ್ಮ ಖಾಸಗಿ ಮಾಹಿತಿಯನ್ನು ಕದ್ದು, ವಂಚನೆಯ ಜಾಲಕ್ಕೆ ಉತ್ತಮ ಅಡಿಪಾಯ ಹಾಕಿಕೊಂಡಿರುತ್ತಾರೆ. ❖

ಏನು ಮಾಡಬೇಕು?

ಆಂಡ್ರಾಯ್ಡ್ ಇರಲಿ, ಐಒಎಸ್ ಇರಲಿ, ಅಥವಾ ನಮ್ಮ ಕಂಪ್ಯೂಟರೇ ಇರಲಿ; ಯಾವುದೇ ಆ್ಯಪ್‌ಗೆ ನೀಡಿರುವ ಅನುಮತಿಗಳನ್ನು ಬದಲಾಯಿಸುವ ಆಯ್ಕೆ ಇರುತ್ತದೆ. ಅದನ್ನು ಒಂದಿಷ್ಟು ಸಮಯಾವಕಾಶ ಮಾಡಿಕೊಂಡು ಆಯಾ ಸಾಧನಗಳ ಸೆಟ್ಟಿಂಗ್ಸ್‌ನಲ್ಲಿರುವ 'ಪ್ರೈವೆಸಿ & ಸೆಕ್ಯುರಿಟಿ' ಎಂಬ ವಿಭಾಗದಲ್ಲಿ (ಗಮನಿಸಿ: ಒಂದೊಂದು ಸಾಧನದಲ್ಲಿ ಒಂದೊಂದು ರೀತಿ ಪದಗುಚ್ಛ ಇರುತ್ತದೆ) ಅಥವಾ ಅಂಥದ್ದನ್ನೇ ಧ್ವನಿಸುವ ವಿಭಾಗಕ್ಕೆ ಹೋಗಿ, ತಿದ್ದುಪಡಿ ಮಾಡಿಕೊಳ್ಳುವ, ಅಗತ್ಯವಿದ್ದಾಗಲಷ್ಟೇ ಅನುಮತಿಸುವ ಆಯ್ಕೆ ಇರುತ್ತದೆ. ಅಥವಾ ನಿರ್ದಿಷ್ಟ ಆ್ಯಪ್‌ಗಳ ಸೆಟ್ಟಿಂಗ್ಸ್‌ನಲ್ಲಿ 'App info' ಎಂಬಲ್ಲಿ 'Permisson' ಅಂತ ಇರುವಲ್ಲಿ, ಈಗಾಗಲೇ ನೀಡಿರುವ ಅನುಮತಿಗಳನ್ನು ಅಗತ್ಯವಿಲ್ಲದಿದ್ದರೆ ಹಿಂಪಡೆಯುವ ಆಯ್ಕೆಯಿದೆ. ನಾವು ಹೇಳಿದ್ದನ್ನು ನಮ್ಮ ಫೋನ್ 'ಕೇಳಿಸಿ'ಕೊಳ್ಳದಂತಿರಲು, ಗೂಗಲ್ ಅಸಿಸ್ಟೆಂಟ್, ಸಿರಿ ಅಥವಾ ಅಲೆಕ್ಸಾ ಮುಂತಾದ ಧ್ವನಿ ಸಹಾಯಕ ಅಪ್ಲಿಕೇಶನ್‌ಗಳನ್ನು ನಿಷ್ಕ್ರಿಯವಾಗಿರುವಂತೆ ನೋಡಿಕೊಳ್ಳಬೇಕು.



ಪ್ರೈವೆಸಿ ಸೆಟ್ಟಿಂಗ್ಸ್

ವಾರಕ್ಕೊಮ್ಮೆಯಾದರೂ ಫೋನನ್ನು 'ರೀಬೂಟ್' (ಆಫ್ ಮಾಡಿ ಮರುಪ್ರಾರಂಭಿಸುವುದು) ಮಾಡುವುದುಚಿತ. ಇದರಿಂದ ಹಿನ್ನೆಲೆಯಲ್ಲಿ ನಮಗರಿವಿಲ್ಲದೆ ಚಲಾವಣೆಯಲ್ಲಿರುವ ಆ್ಯಪ್‌ಗಳು ಮತ್ತು ಸಕ್ರಿಯವಾಗಿರುವ ಕೆಲವೊಂದು ಕುತಂತ್ರಾಂಶಗಳು ಸ್ಥಗಿತಗೊಳ್ಳಬಹುದು. ಅಲ್ಲದೆ ಮೊಬೈಲ್‌ಫೋನ್‌ನ ಬಾಳಿಕೆಗೂ ಅನುಕೂಲಕರ.

ದುಂಬಿಯ ಬೆನ್ನಟ್ಟುವ ಕ್ಯಾಮೆರಾ

ಕೊಳ್ಳೇಗಾಲ ಶರ್ಮ

ಮಿಂಚಿನ ವೇಗದಲ್ಲಿ ಹಾರುವ ದುಂಬಿಗಳ ವಿಡಿಯೊ ಹಿಡಿಯುವ ಉಪಕರಣ ಬಂದಿದೆ. ಭೃಂಗದ ಬೆನ್ನೇರಿ ಬರುವುದು ಕೇವಲ ಕಲ್ಪನಾ ವಿಲಾಸವಷ್ಟೆ ಅಲ್ಲ. ಕ್ಯಾಮೆರಾ ಕೂಡ ಆಗಬಹುದು ಎನ್ನುತ್ತದೆ ಇತ್ತೀಚೆಗೆ ಸೈನ್ಸ್ ರೋಬೋಟಿಕ್ಸ್ ಪತ್ರಿಕೆಯಲ್ಲಿ ಜರ್ಮನಿಯ ಫ್ರೈಬರ್ಗ್ ವಿಶ್ವವಿದ್ಯಾಲಯದ ಥಾಂಗ್ ವೋಡಾನ್ ಮತ್ತು ಸಂಗಡಿಗರು ಪ್ರಕಟಿಸಿರುವ ವರದಿ. ಸ್ವಾ ಮತ್ತು ಸಂಗಡಿಗರು ಹಲವು ಕಿಲೋಮೀಟರುಗಳ ದೂರದಲ್ಲಿ ಹಾರುತ್ತಿರುವ ಜೇನ್ನೊಣಗಳ ವಿಡಿಯೊವನ್ನು ಸುಸ್ಪಷ್ಟವಾಗಿ ಸೆರೆ ಹಿಡಿಯಬಲ್ಲ ತಂತ್ರೋಪಕರಣವನ್ನು ರೂಪಿಸಿದ್ದಾರಂತೆ.

ಜೇನ್ನೊಣಗಳ ಚಿತ್ರ ತೆಗೆಯುವುದು ಹೊಸತೇನಲ್ಲ. ಸೂರ್ಯಕಾಂತಿ ಹೂವಿನ ಮೇಲೆ ಹಾರುತ್ತಿರುವ ಚಿಟ್ಟೆ, ಜೇನ್ನೊಣಗಳ ಚಿತ್ರಗಳನ್ನು ತೆಗೆಯುವುದೇ ಒಂದು ಕಲೆ. ಇಂತಹ ಚಿತ್ರಗಳು ಸಾಕಷ್ಟು ದೊರೆಯುತ್ತವೆ. ಹಾಗೆಯೇ ಅವುಗಳ ಹಾರಾಟದ ವಿಡಿಯೊಗಳು ಬೇಕಾದಷ್ಟಿವೆ. ಆದರೆ ಇವುಗಳಲ್ಲೆಲ್ಲದರಲ್ಲೂ ಒಂದು ದೋಷವಿದೆ. ಜೇನ್ನೊಣಗಳ ರೆಕ್ಕೆಗಳು ಸ್ಪಷ್ಟವಾಗಿ ಸಿಗುವುದಿಲ್ಲ. ಮಸುಕಾಗಿ ಕಾಣುತ್ತವೆ. ರೆಕ್ಕೆಗಳು ಮಸುಕಾದರೂ ದುಂಬಿಗಳು ಸುಸ್ಪಷ್ಟವಾಗಿರುವ ಚಿತ್ರಗಳನ್ನು ಕಲಾತ್ಮಕ ಎಂದರೂ, ಕೀಟಗಳನ್ನು ಅಧ್ಯಯನ ಮಾಡುವ ವಿಜ್ಞಾನಿಗಳಿಗೆ ಅವು ಸಮಾಧಾನ ತರುವುದಿಲ್ಲ. ಏಕೆಂದರೆ ಕೀಟಗಳು ಅದು ಹೇಗೆ ತಟಕ್ಕನೆ ದಿಕ್ಕು ಬದಲಿಸುತ್ತವೆ, ತಲೆಕೆಳಗೆ ಹಾರುತ್ತವೆ, ಸರ್ರನೆ ಮೇಲೇರುತ್ತವೆ ಎನ್ನುವುದನ್ನು ತಿಳಿಯಬೇಕಾದರೆ, ಹಾರುವಾಗ ಅವುಗಳ ರೆಕ್ಕೆಗಳು ಹೇಗೆಲ್ಲ ಚಲಿಸುತ್ತಿರುತ್ತವೆ ಎನ್ನುವುದನ್ನು ಸ್ಪಷ್ಟವಾಗಿ ನೋಡಬೇಕಾಗುತ್ತದೆ.

ಸ್ಪಷ್ಟವಾಗಿ ಸಿಗಬೇಕೆಂದರೆ ಹೈಸ್ಪೀಡ್ ಕ್ಯಾಮೆರಾಗಳನ್ನು ಬಳಸಬೇಕು. ಏಕೆಂದರೆ ಅವುಗಳು ರೆಕ್ಕೆಗಳನ್ನು ಕನಿಷ್ಠ ಎಂದರೆ ಸೆಕೆಂಡಿಗೆ ಇನ್ನೂರು ಬಾರಿ ಬಡಿಯುತ್ತವೆ. ಸೊಳ್ಳೆಯಂತೂ ಸೆಕೆಂಡಿಗೆ ಆರುನೂರು ಬಾರಿ ರೆಕ್ಕೆಗಳನ್ನು ಬಡಿಯಬಲ್ಲುದು. ನಮ್ಮ ಕಣ್ಣುಗಳು ಮೂರರಿಂದ ನಾಲ್ಕು ಸೆಕೆಂಡಿಗೆ ಒಮ್ಮೆ ಮಾತ್ರ ಮಿಟುಕಬಲ್ಲವು. ಹೀಗಾಗಿಯೇ ನಮಗೆ ಕೀಟಗಳ ಚಲನೆ ಮಾಟದಂತೆ ಕಾಣುತ್ತದೆ. ಹೈ ಸ್ಪೀಡ್ ಕ್ಯಾಮೆರಾಗಳನ್ನು ಬಳಸಿ, ಹಾರುವ ಕೀಟದ ರೆಕ್ಕೆಗಳನ್ನು ಚಿತ್ರಿಸಬಹುದಾದರೂ, ರೆಕ್ಕೆಗಳ ಅಥವಾ ಕೀಟಗಳ ಚಲನೆಗಳನ್ನಲ್ಲ. ಶರವೇಗದಿಂದ ಹಾರುತ್ತ, ಕಣ್ಣೆವೆ ಮುಚ್ಚುವುದರೊಳಗೆ ದಿಕ್ಕು ಬದಲಿಸಿಕೊಳ್ಳುವ ಜೇನ್ನೊಣಗಳಂತಹ ಕೀಟಗಳ ವಿಡಿಯೊ ತೆಗೆಯಲು, ಎವೆ ಇಕ್ಕದೆ ಗಮನಿಸುತ್ತಾ, ಸುಸ್ಪಷ್ಟವಾದ ಚಿತ್ರ ಮತ್ತು ವಿಡಿಯೊ ನೀಡುವ ಉಪಕರಣ ಬೇಕು. ಇಂಥ ಸಾಧನವೊಂದನ್ನು ವೋಡಾನ್ ತಂಡ ರೂಪಿಸಿದೆ. ಇದು ಹಾರುವ ಕೀಟಗಳು ಎಲ್ಲೇ ಇದ್ದರೂ ಎವೆ ಇಕ್ಕದೆ ಅವುಗಳತ್ತಲೇ ತಿರುಗುವ ಟ್ರ್ಯಾಕಿಂಗ್ ವ್ಯವಸ್ಥೆ. ವೋಡಾನ್ ತಂಡ ಇದನ್ನು 'ಫಾಸ್ಟ್ ಲಾಕ್ ಆನ್' ಅಥವಾ 'ಫ್ಲೋ' ಎಂದು ಕರೆದಿದೆ. ಈ ಉಪಕರಣವನ್ನು ಸಾಧಾರಣ ಕ್ಯಾಮೆರಾ, ಹೈಸ್ಪೀಡ್ ಕ್ಯಾಮೆರಾ ಹಾಗೂ ಸ್ಮಾರ್ಟ್ ಫೋನುಗಳಲ್ಲಿಯೂ ಬಳಸಬಹುದಂತೆ.

ಕ್ಯಾಮೆರಾ ಟ್ರಾಕಿಂಗ್ ವ್ಯವಸ್ಥೆಗಳನ್ನು ಈಗಾಗಲೇ ಹಲವು ಕಡೆಯಲ್ಲಿ ಬಳಸುತ್ತಿದ್ದೇವೆ. ಕ್ರಿಕೆಟ್ ಆಟದಲ್ಲಿ ಚೆಂಡು ಎತ್ತ ಹಾರಿತು ಎನ್ನುವುದನ್ನು ಥರ್ಡ್ ಅಂಪೈರಿಗೆ ತೋರಿಸುವುದು ಇಂತಹ ವ್ಯವಸ್ಥೆ. ಸದಾ ಚೆಂಡಿನತ್ತಲೇ ಕ್ಯಾಮೆರಾ ಮುಖ ಮಾಡಿಕೊಂಡಿರುವಂತೆ ಇದನ್ನು ರೂಪಿಸಿರುತ್ತಾರೆ. ವೋಡಾನ್ ಉಪಕರಣದಲ್ಲಿಯೂ ಕನ್ನಡಿಯೊಂದು ಇದೇ ರೀತಿ ಸದಾ ಕೀಟದತ್ತ ಮುಖ ಮಾಡಿಕೊಂಡಿರುವಂತೆ ವ್ಯವಸ್ಥೆ ಇದೆ. ಇದಕ್ಕಾಗಿ ಕೀಟದ ಬೆನ್ನಿಗೊಂದು ಪುಟ್ಟ ಕನ್ನಡಿಯನ್ನು ಅಳವಡಿಸಿರುತ್ತಾರೆ. ಈ ಕನ್ನಡಿ ಕ್ಯಾಮೆರಾದ ಪಕ್ಕದಲ್ಲಿರುವ ದೀಪವೊಂದು ಚೆಲ್ಲಿದ ಇನ್‌ಫ್ರಾರೆಡ್ ಕಿರಣಗಳನ್ನು ಪ್ರತಿಫಲಿಸುತ್ತದೆ. ಕೀಟ ಇರುವ ಜಾಗವನ್ನು ಕ್ಯಾಮೆರಾಗೆ ತಿಳಿಸುತ್ತದೆ. ಫ್ಲೋದಲ್ಲಿರುವ ಒಂದು ಸೆನ್ಸಾರು ಬೆಳಕು ಯಾವ ದಿಕ್ಕಿನಿಂದ ಬರುತ್ತಿದೆ ಎಂದು ಗುರುತಿಸಿ, ಮೈಕ್ರೊಸೆಕೆಂಡಿನೊಳಗೆ ಆ ದಿಕ್ಕಿನತ್ತ ತಿರುಗುವಂತೆ ಗಿಯರು ವ್ಯವಸ್ಥೆ ಇದೆ. ಈ ಗಿಯರುಗಳು ಕ್ಯಾಮೆರಾವನ್ನೂ ಆ ದಿಕ್ಕಿಗೇ ತಿರುಗಿಸುತ್ತವೆ. ಹೀಗೆ ಕೀಟ ಎತ್ತ ಸಾಗುತ್ತದೆಯೋ ಅತ್ತಲೇ ಈ ಫ್ಲೋ ಕಣ್ಣು ನೆಟ್ಟುಕೊಂಡಿರುತ್ತದೆ.

ಫ್ಲೋ ಟ್ರ್ಯಾಕಿಂಗ್ ವ್ಯವಸ್ಥೆಯನ್ನು ಬಳಸಿ ಬಯಲಿನಲ್ಲಿ ಸ್ವೇಚ್ಛೆಯಾಗಿ ಹಾರಾಡುತ್ತಿರುವ ಯಾವುದೇ ಕೀಟದ ಚಲನೆಯನ್ನೂ ಚಿತ್ರೀಕರಿಸಬಹುದು. ಇದಕ್ಕೂ ಮೊದಲು ಹೀಗೆ ಕೀಟಗಳ ಹಾರಾಟವನ್ನು ಅಧ್ಯಯನ ಮಾಡಬೇಕೆಂದರೆ, ಅವನ್ನು ಒಂದು ದಾರದ ತುದಿಗೆ ಬಂಧಿಸಿ, ಹೈಸ್ಪೀಡ್ ಕ್ಯಾಮೆರಾಗಳನ್ನು ಬಳಸಿ ಅಧ್ಯಯನ ಮಾಡುತ್ತಿದ್ದರು. ಇದರಿಂದಾಗಿ, ಹೊರಗೆ ಬಯಲಿನಲ್ಲಿ ಹಾರಾಡುವ ಕೀಟಗಳ ರೆಕ್ಕೆಗಳು ಹೇಗೆ ಚಲಿಸುತ್ತವೆ ಎಂಬುದನ್ನು ತಿಳಿಯುವುದು ಕಷ್ಟವಾಗಿತ್ತು. ಅಲ್ಲದೆ ಬಯಲಿನಲ್ಲಿ ಕೀಟಗಳ ಹಾರಾಡುವಂತೆ ಸೂತ್ರಕ್ಕೆ ಸಿಕ್ಕಿದ ಕೀಟಗಳು ಚಲಿಸಲಾರವಷ್ಟೆ! ಫ್ಲೋ ಈ ಎಲ್ಲ ತೊಂದರೆಗಳನ್ನೂ ದೂರ ಮಾಡಿದೆ ಎನ್ನುತ್ತಾರೆ ವೋಡಾನ್.

ಈ ಹಿಂದೆಯೂ ಕೀಟಗಳನ್ನು ಟ್ರ್ಯಾಕ್ ಮಾಡಲು ಸೆನ್ಸಾರುಗಳನ್ನು ಬಳಸಲಾಗಿತ್ತು. ಆದರೆ ಅದು ಕೀಟಗಳು ಎಲ್ಲಿವೆ ಎಂಬುದನ್ನು ತಿಳಿಯಲಷ್ಟೆ ನೆರವಾಗಿದ್ದುವು. ಅವು ಕೀಟಗಳು ಯಾವ ಕಡೆಯಿಂದ ಇನ್ಯಾವ ಕಡೆಗೆ ಸಾಗಿದುವು ಎಂದಷ್ಟೆ ತಿಳಿಸುತ್ತಿದ್ದುವು. ಕೀಟಗಳ ಹಾರಾಟದ ರೀತಿಯನ್ನು ಚಿತ್ರಿಸಲಾಗಲಿ, ಅಧ್ಯಯನ ಮಾಡಲಾಗಲಿ ಅವು ನೆರವಾಗುತ್ತಿರಲಿಲ್ಲ. ವೋಡಾನ್ ತಂಡದ ಫ್ಲೋ ಉಪಕರಣ ಇದನ್ನು ಸುಲಭವಾಗಿಸಿದೆ. ಅಷ್ಟೇ ಅಲ್ಲ, ಎಲ್ಲರ ಕೈಗೂ ಇಂತಹ ಅಧ್ಯಯನಗಳು ಎಟುಕುವಂತೆ ಮಾಡಲಿವೆ ಎನ್ನುತ್ತಾರೆ ವೋಡಾನ್.

ಫ್ಲೋ ಉಪಕರಣವನ್ನು ಡ್ರೋನುಗಳಲ್ಲಿರುವ ಕ್ಯಾಮೆರಾಗೂ ಇವರು ಜೋಡಿಸಿದ್ದಾರೆ. ದುಂಬಿಗಳನ್ನು ಹಾರಬಿಟ್ಟು, ಡ್ರೋನು ಅವುಗಳ ಬೆಂಬತ್ತುವಂತೆ ಮಾಡಿದ್ದಾರೆ. ಡ್ರೋನುಗಳಲ್ಲಿರುವ ಕ್ಯಾಮೆರಾ ತಪ್ಪದೆ ಹೀಗೆ ಗುರುತು ಮಾಡಿದ ನೊಣಗಳ ಜೊತೆಗೇ ಹಾರಿ, ಅವುಗಳ ವಿಡಿಯೊವನ್ನು ಚಿತ್ರಿಸಿದೆ. ಸುಸ್ಪಷ್ಟವಾಗಿ. ಫ್ಲೋ ಮಾಡಿಕೊಡುವ ಕೀಟಗಳ ಇಂತಹ ಅಧ್ಯಯನಗಳು, ಕೀಟದಂತೆಯೇ ಸರಾಗವಾಗಿ ಹಾರುವ ಪುಟಾಣಿ ಡ್ರೋನುಗಳನ್ನು ವಿನ್ಯಾಸ ಮಾಡಲೂ ನೆರವಾಗಬಲ್ಲುವು ಎನ್ನುವುದು ಆಶಯ. ❖



ಸಿಇಟಿ-ನೀಟ್ ಪರೀಕ್ಷೆ ದಿಕ್ಸೂಚಿ

PUC-CET: MATHS

MULTIPLE CHOICE QUESTIONS

42) The maximum area of arectangle inscribed in the circlr (x+1)2 + (y-3)2- 64 is

A) 64 sq unit B) 72 sq uits
C) 128 sq units D) 8 sq unit

Ans:-C

Expln:- We know that of all the rectangles inscribed in a given circle, the square has the maximum area when the side is equal to $2x\frac{a}{\sqrt{2}}$,' 'a' being the radius of the circle.

Here radius of the circle is 8

ie the side of the square is $8\sqrt{2}$ which has maximum area and the maximum area of the square is

$(8\sqrt{2})^2 - 64x2 = 128$ sq. units

43) The general solution of the D.E. $\left(\frac{dy}{dx}\right) + y.\, g'(x) = g(x).\, g'(x)$, where g (x) is a given function of x is

(A) $g(x) + \log(1 + y + g(x)) = C$
(B) $g(x) + \log(1 + y - g(x)) = C$
(C) $g(x) - \log(1 + y - g(x)) = C$
(D) $g(x) - \log(1 - y + g(x)) = C$

Ans: (B) $g(x) + \log(1 + y - g(x)) = C$

Expln:-

Given, differential equation is of the form $\frac{dy}{dx} + py = Q$.

$\therefore$ Integrating factor is $e^{\int g'(x)\,dx} = e^{g(x)}$

Solution is $ye^{g(x)} = \int g^{g(x)}\, g(x)\, g'(x) + C$

$ye^{g(x)} = \int e^t.\, t\, dt + C$ where $t = g(x)$ $\therefore dt = g'(x)\,dx$

$= e^t(t-1) + C.$

$ye^{g(x)} = e^{g(x)}[g(x) - 1] + C$

$\therefore\ y = g(x) - 1 + ce^{-g(x)}$

$y + 1 - g(x) = ce^{-g(x)}$

$\log[y + 1 - g(x)] = \log C - g(x)$

$g(x) + \log[y + 1 - g(x)] = C.$

44) If $|x + 5| \ge 10$ then

a) $x \in (-15, 5]$ b) $x \in (-5, 5]$
c) $x \in (-\infty, -15] \cup [5, \infty)$
d) $x \in [-\infty, -15] \cup [5, \infty)$

Ans: (c)

$\Rightarrow |x + 5| \ge 10$
$\Rightarrow x + 5 \le -10$ or $x + 5 \ge 10$
$\Rightarrow x \le -15$ or $x \ge 5$
$\Rightarrow x \in (-\infty, -15] \cup [5, \infty)$

45) The constant term in the expansion of $(x^2 - [1/x^2])^{16}$ is ....

a) $^{16}C_8$ b) $^{16}C_7$
c) $^{16}C_9$ d) $^{16}C_{10}$

Answer: (a)

Let T_{r+1} be the constant term.

$\Rightarrow T_{r+1} = {}^{16}C_r (x^2)^{16-r} (1/x^2)^r$
$= {}^{16}C_r x^{32-4r}$

For constant term $32 - 4r = 0$

$\Rightarrow 4r = 32$
$\Rightarrow r = 8$
$\Rightarrow T_{8+1} = {}^{16}C_8$

46) The product of the degree and other of the D.E. $\left(\frac{d^2y}{dx^2}\right)^2 - \left(\frac{dy}{dx}\right)^3 = y^3$ is

(A) 4 (B) 6
(C) 2 (D) 3

Ans: (A) 4

Expln:- The order of a differential equation is that of the highest order derivative. Here it is 2. The degree of a D.E. is the degree of the highest ordered derivative. Here it is 2. Their product is 4

47. The value of the integral $\int_0^{\pi} \frac{x \sin^{2n} x}{\sin^{2n} x + \cos^{2n} x} dx$ is

(A) π^2 (B) $2\pi^2$
(C) $\frac{\pi^2}{4}$ (D) $\frac{\pi^2}{2}$

Ans : (C) $\frac{\pi^2}{4}$

$$I = \int_0^{\pi} \frac{x \sin^{2n} x\, dx}{\sin^{2n} x + \cos^{2n} x} \quad ...(1)$$

$$I = \int_0^{\pi} \frac{(\pi - x) \sin^{2n}(\pi - x)}{\sin^{2n} x + \cos^{2n} x} dx = \int_0^{\pi} \frac{(\pi - x) \sin^{2n} x}{\sin^{2n} x + \cos^{2n} x} dx \quad ...(2)$$

Adding (1) and (2),

$$2I = \pi \int_0^{\pi} \frac{x \sin^{2n} x\, dx}{\sin^{2n} x + \cos^{2n} x}$$

$$2I = \pi.\, 2 \int_0^{\pi/2} \frac{\sin^{2n} x\, dx}{\sin^{2n} x + \cos^{2n} x} \text{ (applying } \int_0^{2a} f(x)\,dx = 2\int_0^a f(x)\,dx \text{ if } f(2a - x) = f(x)]$$

$$I = \pi \int_0^{\pi/2} \frac{\sin^{2n} x}{\sin^{2n} x + \cos^{2n} x} dx \quad ...(3)$$

$$= \pi \int_0^{\pi/2} \frac{\sin^{2n}\left(\frac{\pi}{2} - x\right)}{\sin^{2n}\left(\frac{\pi}{2} - x\right) + \cos^{2n}\left(\frac{\pi}{2} - x\right)} dx$$

$$I = \pi \int_0^{\pi/2} \frac{\cos^{2n} x}{\cos^{2n} x + \sin^{2x} n} dx \quad ...(4)$$

Adding (3) and (4), $2I = \pi \int_0^{\pi/2} \frac{\sin^{2n} x + \cos^{2n} x}{\sin^{2n} x + \cos^{2n} x} dx$

$2I = \pi \int_0^{\pi/2} dx.$ $2I = \pi[x]_0^{\pi/2} = \pi.\frac{\pi}{2}$ $\therefore I = \frac{\pi^2}{4}.$

48) Everybody in a room shakes hands with everybody else. The total number of handshakes is 45. The total number of persons in the room is

a) 9 b) 10
c) 5 d) 15

Answer: (b)

Let the total number of handshake $= {}^nC_2$
We know $\Rightarrow {}^nC_2 = 45$
$\Rightarrow n!/2!\,!(n-2)! = 45$
$\Rightarrow n(n-1)/2 = 45$
$\Rightarrow n^2 - n - 90 = 0$
$\Rightarrow n = 10, -9$ (not possible)
Total no. of persons in the room is 10.

ದಿಕ್ಸೂಚಿ ನಿಮಗೆ ಇಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

NEET: PHYSICS

14) Radii of curvature of a converging lens are in the ratio 1:2. Its focal length is 6 cm and refractive index is 1.5. Then its radii of curvature are .... respectively.

(a) 9 cm and 18 cm (b) 6 cm and 12 cm
(c) 3 cm and 6 cm (d) 4.5 cm and 9 cm

Ans:- (d)

Exp ln– Given, $\frac{R_1}{R_2} = \frac{1}{2}$, $f = 6cm$ & $\mu = 1.5$

Let $R_1 = R$ and $R_2 = 2R$

We know the focal length of converging lens By using relation $\frac{1}{f} = (\mu - 1)\left[\frac{1}{R_1} + \frac{1}{R_2}\right]$

Substituting all the values, we get $R = 4.5$ cm

$\therefore R_1 = 4.5$ cm and $R_2 = 2 \times 4.5 = 9$ cm

15) Two mental spheres of radii 0.01 m and 0.02 m are given a charge of 15 mC and 45 mC respectively. They are then connected by a wire. The final charge on the first sphere is .... $\times 10^{-3}$C.

(a) 40 (b) 30
(c) 20 (d) 10

Ans:- (c)

Expln- When two metal spheres are joined by a wire, charge flows from one at higher potential to the other at lower potential, till they acquire the same potential.

$$\therefore V_1 = V_2$$


$$\frac{q_1}{4\pi\varepsilon_0 r_1} = \frac{q_2}{4\pi\varepsilon_0 r_2}$$

$$\Rightarrow \frac{r_1}{r_2} = \frac{q_1}{q_2} = \frac{15\text{ mC}}{45\text{ mC}} = \frac{1}{3}$$

Final charge on first sphere,

$$q_1 = \frac{1}{3}(q_1 + q_2) = \frac{1}{3} \times 60 = 20\text{ mC}$$

16) See the diagram. Area of each plate is 2.0 m² and d = 2 × 10⁻³ m. A charge of 8.85 × 10⁻⁸ C is given to *Q*. Then the potential of Q becomes



(a) 13 V (b) 10 V
(c) 6.67 V (d) 8.825 V

Ans:- (c)


Expln- In the given arrangement, plate Q is common for two capacitors which are connected in parallel.

$$\therefore C_{eff} = C_P = C_1 + C_2$$

$$\Rightarrow C_P = \frac{\varepsilon_0 A}{d} + \frac{\varepsilon_0 A}{2d} = \frac{2\varepsilon_0 A}{2d}$$

The given arrangement can be shown as

Let V be the potential difference across the capacitor, which is equal to the potential of the plate Q



So, $C = \frac{q}{V}$ i.e., $C_{eff} = \frac{q}{V}$

i.e., $\frac{3\varepsilon_0 A}{2d} = \frac{8.85 \times 10^{-8}}{V}$

$\Rightarrow V = \frac{8.85 \times 10^{-8} \times 2 \times 2 \times 10^{-3}}{3 \times 8.85 \times 10^{-12} \times 2} = \frac{20}{3} = 6.67\text{ V}$

17) The ratio of radius of gyration of a solid sphere of mass M and radius R about its own axis to the radius of gyration of the thin hollow sphere of same mass and radius about its axis is:

a) 5 : 2 b) 3 : 5
c) 5 : 3 d) 2 : 5

Ans:- b

18) For Young's double slit experiment, two statements are given below:

Statement I: If screen is moved away from the plane of slits, angular separation of the fringes remains constant.

Statement II: If the monochromatic source is replaced by another monochromatic source of larger wavelength, the angular separation of fringes decreases. In the light of the above statements,

choose the correct answer from the options given below:

a) Statement I is false but Statement II is true
b) Both Statement I and Statement II is true
c) Both Statement I and Statement II are true
d) Statement I is true but Statement II is false

Ans:- d

19) The concentric spheres of radii R and r have positive charges q_1 and q_2 with equal surface charge densities. What is the electric potential at their common centre?

(a) $\frac{\sigma}{\varepsilon_0}(R + r)$ (b) $\frac{\sigma}{\varepsilon_0}(R - r)$
(c) $\frac{\sigma}{\varepsilon_0}\left(\frac{1}{R} + \frac{1}{r}\right)$ (d) $\frac{\sigma}{\varepsilon_0}\left(\frac{1}{R}\right)$

Ans:- (a)

Expln- Potential at the centre due to sphere with radius R,

$$V_1 = \frac{q_1}{4\pi\varepsilon_0 R}$$

Potential at the centre due to sphere with radius r,

$$V_2 = \frac{q_2}{4\pi\varepsilon_0 r}$$

Given, surface charge densities for both spheres

$$\sigma = \sigma_R = \sigma_r$$

$$\text{i.e., } \frac{q_1}{4\pi\varepsilon_0 R^2} = \frac{q_2}{4\pi\varepsilon_0 r^2}$$

$$\Rightarrow q_1 = \frac{R^2}{r^2} q_2$$

Total potential at the centre due to both spheres

$$V = V_1 + V_2$$

$$= \frac{q_1}{4\pi\varepsilon_0 R} + \frac{q_2}{4\pi\varepsilon_0 r} = \frac{1}{4\pi\varepsilon_0}\left(\frac{q_1}{R} + \frac{q_2}{r}\right)$$

$$= \frac{q_2}{4\pi\varepsilon_0}\left(\frac{R + r}{r^2}\right) = \frac{q_2}{4\pi r^2 \varepsilon_0}(R + r) = \frac{\sigma}{\varepsilon_0}(R + r)$$

ರಾಜ್ಯದ ಸ್ವಾಯತ್ತೆ– ಉನ್ನತ ಸಮಿತಿ ರಚನೆಗೆ ನಿರ್ಧಾರ

ಚೆನ್ನೈ (ಪಿಟಿಐ): 'ರಾಜ್ಯಗಳ ಹಕ್ಕುಗಳನ್ನು ಕೇಂದ್ರ ಸರ್ಕಾರವು ನಿಧಾನವಾಗಿ ಕಸಿದುಕೊಳ್ಳುತ್ತಿದ್ದು, ರಾಜ್ಯದ ಸ್ವಾಯತ್ತೆ ಕುರಿತು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲಾಗುವುದು' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ವಿಧಾನಸಭೆಯಲ್ಲಿ ಮಂಗಳವಾರ ಘೋಷಿಸಿದ್ದಾರೆ.

ಮುಖ್ಯಮಂತ್ರಿಯ ನಿರ್ಧಾರವನ್ನು ತೀವ್ರವಾಗಿ ಟೀಕಿಸಿರುವ ವಿರೋಧ ಪಕ್ಷ ಎಐಎಡಿಎಂಕೆ, 'ಕಾಂಗ್ರೆಸ್ ನೇತೃತ್ವದ ಯುಪಿಎ ಜೊತೆಗೆ ಈ ಹಿಂದೆ ಅಧಿಕಾರ ಹಂಚಿಕೊಂಡಿದ್ದ ಡಿಎಂಕೆ ಇಷ್ಟು ವರ್ಷ ಏನು ಮಾಡುತ್ತಿತ್ತು' ಎಂದು ಪ್ರಶ್ನಿಸಿದೆ. ಜನರ ದೃಷ್ಟಿಯನ್ನು ಬೇರೆ ಕಡೆಗೆ ತಿರುಗಿಸಲು ಈ ನಿರ್ಧಾರ ಕೈಗೊಂಡಿದೆ ಎಂದು ದೂರಿದೆ.

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ವಿರುದ್ಧ ಕಿಡಿಕಾರಿದ ಸ್ಟಾಲಿನ್, 'ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕುರಿಯನ್ ಜೋಸೆಫ್ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲಾಗುತ್ತದೆ. 2026ರ ಜನವರಿಯಲ್ಲಿ ಸಮಿತಿಯು ಮಧ್ಯಂತರ ವರದಿ ಸಲ್ಲಿಸಲಿದೆ. ಎರಡು ವರ್ಷಗಳ ಬಳಿಕ ಅಂತಿಮ ವರದಿಯನ್ನು ನೀಡಲಿದೆ' ಎಂದು ತಿಳಿಸಿದರು.

ಮಾಜಿ ಅಧಿಕಾರಿ ಅಶೋಕ್‌ವರ್ಧನ್ ಶೆಟ್ಟಿ, ರಾಜ್ಯ ಯೋಜನಾ ಆಯೋಗದ ಮಾಜಿ ಉಪಾಧ್ಯಕ್ಷ ಎಂ.ನಾಗನಾಥನ್ ಅವರು ಸಮಿತಿಯ ಸದಸ್ಯರಾಗಿದ್ದಾರೆ.

'ರಾಜ್ಯಪಟ್ಟಿಯಿಂದ ಸಮವರ್ತಿ ಪಟ್ಟಿಗೆ ಕೆಲವು ವಿಷಯಗಳನ್ನು ಸೇರಿಸಲಾಗಿದೆ. ಅವನ್ನು ರಾಜ್ಯಪಟ್ಟಿಗೇ ಕಾನೂನಿನ ಚೌಕಟ್ಟಿನಲ್ಲಿ ವರ್ಗಾಯಿಸುವ ಸಾಧ್ಯತೆಯ ಕುರಿತು ಸಮಿತಿಯು ಅಧ್ಯಯನ ನಡೆಸಲಿದೆ. ನೀಟ್ ವಿಚಾರದಲ್ಲಿ ರಾಜ್ಯಗಳ ವ್ಯಾಪ್ತಿಯ ಬಗ್ಗೆ ಕೂಡ ನಿರ್ಧರಿಸಲಿದೆ' ಎಂದು ಸ್ಟಾಲಿನ್ ತಿಳಿಸಿದರು.

ಸ್ಟಾಲಿನ್ ಘೋಷಣೆ ಮಾಡಿದ ಬೆನ್ನಲ್ಲೇ, ಬಿಜೆಪಿಯ ನಾಲ್ವರು ಶಾಸಕರು ಸದನ ಬಹಿಷ್ಕರಿಸಿ ಹೊರನಡೆದರು.

'ಅರ್ಧ ಶತಮಾನದ ಹಿಂದೆ ಸ್ಟಾಲಿನ್ ತಂದೆ ಕರುಣಾನಿಧಿ ಕೂಡ ಇದೇ ರೀತಿ ಸಮಿತಿ ರಚಿಸಿದ್ದರು. ಮುಂದಿನ ವರ್ಷ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, ಜನರ ದೃಷ್ಟಿಯನ್ನು ಬೇರೆ ಕಡೆಗೆ ತಿರುಗಿಸುವ ದೃಷ್ಟಿಯಿಂದ ಡಿಎಂಕೆ ಸರ್ಕಾರ ಈ ನಿರ್ಧಾರ ಕೈಗೊಂಡಿದೆ' ಎಂದು ಆರೋಪಿಸಿ, ಎಐಡಿಎಂಕೆ ಶಾಸಕಾಂಗ ಪಕ್ಷದ ಉಪನಾಯಕ ಆರ್.ಬಿ. ಉದಯ್‌ಕುಮಾರ್ ನೇತೃತ್ವದಲ್ಲಿ ಸದನ ಬಹಿಷ್ಕರಿಸಿದರು.

ಡಿಎಂಕೆ ಸಮರ್ಥನೆ: 'ರಾಜ್ಯ ಸರ್ಕಾರವು ಶಿಕ್ಷಣ ವಿಷಯವನ್ನು ರಾಜ್ಯಪಟ್ಟಿಗೆ ತರಲು ನಿರ್ಧರಿಸಿದೆ. ಕೇವಲ ಚುನಾವಣೆ ದೃಷ್ಟಿಯಿಂದ ಈ ನಿರ್ಧಾರ ಮಾಡಿಲ್ಲ, ಮುಂದಿನ ವರ್ಷ ನಡೆಯುವ ಚುನಾವಣೆಯಲ್ಲಿ ಸ್ಟಾಲಿನ್ ನಾಯಕತ್ವದಲ್ಲಿ ಮತ್ತೆ ಅಧಿಕಾರಕ್ಕೆ ಬರಲಿದೆ' ಎಂದು ತಮಿಳುನಾಡು ಕಾನೂನು ಸಚಿವ ಎಸ್.ರಘುಪತಿ ತಿಳಿಸಿದ್ದಾರೆ.

ಅಲಹಾಬಾದ್ ಹೈಕೋರ್ಟ್ ಮಾತಿಗೆ 'ಸುಪ್ರೀಂ' ಆಕ್ಷೇಪ

ಒಂದನೇ ಪುಟದಿಂದ...

ಈ ವಿಚಾರಣೆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್, 'ಮಹಿಳೆಯೇ ಸಮಸ್ಯೆ ತಂದುಕೊಂಡಳು' ಎಂಬ ಮಾತಿನ ಬಗ್ಗೆ ಆಕ್ಷೇಪ ದಾಖಲಿಸಿದೆ.

'ಜಾಮೀನು ಕೊಡಬೇಕು ಎಂದು ಬಯಸಿದರೆ ಅದು ಸರಿ. ಆದರೆ ಇಂತಹ ಮಾತುಗಳನ್ನು ಹೇಳುವುದು ಏಕೆ... ಪೀಠದಲ್ಲಿ ಇರುವವರು ಬಹಳ ಜಾಗರೂಕರಾಗಿ ಇರಬೇಕಾಗುತ್ತದೆ' ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

ಇಂತಹ ಮಾತನ್ನು ಜನಸಾಮಾನ್ಯರು ಹೇಗೆ ಗ್ರಹಿಸಬಹುದು ಎಂಬುದನ್ನೂ ಆಲೋಚಿಸಬೇಕು ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು.

'ಶಾಖಾಘಾತ–ತೆಲಂಗಾಣದಲ್ಲಿ ವಿಕೋಪ'

ಹೈದರಾಬಾದ್ (ಪಿಟಿಐ): 'ಶಾಖಾಘಾತ (ಬಿಸಿಲಿನ ತಾಪ)/ ಬಿಸಿಗಾಳಿಯನ್ನು ವಿಕೋಪ' ಎಂದು ತೆಲಂಗಾಣ ಸರ್ಕಾರ ಮಂಗಳವಾರ ಘೋಷಿಸಿದೆ.

ಶಾಖಾಘಾತದಿಂದ ಸಂತ್ರಸ್ತರಾದವರ ಕುಟುಂಬಗಳಿಗೆ ಪರಿಹಾರ ನೀಡಲು ಈ ಹೊಸ ಆದೇಶ ನೆರವಾಗಲಿದೆ.

'ಎಲ್ಲ ವಿಚಾರಗಳನ್ನು ಪರಿಗಣಿಸಿ, ಶಾಖಾಘಾತವನ್ನು ರಾಜ್ಯದಲ್ಲಿನ ವಿಕೋಪ ಎಂದು ಘೋಷಿಸಿದ್ದು, ಸಂತ್ರಸ್ತ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಲಾಗುತ್ತದೆ' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಸರ್ಕಾರದ ಹೊಸ ಆದೇಶದಿಂದ ಸಂತ್ರಸ್ತ ಕುಟುಂಬದ ಸದಸ್ಯರಿಗೆ ₹4 ಲಕ್ಷ ಆರ್ಥಿಕ ನೆರವು ದೊರೆಯಲಿದೆ.



❦ ಸುಭಾಷಿತ ❦

ನಮ್ಮ ಬಾಳು ನಿತ್ಯದ ಕುಸ್ತಿ. ಅದಕ್ಕೆ ನಾವು ಹತ್ತೆಂಟು ಕೈಪಟ್ಟು, ಕಾಲು ವರಸೆಗಳನ್ನು ಅಭ್ಯಾಸ ಮಾಡಿಕೊಂಡಿರಬೇಕು.
-ಡಿ.ವಿ.ಜಿ.

ವಕ್ಫ್ ವಿಚಾರವಾಗಿ ಹಿಂಸಾಚಾರ ಕೋಮುವಾದದ ಹುಲಿ ಸವಾರಿ

ವಕ್ಫ್ ತಿದ್ದುಪಡಿ ಕಾಯ್ದೆಯನ್ನು ವಿರೋಧಿಸಿ ಪಶ್ಚಿಮ ಬಂಗಾಳದ ಮುರ್ಶಿದಾಬಾದ್ ಜಿಲ್ಲೆಯಲ್ಲಿ ನಡೆದ ಪ್ರತಿಭಟನೆಗಳು ಕೋಮು ಹಿಂಸಾಚಾರದ ರೂಪ ಪಡೆದು, ಮೂವರ ಸಾವಿಗೆ ಕಾರಣವಾಗಿವೆ. ಹಿಂಸಾಚಾರದ ಪರಿಣಾಮವಾಗಿ ಹಲವರು ತಮ್ಮ ಊರು ತೊರೆದಿದ್ದಾರೆ. ಇತರ ಕೆಲವೆಡೆಗಳಲ್ಲಿಯೂ ಸಮಸ್ಯೆ ಸೃಷ್ಟಿಯಾಗಿದೆ. ಹಲವೆಡೆ ಪ್ರತಿಭಟನಕಾರರು ಪೊಲೀಸರ ಜೊತೆ ಸಂಘರ್ಷಕ್ಕೆ ಇಳಿದಿದ್ದಾರೆ, ಹಲವರ ಬಂಧನ ಆಗಿದೆ. ಪಶ್ಚಿಮ ಬಂಗಾಳದಲ್ಲಿ ಸಮುದಾಯಗಳ ನೆಲೆಯಲ್ಲಿ ಇರುವ ಒಡಕನ್ನು ಎಲ್ಲ ರಾಜಕೀಯ ಪಕ್ಷಗಳು ದುರ್ಬಳಕೆ ಮಾಡಿಕೊಂಡಿವೆ, ಈ ಬಾರಿಯೂ ಅದು ಮುಂದುವರಿದಿದೆ. ಪಶ್ಚಿಮ ಬಂಗಾಳದ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷವು ಮುಸ್ಲಿಂ ಸಮುದಾಯದ ಬೆಂಬಲ ಹೊಂದಿದೆ. ಈ ಪಕ್ಷವು ವಕ್ಫ್ ಕಾಯ್ದೆ ವಿರೋಧಿಸಿ ಪ್ರತಿಭಟನೆ ನಡೆಸಿದವರಿಗೆ ಬೆಂಬಲ ನೀಡಿದೆ. ಈ ಕಾಯ್ದೆಯ ವಿಚಾರವಾಗಿ ಮುಸ್ಲಿಂ ಸಮುದಾಯದಲ್ಲಿ ಬಹಳಷ್ಟು ಆತಂಕಗಳು ಇವೆ. ಈ ಕಾಯ್ದೆಯ ಮೂಲಕ ವಕ್ಫ್ ಆಸ್ತಿಗಳನ್ನು ಸರ್ಕಾರವು ತನ್ನ ನಿಯಂತ್ರಣಕ್ಕೆ ಪಡೆಯಬಹುದು ಎಂಬುದು ಅವರಲ್ಲಿನ ಒಂದು ಆತಂಕ. ಮುಸ್ಲಿಮರ ಹಿತಾಸಕ್ತಿಗಳನ್ನು ರಕ್ಷಿಸಲಾಗುತ್ತದೆ ಎಂಬ ಭರವಸೆಯನ್ನು ಅಲ್ಲಿನ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತೆ ಮತ್ತೆ ನೀಡಿದ್ದಾರೆ. ಆದರೆ, ಕಾಯ್ದೆಯನ್ನು ಪಶ್ಚಿಮ ಬಂಗಾಳದಲ್ಲಿ ಜಾರಿಗೆ ತರುವುದಿಲ್ಲ ಎಂದು ಅವರು ಘೋಷಿಸಿದ್ದುದು ತಪ್ಪು.



ಕೋಮುವಾದದ ಹುಲಿ ಸವಾರಿಯು ಸಮಾಜಕ್ಕೂ ತಮಗೂ ಹಾನಿಯನ್ನೇ ಉಂಟುಮಾಡುತ್ತದೆ ಎಂಬ ಪಾಠವನ್ನು ಟಿಎಂಸಿ ಮತ್ತು ಬಿಜೆಪಿ ಉಪೇಕ್ಷಿಸಿವೆ

ಪಶ್ಚಿಮ ಬಂಗಾಳದ ಪ್ರಮುಖ ವಿರೋಧ ಪಕ್ಷವಾದ ಬಿಜೆಪಿಯು ಬಹುಸಂಖ್ಯಾತ ಹಿಂದೂಗಳ ಭಾವನೆಗಳನ್ನು ರಾಜಕೀಯಕ್ಕೆ ಬಳಸಿಕೊಳ್ಳಲು ಮುಂದಾಗಿದೆ. ರಾಜ್ಯದಲ್ಲಿ ಈಚೆಗೆ ನಡೆದ ರಾಮನವಮಿ ಮೆರವಣಿಗೆಗೆ ಕೋಮು ಬಣ್ಣ ಇತ್ತು, ಅದಕ್ಕೆ ಬಿಜೆಪಿಯ ಬೆಂಬಲ ಇತ್ತು. 25 ಸಾವಿರ ಮಂದಿ ಶಾಲಾ ಶಿಕ್ಷಕರ ನೇಮಕಾತಿಯನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದ ಪರಿಣಾಮವಾಗಿ ಮಮತಾ ಬ್ಯಾನರ್ಜಿ ನೇತೃತ್ವದ ಸರ್ಕಾರಕ್ಕೆ ಉಂಟಾಗಿರುವ ಹಿನ್ನಡೆಯಿಂದ ಸಾರ್ವಜನಿಕರ ಗಮನವನ್ನು ಬೇರೆಡೆ ತಿರುಗಿಸಲು ಟಿಎಂಸಿಯು ಕೋಮು ಆಧಾರದಲ್ಲಿ ಒಡಕು ಸೃಷ್ಟಿಸುತ್ತಿದೆ ಎಂದು ಬಿಜೆಪಿ ಆರೋಪಿಸಿದೆ. ರಾಜ್ಯದಲ್ಲಿ ಹಿಂಸಾಚಾರವನ್ನು ತಡೆಯುವಲ್ಲಿ ಪೊಲೀಸರು ಆರಂಭದಿಂದಲೂ ವಿಫಲರಾಗಿದ್ದಾರೆ. ಪರಿಸ್ಥಿತಿಯನ್ನು ನಿಯಂತ್ರಣದಲ್ಲಿ ಇರಿಸಲು ಸರ್ಕಾರವು ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿದ್ದರೆ ಜೀವಹಾನಿ, ಆಸ್ತಿ ನಷ್ಟ ತಡೆಯಬಹುದಿತ್ತು ಮತ್ತು ಜನ ಜೀವಭಯದಿಂದ ತಮ್ಮ ಊರು ತೊರೆದು ಬೇರೆಡೆಗಳಿಗೆ ಓಡಿ ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಪರಿಸ್ಥಿತಿ ಕೈಮೀರುತ್ತಿದೆ ಎಂಬುದನ್ನು ಅರಿತುಕೊಳ್ಳುವಲ್ಲಿ ಅಲ್ಲಿ ಗುಪ್ತಚರ ವ್ಯವಸ್ಥೆ ಕೂಡ ವಿಫಲವಾಗಿದೆ. ಹಿಂಸಾಚಾರಕ್ಕೆ ತುತ್ತಾಗಿರುವ ಪ್ರದೇಶಗಳಲ್ಲಿ ಈಗ ಕೇಂದ್ರದ ಪಡೆಗಳನ್ನು ನಿಯೋಜಿಸಲಾಗಿದೆ.

ಕೋಮು ಹಿಂಸಾಚಾರವು ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ಸಮಸ್ಯೆಯಷ್ಟೇ ಅಲ್ಲ. ಇಂತಹ ಹಿಂಸಾಚಾರಗಳ ಹಿಂದೆ ಹಲವು ಸಂದರ್ಭಗಳಲ್ಲಿ ರಾಜಕೀಯ ಉದ್ದೇಶವಿರುತ್ತದೆ. ಕೋಮು ಹಿಂಸಾಚಾರ ನಡೆದಂತಹ ಸಂದರ್ಭಗಳಲ್ಲಿ 'ಪರಿಸ್ಥಿತಿಯು ಇದ್ದಕ್ಕಿದ್ದಂತೆ ಕೈಮೀರಿತು' ಎಂದು ಪ್ರತಿ ಸಲವೂ ಹೇಳಲಾಗದು. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಮತ್ತು ಟಿಎಂಸಿ ಪರಸ್ಪರ ದೂಷಣೆಯಲ್ಲಿ ತೊಡಗಿವೆ. ಹಿಂಸಾಚಾರವನ್ನು ಸೃಷ್ಟಿ ಮಾಡಿದವರು ಕೆಲವರಾದರೂ, ಅದಕ್ಕೆ ಸಮುದಾಯಗಳನ್ನು ಹೊಣೆ ಮಾಡಲಾಗುತ್ತಿದೆ. ಹಿಂಸಾಚಾರದಿಂದ ನಲುಗಿರುವ ಪ್ರದೇಶಗಳಲ್ಲಿ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆಯ (ಎಎಫ್‌ಎಸ್‌ಪಿಎ) ಅಡಿಯಲ್ಲಿ ವಿಶೇಷ ಕ್ರಮಗಳನ್ನು ಜಾರಿಗೆ ತರಬೇಕು ಎಂದು ಬಿಜೆಪಿ ಆಗ್ರಹಿಸಿದೆ. ಸಮಸ್ಯೆ ಸೃಷ್ಟಿಸಲು ಬಿಜೆಪಿಯು ಹಿಂಸಾಚಾರದ ನಕಲಿ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ಹರಿಯಬಿಡುತ್ತಿದೆ ಎಂದು ಟಿಎಂಸಿ ಆರೋಪಿಸಿದೆ. ಎರಡೂ ಪಕ್ಷಗಳು ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಯ ಮೇಲೆ ಕಣ್ಣಿಟ್ಟಿವೆ. ಆದರೆ, ಕೋಮುವಾದದ ಹುಲಿ ಸವಾರಿಯು ಸಮಾಜಕ್ಕೂ ತಮಗೂ ಹಾನಿಯನ್ನೇ ಉಂಟುಮಾಡುತ್ತದೆ ಎಂಬ ಪಾಠವನ್ನು ಎರಡೂ ಪಕ್ಷಗಳು ಉಪೇಕ್ಷಿಸಿವೆ.

ದಿನದ ಟ್ವೀಟ್

ನೈರ್ಮಲ್ಯ ಕಾಯ್ದುಕೊಳ್ಳೋಣ



ಬೀದಿಗಳಲ್ಲಿ ಕಸ ಹಾಕಿದಾಗ ಬಿಬಿಎಂಪಿ ಮತ್ತು ಮಾರಾಟಗಾರ ಇಬ್ಬರಿಗೂ ದಂಡ ವಿಧಿಸಬೇಕು. ಈ ವಿಷಯದಲ್ಲಿ ನಿರ್ಲಕ್ಷ್ಯ ವಹಿಸಿದರೆ ದಂಡ ತೆರಬೇಕಾಗುತ್ತದೆ ಮತ್ತು ಕಡ್ಡಾಯವಾಗಿ ಸಮುದಾಯ ಸೇವೆ ಮಾಡಬೇಕಾಗುತ್ತದೆ ಎಂಬುದನ್ನು ಖಾತರಿಪಡಿಸಲು ಕೋರ್ಟ್‌ಗಳು ಮಧ್ಯಪ್ರವೇಶಿಸಬೇಕು.

(ಬೆಂಗಳೂರಿನ ಕೆಲವು ಸಂಚಾರ ಸಿಗ್ನಲ್‌ಗಳ ಬಳಿ ಪ್ಯಾಕೆಟ್‌ಗಳಲ್ಲಿ ಮಾರುವ ಮಜ್ಜಿಗೆಯನ್ನು ಖರೀದಿಸಿ ಕುಡಿಯುವ ಗ್ರಾಹಕರು, ಬಳಿಕ ಆ ಪ್ಲಾಸ್ಟಿಕ್ ಪ್ಯಾಕೆಟ್‌ಗಳನ್ನು ಎಲ್ಲೆಂದರಲ್ಲಿ ಬಿಸಾಡಿ ರಸ್ತೆಗಳನ್ನು ಗಲೀಜು ಮಾಡುತ್ತಿರುವುದಕ್ಕೆ ಪ್ರತಿಕ್ರಿಯೆ)

ವಿನೋದ್ ಜೇಕಬ್

ಕಿಡಿನುಡಿ

ಸರ್ಕಾರವನ್ನು ಬೈದಾಡಿಕೊಂಡು ಓಡಾಡಿದರೆ ಒಕ್ಕಲಿಗರನ್ನು ಉದ್ಧಾರ ಮಾಡುವುದಕ್ಕಾಗದು. ಜಾತಿ ಜನಗಣತಿಯನ್ನು ಡಿ.ಕೆ.ಶಿವಕುಮಾರ್ ಮಾಡಿಲ್ಲ. ಒಬ್ಬರ ಕಾಲನ್ನು ಇನ್ನೊಬ್ಬರು ಎಳೆದಿದ್ದರಿಂದ (ಒಕ್ಕಲಿಗ) ಸಮಾಜ ಈ ಪರಿಸ್ಥಿತಿಗೆ ಬಂದಿದೆ. ಸಮಾಜ ಸಂಕಷ್ಟದಲ್ಲಿ ಇರುವಾಗ ನಾವೆಲ್ಲರೂ ಒಗ್ಗಟ್ಟಾಗಿರಬೇಕು.



('ದ್ವೇಷದ ಜನಗಣತಿ' ಎಂಬ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರ ಹೇಳಿಕೆಗೆ ಪ್ರತಿಕ್ರಿಯೆ)

ಪಿ.ರವಿಕುಮಾರ್ ಗಣಿಗ, ಕಾಂಗ್ರೆಸ್ ಶಾಸಕ

25 ವರ್ಷಗಳ ಹಿಂದೆ

ಭಾನುವಾರ, 16-4-2000

● ಬಳಕೆಯಾಗದ ಸಂಸದರ ನಿಧಿ ಲೋಕಸಭಾಧ್ಯಕ್ಷರ ಕಳವಳ

ಹೈದರಾಬಾದ್, ಏ. 15 (ಪಿಟಿಐ, ಯುಎನ್‌ಐ)– ಸಂಸದರ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆಯಡಿ ಬಿಡುಗಡೆಯಾಗಿರುವ ಹಣ ನಿಷ್ಪ್ರಯೋಜಕವಾಗಿ ಉಳಿದು ಹೋಗಿರುವ ಬಗ್ಗೆ ಲೋಕಸಭಾಧ್ಯಕ್ಷ ಜಿ.ಎಂ.ಸಿ. ಬಾಲಯೋಗಿ ಕಳವಳ ವ್ಯಕ್ತಪಡಿಸಿದರು.

'ಈ ವರ್ಷದ ಮಾರ್ಚ್ 31ರ ನಂತರ ದೊರೆತ ಮಾಹಿತಿಯಂತೆ 1993ರ ಡಿಸೆಂಬರ್‌ನಲ್ಲಿ ಈ ಯೋಜನೆ ಆರಂಭವಾದಾಗಿನಿಂದ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ರೂ. 5,016 ಕೋಟಿಗಳಲ್ಲಿ, ರೂ. 1,200 ಕೋಟಿ ಯಾವುದೇ ಕಾಮಗಾರಿಗಳಿಗೆ ಬಳಕೆಯಾಗದೆ ವಿವಿಧ ಬ್ಯಾಂಕುಗಳಲ್ಲಿ ಉಳಿದಿದೆ' ಎಂದರು.

● ದಳ ಬಣಗಳ ಏಕತೆ ಯತ್ನ

ಬೆಂಗಳೂರು, ಏ. 15– ಅಧಿಕಾರವಿಲ್ಲದಾಗ ಒಂದಾಗುವುದು, ಅಧಿಕಾರ ಇದ್ದಾಗ ಕಿತ್ತಾಡಿ ಬೇರೆಯಾಗುವುದು ಜನತಾದಳ ಮುಖಂಡರ ಜಾಯಮಾನ...

ಕಳೆದ ಒಂದು ದಶಕದಲ್ಲಿ ಒಗ್ಗೂಡುವುದು– ವಿಭಜನೆಯಾಗುವುದು ಹೀಗೆ ಒಂದು ಸುತ್ತು ಮುಗಿಸಿರುವ ಅವರು, ಈಗ ಇಬ್ಭಾಗವಾಗಿರುವ ಪಕ್ಷವನ್ನು ಮತ್ತೆ ಒಂದುಗೂಡಿಸುವ ಮಂತ್ರ ಜಪಿಸುತ್ತಿದ್ದಾರೆ. ರಾಜ್ಯದಲ್ಲಿ ಜನತಾದಳ ಒಗ್ಗಟ್ಟಿನಿಂದ ಇರುವುದಿಲ್ಲ ಎಂಬುದನ್ನು ಕಳೆದ 1999ರ ಸಾರ್ವತ್ರಿಕ ಚುನಾವಣೆಯಲ್ಲಿ ಅವರು ವಿಭಜನೆಯಾಗುವ ಮೂಲಕ ಸಾಬೀತುಪಡಿಸಿದ್ದಾರೆ. ತಮಗೆ ರಾಜಕೀಯ ಭವಿಷ್ಯ ಇರಬೇಕಾದರೆ ಒಗ್ಗಟ್ಟಾಗದೆ ವಿಧಿಯೇ ಇಲ್ಲ ಎಂಬ ಅರಿವು ಈಗ ದಳ (ಯು) ಮತ್ತು ದಳ (ಎಸ್) ಪಕ್ಷಗಳ ಬಹುತೇಕ ನಾಯಕರಲ್ಲಿ ಮೂಡಿದೆ. ಇದಕ್ಕೆ ಆಯಾ ಪಕ್ಷಗಳ ಹಿರಿಯ ನಾಯಕರೇ ತೊಡರುಗಾಲು ಹಾಕುತ್ತಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 16-4-1975

● 'ನಮ್ಮ ಗಣಿ ಶ್ರೀಮಂತ... ನಾವು ಬಡವರು'

ಕೆ.ಜಿ.ಎಫ್, ಏ. 15– ಝಳಝಳ ಬಿಸಿಲು, ಬಿಸಿಯುಗುಳುವ ಡಾಂಬರು ರಸ್ತೆ, ಬರಿಗಾಲಿನಲ್ಲಿ ಮೂರು ಮೈಲಿ ನಡಿಗೆ, ನೆತ್ತಿಗೆ ಹಸಿರು ಸೊಪ್ಪಿನ ನೆರಳು.

ತಾವು ಕೆಲಸ ಮಾಡುವುದು ಸರ್ಕಾರದ ಶ್ರೀಮಂತ ಗಣಿಯಲ್ಲಿ, ಆದರೆ ತಾವು ಸರ್ಕಾರಿ ಉದ್ಯಮಗಳ ನೌಕರರಲ್ಲೇ ಅತ್ಯಂತ ಬಡವರು ಅನ್ನುವುದು ಈಚೆಗೆ 'ಭಾರತ್ ಚಿನ್ನದ ಗಣಿ' ಆದ ಹಿಂದಿನ 'ಕೋಲಾರ ಚಿನ್ನದ ಗಣಿ' ಕೆಲಸಗಾರರ ಕೊರಗು, ಪ್ರತಿಭಟನೆ.

ಹದಿನಾರು ದಿನದಿಂದ 'ಪೂರ್ಣ' ಮುಷ್ಕರ ಹೂಡಿರುವ ಕೆಲಸಗಾರರು ಮಂಗಳವಾರ ಸಾವಿರಾರು ಸಂಖ್ಯೆಯಲ್ಲಿ ಹೊರಟಿದ್ದರು. ಅವರ ಗುರಿ ಉದ್ಯಮದ ಅಧ್ಯಕ್ಷರ ಕಾರ್ಯಾಲಯ. ಉದ್ದೇಶ ಘೇರಾವ್ ಅಂದರು, ಧರಣಿ ಅಂದರು.

ಸುಮಾರು ಒಂದೂವರೆ ಗಂಟೆಕಾಲ ಕಾರ್ಯಾಲಯದ ಮುಂಭಾಗದಲ್ಲಿ ಬಿಸಿಲಿನಲ್ಲೇ ಕೂತರು, ನಿಂತರು, ಆಡಳಿತದ ವಿರುದ್ಧ ಘೋಷಣೆ ಕೂಗಿದರು. ತಾಳ್ಮೆಗೆಟ್ಟು ಹೊರಡುವಾಗ ಕೆಲವರು ಸಮೀಪದಲ್ಲೇ ಇದ್ದ ಗಣಿ ಆಡಳಿತ ಮಂಡಳಿಯ ಅಧ್ಯಕ್ಷ ಪ್ರೊ. ಸುಬ್ರಹ್ಮಣ್ಯಂ ಅವರ ಮನೆಗೆ ನುಗ್ಗಿ ಹೂವಿನ ಕುಂಡಗಳನ್ನು ನಾಶ ಮಾಡಿ, ಕಿಟಕಿ ಗಾಜನ್ನು ಒಡೆದರು.

ಮಾರ್ಚ್ 31ರಿಂದ ಮುಷ್ಕರ ಹೂಡಿರುವ ಸುಮಾರು ಹನ್ನೆರಡು ಸಾವಿರ ಮಂದಿ, ಹದಿನೈದು ದಿನಗಳಿಂದ ಸಭೆಗಳಲ್ಲಿ ಭಾಗವಹಿಸುತ್ತಿದ್ದರು, ನಾಯಕರ ಭಾಷಣಗಳನ್ನು ಕೇಳುತ್ತಿದ್ದರು. ಮಂಗಳವಾರ ಗಂಟಲು ಒಣಗುವಷ್ಟು ತಾವೇ ಕೂಗಿದರು.

ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಮೀಸಲಾತಿ: ಬೇಕು ರಾಜಕೀಯ ಇಚ್ಛಾಶಕ್ತಿ

ಸಾಮಾಜಿಕ 'ಲೋಪ'ಕ್ಕೆ ತಿಲಾಂಜಲಿ?



ವಿಶ್ಲೇಷಣೆ

ಯೋಗೇಂದ್ರ ಯಾದವ್

ಖಾಸಗಿ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಮೀಸಲಾತಿ ನೀಡಬೇಕು ಎಂಬ ಚಿಂತನೆ ಬಹಳ ಹಿಂದೆಯೇ ಬಂದಿತ್ತು. ಇಂತಹ ಮೀಸಲಾತಿಯ ಕಾನೂನು ಸಿಂಧುತ್ವದ ಕುರಿತ ವಿವಾದವನ್ನು ಸುಪ್ರೀಂ ಕೋರ್ಟ್ ಪರಿಹರಿಸಿ ದಶಕವೇ ಕಳೆದಿದೆ. ದೇಶದ ಅತಿ ದೊಡ್ಡ ವಿರೋಧ ಪಕ್ಷದ ಬೆಂಬಲ ಈ ಯೋಚನೆಗೆ ಇದೆ. ಸಮಸ್ಯೆ ಏನೆಂದರೆ, ಇದಕ್ಕೆ ಇನ್ನೇನು ಕಾಲ ಕೂಡಿಬಂತು ಅನ್ನುವಷ್ಟರಲ್ಲಿ ನಾವು ಒಂದು ಹೆಜ್ಜೆ ಹಿಂದೆಯೇ ಉಳಿದುಬಿಡುತ್ತೇವೆ. ಈ ನಡುವಿನ ಅವಧಿಯಲ್ಲಿ ಪ್ರಭಾವಿಗಳ ಗುಂಪು ಯಾವುದೇ ಚಿಂತನೆಯನ್ನು ಮುಂದೂಡಬಹುದು ಮತ್ತು ತಡೆಯಲೂಬಹುದು. ಈ ಚಿಂತನೆಯನ್ನು ಜಾರಿಗೆ ತರಲು ರಾಜಕೀಯ ಇಚ್ಛಾಶಕ್ತಿ ಬೇಕು.

ಈಗ, ಅಂತಹ ರಾಜಕೀಯ ಇಚ್ಛಾಶಕ್ತಿ ರೂಪುಗೊಂಡಿದೆಯೇ? ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಕಳೆದ ವಾರ ಹೇಳಿಕೆಯೊಂದನ್ನು ನೀಡಿದ್ದರು. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಒಬಿಸಿ ಅಭ್ಯರ್ಥಿಗಳಿಗೆ ಮೀಸಲಾತಿ ನೀಡಬೇಕು ಎಂಬ ತನ್ನ ಬಹುಕಾಲದ ಬೇಡಿಕೆಯನ್ನು ಪುನರುಚ್ಚರಿಸುವುದು ಈ ಹೇಳಿಕೆಯ ಉದ್ದೇಶವಾಗಿತ್ತು. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿಯೂ ಮೀಸಲಾತಿ ಒದಗಿಸುವುದಕ್ಕಾಗಿ ಸಂವಿಧಾನಕ್ಕೆ 2005ರಲ್ಲಿ ತಿದ್ದುಪಡಿ ಮಾಡಲಾಗಿತ್ತು. ಈ ಮೀಸಲಾತಿಯ ಕಾನೂನು ಸಿಂಧುತ್ವವನ್ನು ಸುಪ್ರೀಂ ಕೋರ್ಟ್ 2014ರಲ್ಲಿ ಎತ್ತಿ ಹಿಡಿದಿತ್ತು. ಕಾಂಗ್ರೆಸ್ ಪಕ್ಷದ 2024ರ ಲೋಕಸಭೆ ಚುನಾವಣೆಯ ಪ್ರಣಾಳಿಕೆಯಲ್ಲಿ ಇದನ್ನು ಸೇರಿಸಲಾಗಿತ್ತು. ಈಗ, ಇದು ಅನುಷ್ಠಾನಕ್ಕೆ ಬರುವ ರಾಜಕೀಯ ಸಾಧ್ಯತೆಗಳು ಹೆಚ್ಚು ಕಾಣಿಸುತ್ತಿವೆ.

ಕಾಂಗ್ರೆಸ್ ಪಕ್ಷ ಇಂತಹ ಬೇಡಿಕೆಯನ್ನು ಮುಂದಿಟ್ಟರೆ ಆಡಳಿತಾರೂಢ ಪಕ್ಷದ ನಿಲುವು ಏನಿರಬಹುದು ಎಂಬುದು ನಮಗೆ ತಿಳಿದಿಲ್ಲ. ಒಂದು ವಿಚಾರ ಖಚಿತ: ಮೀಸಲಾತಿ ಮತ್ತು ಸಾಮಾಜಿಕ ನ್ಯಾಯದ ಕುರಿತು ಇನ್ನೊಂದು ಸುತ್ತಿನ ಚರ್ಚೆಯನ್ನು ನಾವು ಆರಂಭಿಸಿದ್ದೇವೆ. ಉನ್ನತ ಶಿಕ್ಷಣವು ಪ್ರಬಲವಾದ ವ್ಯವಸ್ಥೆ. ಇಲ್ಲಿ 'ಅಸಮಾನತೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಿಕೊಂಡು ಬರಲಾಗಿದೆ' ಎಂದು ವಿದ್ವಾಂಸರು ಹೇಳುತ್ತಾರೆ. ಉನ್ನತ ಶಿಕ್ಷಣದ ಮೇಲ್‌ಸ್ತರದ ಸಂಸ್ಥೆಗಳನ್ನು ಜಾಣತನದಿಂದ ಖಾಸಗೀಕರಣ ಮಾಡಲಾಗಿದೆ. ಇವು ಪ್ರಬಲ ವರ್ಗ ಮತ್ತು ಪ್ರಬಲ ಜಾತಿಗಳ ಜನರ ನಿಯಂತ್ರಣದಲ್ಲಿ ಇರುವಂತೆ ನೋಡಿಕೊಳ್ಳಲಾಗಿದೆ. ಸಮಾನ ಅವಕಾಶಗಳಿಗೆ ಸಂಬಂಧಿಸಿ ಸಂವಿಧಾನ ನೀಡಿದ ಖಾತರಿಯ ಮೇಲೆ ಕನಿಷ್ಠ ಬದ್ಧತೆಯಾದರೂ ಇದ್ದರೆ, ಸರ್ಕಾರವು ಮಧ್ಯಪ್ರವೇಶಿಸಿ ಖಾಸಗಿ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಮೀಸಲಾತಿ ಜಾರಿ ಆಗುವಂತೆ ನೋಡಿಕೊಳ್ಳಬೇಕು.

ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಮಟ್ಟದ ಮತ್ತು ದೀರ್ಘಾವಧಿಯ ಎರಡು ಚಳವಳಿಗಳು ನಡೆಯುತ್ತಿವೆ. ಮೊದಲನೆಯದಾಗಿ, ಉನ್ನತ ಶಿಕ್ಷಣಕ್ಕೆ ಬರುವವರ ಸಂಖ್ಯೆಯಲ್ಲಿ ಅಭೂತಪೂರ್ವ ಏರಿಕೆಯಾಗಿದೆ. ಮುಖ್ಯವಾಗಿ, ಚಾರಿತ್ರಿಕವಾಗಿ ಕಲಿಕೆಯ ಅವಕಾಶ ನಿರಾಕರಿಸಲ್ಪಟ್ಟ ಸಮುದಾಯಗಳ ಜನರು ವಿಳಂಬವಾಗಿಯಾದರೂ ಉನ್ನತ ಶಿಕ್ಷಣಕ್ಕೆ ಪ್ರವೇಶಿಸುತ್ತಿದ್ದಾರೆ. ಈ ಪ್ರವೃತ್ತಿಯನ್ನು ಸತೀಶ್ ದೇಶಪಾಂಡೆ ಹೀಗೆ ವಿವರಿಸುತ್ತಾರೆ: '1990ರಿಂದ 2019ರ ನಡುವೆ ವಿಶ್ವವಿದ್ಯಾಲಯಗಳ ಸಂಖ್ಯೆಯಲ್ಲಿ ಐದೂವರೆ ಪಟ್ಟು ಏರಿಕೆಯಾಗಿದೆ. ಒಟ್ಟು ಪ್ರವೇಶಾತಿ ಏಳೂವರೆ ಪಟ್ಟು ಹೆಚ್ಚಳವಾಗಿದೆ. ಪರಿಶಿಷ್ಟ ಜಾತಿ, ಪಂಗಡ, ಒಬಿಸಿ ಮತ್ತು ಮುಸ್ಲಿಂನಂತಹ ಅಂಚಿನಲ್ಲಿರುವ ಸಮುದಾಯಗಳ ಪ್ರವೇಶಾತಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಈ ಸಮುದಾಯಗಳ ಮಹಿಳೆಯರ ಪ್ರವೇಶಾತಿಯೂ ಹೆಚ್ಚಳವಾಗಿದೆ'.

ಇದು ನಿಜವಾಗಿಯೂ ಒಳ್ಳೆಯ ಸುದ್ದಿ ಆಗಬೇಕಿತ್ತು. ಆದರೆ, ಎರಡನೇ ವಿದ್ಯಮಾನವು ಹಾಗೆ ಆಗಲು ಬಿಡುವುದಿಲ್ಲ: ಸರ್ಕಾರಿ ಉನ್ನತ ಶಿಕ್ಷಣ ವ್ಯವಸ್ಥೆಯ ಕುಸಿತ ಈ ಎರಡನೇ ವಿದ್ಯಮಾನವಾಗಿದೆ. ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳ ಸಂಖ್ಯೆಯು ಭಾರಿ ಪ್ರಮಾಣದಲ್ಲಿ ಏರಿಕೆ ಆಗಿರುವುದನ್ನೂ ನಾವು ನೋಡುತ್ತಿದ್ದೇವೆ. ಸರ್ಕಾರಿ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಿಗೆ ಸಮಾಜದ ಅಂಚಿನಲ್ಲಿರುವ ಸಮುದಾಯಗಳ ವಿದ್ಯಾರ್ಥಿಗಳು ದಾಂಗುಡಿ ಇಡುತ್ತಿದ್ದಾರೆ. ಆದರೆ, ಅಲ್ಲಿ ಬೋಧಕ ಸಿಬ್ಬಂದಿ ಇಲ್ಲ ಮತ್ತು ಕನಿಷ್ಠ ಅನುದಾನವೂ ದೊರಕುತ್ತಿಲ್ಲ. ಇವು ಸಮಯ ಕಳೆಯುವ ತಾಣಗಳಾಗುತ್ತಿವೆಯೇ ಹೊರತು ಜ್ಞಾನ, ಕೌಶಲ ಅಥವಾ ಉದ್ಯೋಗ ಒದಗಿಸುವ ಕೇಂದ್ರಗಳಾಗಿಲ್ಲ. ಖಾಸಗಿ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳ ಸ್ಥಿತಿ ಇದಕ್ಕೆ ವ್ಯತಿರಿಕ್ತವಾಗಿದೆ.

ಈ ಎರಡು ವಿದ್ಯಮಾನಗಳಿಂದಾಗಿ ಶೈಕ್ಷಣಿಕ ಅವಕಾಶಗಳ ಲಭ್ಯತೆಯಲ್ಲಿ ಬಹಳ ದೊಡ್ಡ ಅಂತರ ಸೃಷ್ಟಿಯಾಗಿದೆ. ಸತೀಶ್ ದೇಶಪಾಂಡೆ ಇದನ್ನು ಹೀಗೆ ಹೇಳುತ್ತಾರೆ: 'ಹೆಚ್ಚು ಜನರಿಗೆ ಉನ್ನತ ಶಿಕ್ಷಣ ಲಭ್ಯವಾಗುತ್ತಿದೆ ಎಂಬುದರಲ್ಲಿ ಒಂದು ವಿಚಿತ್ರ ಅಂಶವೂ ಅಡಗಿದೆ. ಕೆಳಸ್ತರಗಳ ಜನರು ಉನ್ನತ ಶಿಕ್ಷಣಕ್ಕೆ ಬಂದರೂ ಮೇಲಿನ ಸ್ತರದವರಿಗೆ ತಮ್ಮ ಮುನ್ನಡೆ ಅಥವಾ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು ಸಾಧ್ಯವಾಗಿದೆ'.

ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಯಾವುದೇ ಮೀಸಲಾತಿ ಇಲ್ಲ. ಆದರೆ, ಶ್ರೀಮಂತರಿಗೆ ಅಲಿಖಿತ ಮೀಸಲಾತಿ ದೊರೆಯುತ್ತಿದೆ. ಇತ್ತೀಚೆಗೆ ನಡೆಸಿದ ಸಮೀಕ್ಷೆಯೊಂದರ ಪ್ರಕಾರ, 2021-22ರಲ್ಲಿ ಖಾಸಗಿ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಲ್ಲಿ ಶೇ 60ರಷ್ಟು ಮಂದಿ ಮೇಲ್‌ಸ್ತರದ ಹಿಂದೂಗಳು (ಜನಸಂಖ್ಯೆಯಲ್ಲಿ ಅವರ ಪಾಲು ಶೇ 20ರಷ್ಟು). ಇತರರ ಜಾತಿವಾರು ಲೆಕ್ಕಾಚಾರ ಹೀಗಿದೆ: ಪರಿಶಿಷ್ಟ ಜಾತಿ ಶೇ 6.8 (ಜನಸಂಖ್ಯೆ ಶೇ 17), ಪರಿಶಿಷ್ಟ ಪಂಗಡ ಶೇ 3.6 (ಜನಸಂಖ್ಯೆ ಶೇ 9), ಒಬಿಸಿ ಶೇ 24.9 (ಜನಸಂಖ್ಯೆ ಶೇ 45–50), ಮುಸ್ಲಿಮರು ಶೇ 3.8 (ಜನಸಂಖ್ಯೆ ಶೇ 15). ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ, ಅಲ್ಲಿನ ಬಹುಬೇಡಿಕೆಯ ಕೋರ್ಸ್‌ಗಳಲ್ಲಿ ಈ ಸಮುದಾಯಗಳ ವಿದ್ಯಾರ್ಥಿಗಳು ಇನ್ನೂ ಕಡಿಮೆ ಇದ್ದಾರೆ.



ಮೀಸಲಾತಿಯು ಪರಿಸ್ಥಿತಿಯಲ್ಲಿ ವ್ಯತ್ಯಾಸ ಉಂಟು ಮಾಡುತ್ತದೆ. ಮೀಸಲಾತಿ ನೀತಿಯನ್ನು ಅನುಸರಿಸುವ ಸರ್ಕಾರಿ ವಿಶ್ವವಿದ್ಯಾಲಯಗಳ ಜೊತೆ ಹೋಲಿಸಿದರೆ ವ್ಯತ್ಯಾಸ ಅರಿವಾಗುತ್ತದೆ. ಪರಿಶಿಷ್ಟ ಜಾತಿಯವರು ಶೇ 14.6ರಷ್ಟು, ಪರಿಶಿಷ್ಟ ಪಂಗಡದವರು ಶೇ 6ರಷ್ಟು, ಒಬಿಸಿ ಸಮುದಾಯ ಶೇ 31.2ರಷ್ಟು ಇದ್ದಾರೆ. ಮೀಸಲಾತಿಯ ಅನುಕೂಲ ಇಲ್ಲದ ಮುಸ್ಲಿಮರ ಪ್ರಮಾಣದಲ್ಲಿ ಹೆಚ್ಚಿನ ಬದಲಾವಣೆ ಇಲ್ಲ. ಅವರ ಪ್ರಮಾಣವು ಶೇ 4.1ರಷ್ಟಿದೆ.

ಕಳೆದ ಹಲವು ದಶಕಗಳಲ್ಲಿ ವಾಣಿಜ್ಯೀಕರಣ ಮತ್ತು ಖಾಸಗೀಕರಣವೇ ನಮ್ಮ ಶಿಕ್ಷಣ ನೀತಿಯಾಗಿದೆ. ರಾಜಕೀಯವಾಗಿ ಮಾತ್ರ ಇದನ್ನು ಸರಿಪಡಿಸಲು ಸಾಧ್ಯ. ಮುಖ್ಯವಾಗಿ, ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಬಲಪಡಿಸಬೇಕು. ಹೆಚ್ಚು ಹಣ ಕೊಡಬೇಕು, ಉತ್ತಮ ಆಡಳಿತ ಇರಬೇಕು, ಪೂರ್ಣಾವಧಿ ಬೋಧಕ ಸಿಬ್ಬಂದಿ, ಶೈಕ್ಷಣಿಕ ಸ್ವಾಯತ್ತೆ, ಪರಿಷ್ಕೃತ ಪಠ್ಯಕ್ರಮ ಇರಬೇಕು. ಇದರೊಂದಿಗೆ, ಖಾಸಗಿ ಶಿಕ್ಷಣ ಸಂಸ್ಥೆಗಳು ಕೂಡ ಮೀಸಲಾತಿ ನೀತಿ ಅನುಸರಿಸುವಂತೆ ಮಾಡಬೇಕು.

ಇದಕ್ಕೆಲ್ಲ ಕಾನೂನಿನಲ್ಲಿ ಅವಕಾಶ ಇದೆಯೇ? ಜೈರಾಮ್ ಅವರ ಹೇಳಿಕೆ ಈ ಪ್ರಶ್ನೆಗೆ ಸರಿಯಾದ ಉತ್ತರ ನೀಡುತ್ತದೆ. ಸಂವಿಧಾನಕ್ಕೆ 2005ರಲ್ಲಿ 93ನೇ ತಿದ್ದುಪಡಿ ತಂದು 15(5)ನೇ ವಿಧಿಯನ್ನು ಸೇರಿಸಲಾಯಿತು. ಪರಿಶಿಷ್ಟ ಜಾತಿ, ಪಂಗಡ, ಒಬಿಸಿ ಸಮುದಾಯಗಳ ಉನ್ನತಿಗಾಗಿ ವಿಶೇಷ ಅವಕಾಶ ಸೃಷ್ಟಿಸುವ ಅಧಿಕಾರವನ್ನು ಇದು ಸರ್ಕಾರಕ್ಕೆ ನೀಡುತ್ತದೆ. 'ಅನುದಾನಿತ ಆಗಿರಲಿ, ಅನುದಾನರಹಿತವಾಗಿರಲಿ, ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆ ಹೊರತುಪಡಿಸಿ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶದಲ್ಲಿ ಮೀಸಲಾತಿ ನೀಡಬಹುದು' ಎಂದು ಈ ವಿಧಿ ಹೇಳುತ್ತದೆ.

ಈ ತಿದ್ದುಪಡಿಯನ್ನು ಬಳಸಿಕೊಂಡು 'ಕೇಂದ್ರ ಶಿಕ್ಷಣ ಸಂಸ್ಥೆಗಳು (ಪ್ರವೇಶದಲ್ಲಿ ಮೀಸಲು) ಕಾಯ್ದೆ'ಯನ್ನು 2006ರಲ್ಲಿ ಜಾರಿಗೆ ತರಲಾಯಿತು. ಆದರೆ, ಇದು ಕೇಂದ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಮಾತ್ರ ಒಬಿಸಿ ಸಮುದಾಯಗಳಿಗೆ ಮೀಸಲಾತಿ ಒದಗಿಸುತ್ತದೆ. ಅಶೋಕ್ ಕುಮಾರ್ ಮತ್ತು ಕೇಂದ್ರ ಸರ್ಕಾರದ ನಡುವಣ ಪ್ರಕರಣದಲ್ಲಿ ಈ ಮೀಸಲಾತಿಯನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಸರ್ಕಾರಿ ಸಂಸ್ಥೆಗಳು ಮತ್ತು ಅನುದಾನಿತ ಸಂಸ್ಥೆಗಳಲ್ಲಿ ಮೀಸಲಾತಿ ನೀಡಬಹುದು ಎಂದು ಕೋರ್ಟ್ ಹೇಳಿತು. ಆದರೆ, ಅನುದಾನರಹಿತ ವಿದ್ಯಾಸಂಸ್ಥೆಗಳ ಕುರಿತು ಏನನ್ನೂ ಹೇಳಿಲ್ಲ. ಈ ಸಮಸ್ಯೆಯೂ ಈಗ ಬಗೆಹರಿದಿದೆ. 2011ರಲ್ಲಿ ದ್ವಿಸದಸ್ಯ ಪೀಠ ಮತ್ತು 2014ರಲ್ಲಿ ಸಂವಿಧಾನ ಪೀಠವು ಖಾಸಗಿ ವಿದ್ಯಾಸಂಸ್ಥೆಗಳಲ್ಲಿಯೂ ಮೀಸಲಾತಿ ನೀಡುವುದನ್ನು ಎತ್ತಿಹಿಡಿದಿವೆ. ಹೀಗಾಗಿ, ಈ ಸಮಸ್ಯೆ ಈಗ ಉಳಿದಿಲ್ಲ.

ಈ ವಿಚಾರವನ್ನು ರಾಜಕೀಯ ಕಾರ್ಯಸೂಚಿ ಮಾಡುವ ಮೂಲಕ ಸಾಮಾಜಿಕ ನ್ಯಾಯ ನೀತಿಯಲ್ಲಿನ ಬಹುದೊಡ್ಡ ಲೋಪವೊಂದನ್ನು ಸರಿಪಡಿಸಬಹುದು. ದಲಿತ, ಆದಿವಾಸಿ ಮತ್ತು ಹಿಂದುಳಿದವರನ್ನು ಒಟ್ಟಾಗಿಸುವ ಮೂಲಕ ಸಾಮಾಜಿಕ ನ್ಯಾಯ ರಾಜಕಾರಣದ ಗಂಭೀರ ಸಮಸ್ಯೆಯೊಂದನ್ನು ಕೂಡ ಪರಿಹರಿಸಬಹುದು.

ಚುರುಮುರಿ



ಜಾತಿ ಜಪ...

• ಮಣ್ಣೆ ರಾಜು

ಗೋಪಾಲಿ, ವೈಶಾಲಿ ಬಂದು, 'ಮಗನ ಮದ್ವೆ ಇದೆ, ಕುಟುಂಬ ಸಮೇತ ಬನ್ನಿ' ಎಂದು ಕಾರ್ಡ್ ಕೊಟ್ಟರು.

'ಶುಭವಾಗಲಿ' ಎಂದ ಶಂಕ್ರಿ, 'ಇದೇನ್ರೀ, ಕಾರ್ಡಿನಲ್ಲಿ ಮೂರು ಕಡೆ ಕಲ್ಯಾಣ ಮಂಟಪದ ಲೊಕೇಶನ್‌ನ ಕ್ಯೂಆರ್ ಕೋಡ್ ಹಾಕಿಸಿದ್ದೀರಿ?' ಅಂದ.

'ಒಂದು ಚೌಲ್ಟ್ರಿ ಲೊಕೇಶನ್, ಇನ್ನೆರಡು ಮುಯ್ಯಿ ಪೇ ಮಾಡಲು ಗಂಡು, ಹೆಣ್ಣಿನ ಕಡೆಯವರ ಪ್ರತ್ಯೇಕ ಬ್ಯಾಂಕ್ ಅಕೌಂಟ್ ಸ್ಕ್ಯಾನರ್ ಕೋಡ್' ಎಂದ ಗೋಪಾಲ.

'ಒಳ್ಳೆಯದಾಯ್ತು, ರಿಸೆಪ್ಷನ್ ಕ್ಯೂನಲ್ಲಿ ನಿಂತು ಮುಯ್ಯಿ ಕೊಡೋದು ತಪ್ಪುತ್ತದೆ, ಸ್ಕ್ಯಾನ್ ಮಾಡಿ ಮುಯ್ಯಿ ದುಡ್ಡು ಹಾಕಿ ನೇರವಾಗಿ ಊಟಕ್ಕೆ ಹೋಗಬಹುದು' ಎನ್ನುತ್ತಾ ಸುಮಿ ತಿಂಡಿ ತಂದುಕೊಟ್ಟಳು.

'ಬೇರೆ ಜಾತಿ ಸಂಬಂಧ ಅಂತ ಕೇಳಿಪಟ್ಟೆ, ಹೌದಾ?'

'ನಮ್ಮ ಜಾತಿಯಲ್ಲಿ ಹೆಣ್ಣು ಸಿಗೋದು ಕಷ್ಟ, ಮಗ ಅನ್ಯ ಜಾತಿ ಹುಡುಗೀನ ಲವ್ ಮಾಡಿದ್ದ, ಅವಳ ಜೊತೆಗೇ ಮದ್ವೆ ಮಾಡ್ತಿದ್ದೀವಿ' ವೈಶಾಲಿ ಇರೋ ವಿಚಾರ ಹೇಳಿದಳು.

'ಜಾತಿ ಜನಗಣತಿ ಪ್ರಕಾರ ಅವರ ಜಾತಿಯ ಜನಸಂಖ್ಯೆ ಎಷ್ಟಿದೆ?'

'ತುಂಬಾ ಕಮ್ಮಿ ಇದೆ, ಸ್ವಲ್ಪಸಂಖ್ಯಾತರು. ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿದ್ದಾರಂತೆ. ನಿಮ್ಮ ಮಗಳಿಗೆ ಗಂಡು ಹುಡುಕ್ತಿದ್ದೀರಲ್ಲ, ಸೆಟ್ ಆಯ್ತಾ?' ಗೋಪಾಲಿ ಕೇಳಿದ.

'ನಮ್ಮದೂ ಬೇರೆ ಜಾತಿಯ ಸಂಬಂಧ. ಅವರು ನಮ್ಮ ಜಾತಿಯ ಜನಸಂಖ್ಯೆಗಿಂತ ಸಂಖ್ಯೆಯಲ್ಲಿ ತುಂಬಾ ಹೆಚ್ಚಿದ್ದಾರೆ. ಅವರಲ್ಲಿ ಐದು ಜನ ಶಾಸಕರು, ಇಬ್ಬರು ಮಂತ್ರಿಗಳಿದ್ದಾರೆ ಕಣ್ರೀ, ಪ್ರಬಲ ಜಾತಿಯ ಸಂಬಂಧ ಬೆಳೆಸ್ತಿದ್ದೀವಿ' ಶಂಕ್ರಿ ಬೀಗಿದ.

'ನಮ್ಮ ಜಾತಿಯ ಜನಗಣತಿ ಅವೈಜ್ಞಾನಿಕ, ಮರುಸಮೀಕ್ಷೆ ಮಾಡಬೇಕೆಂದು ಒತ್ತಾಯಿಸಿ ನಮ್ಮ ಸಮುದಾಯದ ಸ್ವಾಮೀಜಿಗಳ ನೇತೃತ್ವದಲ್ಲಿ ಸರ್ಕಾರಕ್ಕೆ ನಿಯೋಗ ತೆರಳಲು ತೀರ್ಮಾನ ಮಾಡಿದ್ದೀವಿ' ಎಂದು ಗೋಪಾಲಿ ಹೊರಡಲು ಎದ್ದ. ವೈಶಾಲಿಗೆ ಸುಮಿ ಕುಂಕುಮ ಕೊಟ್ಟಳು.

ಸಂಗತ

ಕಲಿಕೆಯಲ್ಲೇಕೆ ಈ ಪರಿ ನಿರಾಸಕ್ತಿ?

ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಕುಂಠಿತವಾಗಲು ಕಾರಣವಾದ ಅಂಶಗಳನ್ನು ಗುರುತಿಸಿ, ಸರಿಪಡಿಸುವ ಕೆಲಸಕ್ಕೆ ಸಿಗಬೇಕು ಆದ್ಯತೆ

• ಎಂ.ಜೆ.ಅಲ್ಫೋನ್ಸ್ ಪಿಂಟೊ

ಗಿಡ ಮರಗಳಿಂದ ಆವೃತವಾದ ಮಲೆನಾಡಿನಲ್ಲೂ ಸುಡು ಬಿಸಿಲು ಜನರ ಬೆವರಿಳಿಸುತ್ತಿತ್ತು. ಆ ಬಿಸಿಲಿನ ಝಳದ ನಡುವೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಬಿಸಿಯೂ ಸೇರಿ ಮಕ್ಕಳು ಮತ್ತು ಶಿಕ್ಷಕರು ಹೈರಾಣಾಗಿದ್ದರು. ಅಂತಹ ಒಂದು ದಿನ, ಆ ಶಾಲೆಯ ಆವರಣದಲ್ಲಿ ತಂಪಾದ ಮರದ ನೆರಳಿನ ಕೆಳಗೆ ಗುಂಪಾಗಿ ಕುಳಿತಿದ್ದ ಮಕ್ಕಳು ಒಮ್ಮೆಲೇ ಚಂಗನೆ ನೆಗೆದು ಓಡಲಾರಂಭಿಸಿದರು. ಅದನ್ನು ಕಂಡು ಕ್ಷಣಕಾಲ ದಂಗಾದೆ. ಮೊದಲೇ ಮಲೆನಾಡು, ಎಲ್ಲೋ ಮರದ ತಪ್ಪಲಿನಲ್ಲಿ ಕಾಳಿಂಗ ಸರ್ಪ ಬಂದಿರಬೇಕು, ಅದನ್ನು ಕಂಡು ಮಕ್ಕಳು ಹೌಹಾರಿರಬೇಕು ಎಂದುಕೊಂಡು 'ಏನಾಯಿತು' ಎಂದು ಕೂಗುತ್ತಾ ಮಕ್ಕಳತ್ತ ದೌಡಾಯಿಸಿದೆ. ಕೊನೆಗೆ ಮಕ್ಕಳು ಹಾಗೆ ಓಡಿಹೋದದ್ದು ಯಾಕೆಂಬುದು ತಿಳಿದಾಗ ಮನಸ್ಸು ಪೆಚ್ಚಾಯಿತು. ತಮ್ಮ ನೆಚ್ಚಿನ ಶಿಕ್ಷಕರು ಬಂದುದನ್ನು ಕಂಡು ಅವರು ಹಾಗೆ ಓಡಿಹೋಗಿದ್ದರು. ಇಂದಿನ ಮಕ್ಕಳ ಇಂತಹ ಮನಃಸ್ಥಿತಿ ಕಂಡು ದಿಗಿಲಾಯಿತು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಮಕ್ಕಳನ್ನು ತಯಾರು ಮಾಡುವ ಸಲುವಾಗಿ ವಿಶೇಷ ತರಗತಿ ತೆಗೆದುಕೊಳ್ಳಲು, ಬಿಸಿಲಿನಲ್ಲಿ ಬಸವಳಿಯುತ್ತಾ ಬರುತ್ತಿದ್ದ ಶಿಕ್ಷಕರನ್ನು ಕಂಡು ಮಕ್ಕಳಿಗೆ ಕಾಳಿಂಗ ಸರ್ಪವನ್ನೇ ಕಂಡಷ್ಟು ಭಯ ಆಗಿರಬೇಕು. ಸತ್ತೆನೋ ಬದುಕಿದೆನೋ ಎಂಬಂತೆ ಸುಡು ಬಿಸಿಲಿನಲ್ಲಿ ಓಡಿ ಕಣ್ಮರೆಯಾಗಿದ್ದರು. ಇತ್ತ ಅದನ್ನು ಕಂಡ ಆ ಶಿಕ್ಷಕರು ನನ್ನನ್ನು ಉದ್ದೇಶಿಸಿ 'ಹೋಗಲಿ ಬಿಡಿ ಸಾರ್, ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಮುಖ್ಯವಾದ ಪ್ರಶ್ನೆಗಳಿಗೆ ಉತ್ತರ ಹೇಳಿಕೊಡೋಣ ಅಂತ ಬಂದೆ. ಅವರಿಗೇ ಆಸಕ್ತಿ ಇಲ್ಲ ಅಂದರೆ ನಾನು ತಾನೆ ಏನು ಮಾಡಲು ಸಾಧ್ಯ?' ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು.

'ಸರ್ಕಾರಿ ಶಾಲೆ ಮಕ್ಕಳೇ ಹೀಗೆ. ಅವರಿಗೆ ಯಾವುದೂ ಬೇಡ. ಅವರ ಪೋಷಕರಿಗಂತೂ ಇದ್ಯಾವುದರ ಪರಿವೆಯೇ ಇರುವುದಿಲ್ಲ. ನಮ್ಮ ಅಧಿಕಾರಿಗಳು ಒಳ್ಳೇ ರಿಸಲ್ಟ್ ಕೊಡಿ ಅಂತ ನಮ್ಮ ಜೀವ ತಿಂತಾರೆ. ಕಡಿಮೆ ರಿಸಲ್ಟ್ ಬಂದ್ರೆ ನಮ್ಮ ಇನ್‌ಕ್ರಿಮೆಂಟ್ ಕಟ್ ಮಾಡ್ತಾರೆ. ಇಂತಹ ಮಕ್ಕಳನ್ನು ಕಟ್ಕೊಂಡು ನಾವು ಒಳ್ಳೆಯ ರಿಸಲ್ಟ್ ತರೋದಾದ್ರೂ ಹ್ಯಾಗೆ?' ಎಂದು ಅಳಲು ತೋಡಿಕೊಂಡರು. 'ಇವತ್ತು ತಪ್ಪಿಸ್ಕೊಂಡು ಹೋದ್ರು, ನಾಳೆನಾದ್ರೂ ಬರ್ತಾರ ನೋಡೋಣ. ಎಲ್ಲರಿಗೂ ನಾಳೆ ಬರೋಕೆ ಮೆಸೇಜ್ ಆದ್ರೂ ಹಾಕ್ತೀನಿ' ಎಂದುಕೊಂಡು ಬೆವರು ಒರೆಸಿಕೊಳ್ಳುತ್ತಾ, ಜೇಬಿನಿಂದ ಮೊಬೈಲ್ ಫೋನ್ ತೆಗೆದು ಮೆಸೇಜ್ ಮಾಡುತ್ತಾ ಸ್ಟಾಫ್ ರೂಮಿನತ್ತ ನಡೆದರು.

ಮೇಲ್ನೋಟಕ್ಕೆ ಇದು ಒಂದು ಶಾಲೆಯ ಸಮಸ್ಯೆ ಎನಿಸಿದರೂ ಅನೇಕ ಸರ್ಕಾರಿ ಶಾಲೆಗಳಲ್ಲಿನ ಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಮಕ್ಕಳಲ್ಲಿ ಹಲವರಿಗೆ ಶಿಕ್ಷಣವೊಂದನ್ನು ಬಿಟ್ಟು ಉಳಿದೆಲ್ಲ ವಿಷಯಗಳಲ್ಲೂ ಆಸಕ್ತಿ ಇರುತ್ತದೆ. ಇದನ್ನು ಕಂಡರೆ, ನಮ್ಮ ಶಿಕ್ಷಣ ವ್ಯವಸ್ಥೆ ಎತ್ತ ಸಾಗುತ್ತಿದೆ ಎಂದು ವೇದನೆಯಾಗುತ್ತದೆ. ಮುಂದೆ ಇಂತಹ ಮಕ್ಕಳಿಂದ ಎಂತಹ ಸಮಾಜ ನಿರ್ಮಾಣವಾಗಬಹುದು ಎಂದು ಚಿಂತಿಸಿದರೆ ಭಯವಾಗುತ್ತದೆ. ಎಷ್ಟೋ ವಿದ್ಯಾರ್ಥಿಗಳಿಗೆ ಕನಿಷ್ಠ ಅಕ್ಷರ ಜ್ಞಾನವೂ ಇರುವುದಿಲ್ಲ. ಮಕ್ಕಳ ಭವಿಷ್ಯದ ಬಗ್ಗೆ ಕೆಲವು ಪೋಷಕರಲ್ಲೂ ಹೆಚ್ಚಿನ ಕಾಳಜಿ ಇರುವುದಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿರುವ ಮಕ್ಕಳು ಲಂಗು ಲಗಾಮಿಲ್ಲದ ಕುದುರೆಯಂತೆ, ಮನ ಬಂದಂತೆ ಓಡುವುದೇ ಜೀವನ ಎಂದುಕೊಂಡಿರುತ್ತಾರೆ.



ಈ ರೀತಿಯ ಮಕ್ಕಳನ್ನು ಸರಿದಾರಿಗೆ ತಂದು, ಎಸ್‌ಎಸ್‌ಎಲ್‌ಸಿಯಲ್ಲಿ ಅವರು ಉತ್ತೀರ್ಣರಾಗುವಂತೆ ಮಾಡಲು ಅಧಿಕಾರಿ ವರ್ಗ ವಿಶೇಷ ಸಭೆಗಳನ್ನು ನಡೆಸುತ್ತದೆ. ಹೆಚ್ಚುವರಿ ತರಗತಿ, ರಾತ್ರಿ ತರಗತಿ, ಕಿರು ಪರೀಕ್ಷೆಗಳಂತಹ ಹತ್ತು ಹಲವು ಕ್ರಮಗಳ ಮೂಲಕ ಶ್ರಮಿಸಲು ಶಿಕ್ಷಕರಿಗೆ ಸೂಚನೆ ನೀಡುತ್ತದೆ. ಎಸ್‌ಡಿಎಂಸಿ, ಸ್ಥಳೀಯ ಸಂಘ– ಸಂಸ್ಥೆಗಳು ಇಂತಹ ಕಾರ್ಯಗಳಿಗೆ ಕೈ ಜೋಡಿಸುತ್ತವೆ. ಆದರೆ ಶಿಕ್ಷಕ ವರ್ಗದ ಉತ್ಸಾಹಕ್ಕೆ ಮಾತ್ರ ವಿದ್ಯಾರ್ಥಿಗಳ ನಿರಾಸಕ್ತಿ ತಣ್ಣೀರೆರಚಿದಂತೆ ಆಗುತ್ತದೆ. ಇತ್ತ ಮಕ್ಕಳಿಗೆ ಶಿಕ್ಷೆ ಕೊಡುವಂತೆಯೂ ಇಲ್ಲ, ಅತ್ತ ಅವರನ್ನು ಹಾಗೇ ಬಿಡುವಂತೆಯೂ ಇಲ್ಲ. ಸಾಮಾಜಿಕ ಜಾಲತಾಣಗಳ ದಾಸರಾಗಿರುವ ಮಕ್ಕಳಿಗೆ ವಯೋಸಹಜ ಆಕರ್ಷಣೆಗಳು ಬೇರೆ. ಶಿಕ್ಷಣದ ಪ್ರಗತಿ ಕುಂಠಿತವಾಗಲು ಇವೆಲ್ಲ ಪ್ರಮುಖ ಕಾರಣಗಳಾಗಿವೆ.

ಶಾಲೆಯ ಅಭ್ಯಾಸದ ಅವಧಿಯಲ್ಲಿ ಇರಬೇಕಾದ ಶಿಸ್ತು, ಕಲಿಯುವ ಆಸಕ್ತಿ, ಕನಿಷ್ಠ ಸಂಯಮ, ಸ್ವಚ್ಛತೆ ಕಾಯ್ದುಕೊಳ್ಳುವಂತಹ ಗುಣಗಳು ಹೆಚ್ಚಿನ ವಿದ್ಯಾರ್ಥಿಗಳಲ್ಲಿ ಕಣ್ಮರೆಯಾಗುತ್ತಿವೆಯೇನೋ ಅನ್ನಿಸುತ್ತದೆ. ಪ್ರಾಥಮಿಕ ಹಂತದಲ್ಲಿ ಸರಿಯಾದ ತಳಪಾಯವಿಲ್ಲದೆ ಪ್ರೌಢ ಹಂತಕ್ಕೆ ಕಾಲಿರಿಸುವಂತಹ ಸಂದಿಗ್ಧ ಪರಿಸ್ಥಿತಿ ಇದೆ.

ಇಂತಹ ಸ್ಥಿತಿಯಲ್ಲಿ, ಪರೀಕ್ಷಾ ಫಲಿತಾಂಶಕ್ಕಷ್ಟೇ ಗಮನ ಕೇಂದ್ರೀಕರಿಸದೆ, ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣ ನೀಡಬೇಕಾದ ಅಗತ್ಯ ಇದೆ. ನ್ಯೂನತೆಗಳನ್ನು ಗುರುತಿಸಿ, ಸರಿಪಡಿಸುವ ಕೆಲಸ ಆಗಬೇಕಿದೆ. ಈ ಮೂಲಕ ಸ್ವಸ್ಥ ಸಮಾಜ ನಿರ್ಮಾಣದತ್ತ ಗಮನಹರಿಸಬೇಕಾಗಿದೆ. ಈ ದಿಸೆಯಲ್ಲಿ ಶಿಕ್ಷಣ ತಜ್ಞರು, ಅಧಿಕಾರಿಗಳು, ಸಂಘ– ಸಂಸ್ಥೆಗಳು, ಸಮಾಜ ಗಂಭೀರವಾಗಿ ಚಿಂತಿಸಬೇಕಾದ ಅನಿವಾರ್ಯ ಇದೆ. ಇಲ್ಲವಾದಲ್ಲಿ, ವಿದ್ಯಾರ್ಥಿಯೊಬ್ಬ ಗಣಿತದಲ್ಲಿ ನೂರಕ್ಕೆ ನೂರು ಅಂಕ ಪಡೆದಿದ್ದರೂ ನೈತಿಕ ಶಿಕ್ಷಣದ ಕೊರತೆ ಇದ್ದರೆ ಆತನಿಂದಲೇ ಸಮಾಜದಲ್ಲಿ ಅಶಾಂತಿ ತಲೆದೋರಬಹುದಾದ ದಿನಗಳು ದೂರವಿಲ್ಲವೇನೊ.

ಲೇಖಕ: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ನಿವೃತ್ತ ನೌಕರ

ವಾಚಕರ ವಾಣಿ

ಮೌಲ್ಯಮಾಪಕರ ಹೊಣೆ ದೊಡ್ಡದು

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಸರ್ಕಾರಿ ಪದವಿ ಪೂರ್ವ ಕಾಲೇಜೊಂದರ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿಯೊಬ್ಬರು, ಮೌಲ್ಯಮಾಪಕರ ತಪ್ಪಿನಿಂದಾಗಿ ಅರ್ಥಶಾಸ್ತ್ರ ವಿಷಯದಲ್ಲಿ 6 ಅಂಕ ಕಳೆದುಕೊಂಡು, ಶೇ 100 ಅಂಕ ಪಡೆಯುವುದರಿಂದ ವಂಚಿತರಾಗಿರುವುದಾಗಿ ವರದಿಯಾಗಿದೆ (ಪ್ರ.ವಾ., ಏ. 15). ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಪಡೆಯುವ ಒಂದೊಂದು ಅಂಕವೂ ಬಹುಮುಖ್ಯವಾದ ಪಾತ್ರ ವಹಿಸುತ್ತದೆ. ಇಂತಹ ಸಂದರ್ಭದಲ್ಲಿ ಈ ರೀತಿಯ ಎಡವಟ್ಟುಗಳು ಆಗುವುದು ತರವಲ್ಲ. ಇದನ್ನು ಹೊರತುಪಡಿಸಿ ಆರ್ಥಿಕವಾಗಿಯೂ ವಿದ್ಯಾರ್ಥಿಗಳಿಗೆ ಇದರಿಂದ ಹೊರೆಯಾಗುತ್ತದೆ. ಮರುಮೌಲ್ಯಮಾಪನ ಮಾಡಿಸಲು ಶುಲ್ಕ ಕಟ್ಟಬೇಕಾಗುತ್ತದೆ. ಅಲ್ಲದೆ ಇಂತಹ ಪ್ರಕರಣಗಳು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಕುಗ್ಗಿಸುವ ಸಾಧ್ಯತೆಯೂ ಇರುತ್ತದೆ. ಹೀಗಾಗದಂತೆ ನೋಡಿಕೊಳ್ಳುವಲ್ಲಿ ಮೌಲ್ಯಮಾಪಕರ ಪಾತ್ರ ಅತ್ಯಂತ ಮುಖ್ಯವಾದುದು.

ಕೆ.ಎನ್.ರಂಗನಾಥ್, ಉಜಿರೆ

ಪ್ರತಿಮೆ ಸ್ಥಾಪನೆಯಷ್ಟೇ ಸಾಲದು

'ಮೈಸೂರು ವಿಶ್ವವಿದ್ಯಾಲಯದಲ್ಲಿ ಸಂವಿಧಾನ ಪೀಠ ಮತ್ತು ಬೆಂಗಳೂರಿನಲ್ಲಿ ಇಡೀ ದೇಶದಲ್ಲೇ ಅತಿ ಎತ್ತರದ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಲಾಗುವುದು' ಎಂದು ಅಂಬೇಡ್ಕರ್ ಜಯಂತಿ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ (ಪ್ರ.ವಾ., ಏ. 15). ಆದರೆ ಜಯಂತಿ ಆಚರಣೆಗಳಲ್ಲಿ ಆಯಾ ಗಣ್ಯರನ್ನು ಹಾಡಿ ಹೊಗಳಿ ಅವರ ಪ್ರತಿಮೆಗಳನ್ನು ಸ್ಥಾಪಿಸಿದ ಮಾತ್ರಕ್ಕೆ ಸರ್ಕಾರದ ಕೆಲಸ ಮುಗಿದುಹೋಯಿತೇ?! ಒಬ್ಬ ಉದಾತ್ತ ವ್ಯಕ್ತಿಯನ್ನು ನಿಜವಾಗಿ ಆರಾಧನೆ ಮಾಡುವುದೆಂದರೆ, ಅವರ ಪ್ರತಿಮೆಯನ್ನು ಸ್ಥಾಪಿಸಿ ಪೂಜಿಸುವುದಕ್ಕಿಂತ ಮಿಗಿಲಾಗಿ ಅವರು ಪ್ರತಿಪಾದಿಸಿದ ಮಾನವೀಯ ಮೌಲ್ಯಗಳನ್ನು ಅನುದಿನವೂ ನಮ್ಮ ಜೀವನದಲ್ಲಿ ರೂಢಿಸಿಕೊಳ್ಳುವುದು.

ಅಂಬೇಡ್ಕರ್ ಅಥವಾ ಗಾಂಧೀಜಿಯವರಂಥ ವ್ಯಕ್ತಿಗಳು ಯಾವ ಮೌಲ್ಯಗಳ ಪರವಾಗಿ ಹೋರಾಟ ಮಾಡಿದರೋ ಅಂತಹ ಮೌಲ್ಯಗಳ ಕತ್ತು ಹಿಸುಕುತ್ತಾ ಅವರ ಪೂಜೆ ಮಾಡುವುದು ಎಷ್ಟು ಸರಿ? ಸಂವಿಧಾನದ ಆಶಯಗಳಿಗೆ ಧಕ್ಕೆ ತರುವ ಅಸ್ಪೃಶ್ಯತೆ ಆಚರಣೆಯನ್ನು ಜೀವಂತವಾಗಿ ಇಡುವಂತಹ ಮಾನವ ವಿರೋಧಿ ಕೃತ್ಯಗಳು ನಿರಂತರವಾಗಿ ನಡೆಯುತ್ತಿವೆ. ಆದರೂ ತಪ್ಪಿತಸ್ಥರ ಮೇಲೆ ಸಕಾಲದಲ್ಲಿ ಸೂಕ್ತ ಕ್ರಮ ಜರುಗಿಸಲು ಸಾಧ್ಯವಾಗುತ್ತಿಲ್ಲ. ಆದರ್ಶ ವ್ಯಕ್ತಿಗಳ ಜಯಂತಿಗೆ ರಜೆ ಕೊಡುವುದು ಬಿಟ್ಟು, ಅಂದು ಅವರ ಹೆಸರಿನಲ್ಲಿ ದೇಶಕ್ಕಾಗಿ ಹೆಚ್ಚು ಸಮಯ ಒಳ್ಳೆಯ ಕೆಲಸ ಮಾಡುವುದು ಸೂಕ್ತ. ಹಾಗೆಯೇ ಪ್ರತಿಮೆ ಸ್ಥಾಪಿಸುವುದನ್ನು ಬಿಟ್ಟು ಅವರ ಸಿದ್ಧಾಂತಗಳನ್ನು ನಮ್ಮ ಮಕ್ಕಳ ತಲೆಯೊಳಗೆ ತುಂಬಲು ಬೇಕಾದ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ಜಾತಿ ಜನಗಣತಿಗೆ ಬಲಾಢ್ಯರ ವಿರೋಧ ಏಕೆ?

ನಮ್ಮದು ಮೂಲತಃ ಅಸಮಾನತೆಯ ಶ್ರೇಣೀಕೃತ ಸಮಾಜ. ಎಲ್ಲ ರೀತಿಯ ಅಸಮಾನತೆಯು ಜನರ ಬದುಕನ್ನು ಹೈರಾಣಾಗಿಸುತ್ತಿದೆ. ಈ ಬಗೆಯ ಸಮಾಜದಲ್ಲಿ ಜನರ, ಅದರಲ್ಲಿಯೂ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಜಾತಿ ಜನಗಣತಿ ಬಿಟ್ಟು ಬೇರಾವ ಮಾರ್ಗಗಳಿವೆ? ಸ್ವಾತಂತ್ರ್ಯಾನಂತರ ರಾಜ್ಯದಲ್ಲಿ ಯಾವ ಯಾವ ಸಮುದಾಯ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ತಿಳಿದುಕೊಳ್ಳಲು ಜಾತಿ ಜನಗಣತಿಯು ರಾಜಮಾರ್ಗವಾಗಿದೆ.

ವರಮಾನ, ಸಂಪತ್ತು, ಆಸ್ತಿ ಎಲ್ಲಿ ಮಡುಗಟ್ಟಿದೆ ಎಂಬುದು ಈ ಬಗೆಯ ಗಣತಿಯಿಂದ ಗೊತ್ತಾಗಿಬಿಡುತ್ತದೆ ಎಂಬ ಭಯ ಕೆಲವರಲ್ಲಿದೆ. ಬಹುಸಂಖ್ಯಾತವಾಗಿರುವ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಜಾತಿ ಜನಗಣತಿಯನ್ನು ವಿರೋಧಿಸುತ್ತಿಲ್ಲ. ಪ್ರಬಲ ಜಾತಿಗಳ ಕೆಲವು ಮುಖಂಡರು ಈ ಗಣತಿಗೆ ವಿರೋಧ ವ್ಯಕ್ತಪಡಿಸುವುದನ್ನು ಬಿಟ್ಟು ಅದಕ್ಕೆ ಬೆಂಬಲ ನೀಡುವುದು ಬದಲಾದ ಜಾತಿ ಸಮೀಕರಣದ ಹಿನ್ನೆಲೆಯಲ್ಲಿ ಮುಖ್ಯ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಅತ್ತ ಹೋರಾಟ, ಇತ್ತ ಮೂಕ ಸಂಕಟ

ಹಿಂದುಳಿದ ವರ್ಗಗಳ ಆಯೋಗದ ದತ್ತಾಂಶಗಳ ಅಧ್ಯಯನ ವರದಿಯಲ್ಲಿ ಈವರೆಗೂ ಗುರುತಿಸದ 398 ಜಾತಿಗಳು ಹೊಸದಾಗಿ ಪತ್ತೆಯಾಗಿರುವುದಾಗಿ ವರದಿಯಾಗಿದೆ (ಪ್ರ.ವಾ., ಏ. 15). ಅಂದರೆ ಈ ಎಲ್ಲಾ ಜಾತಿಗಳು ಈವರೆಗೂ ಮೀಸಲಾತಿ ನೀತಿಯ ಅನ್ವಯದ ಸಾಮಾಜಿಕ ನ್ಯಾಯದ ಅವಕಾಶವಂಚಿತ ಜಾತಿಗಳೆಂದೇ ಅರ್ಥವಲ್ಲವೆ? ಈಗಾಗಲೇ ಮೀಸಲಾತಿ ಸೌಲಭ್ಯ ಪಡೆದ ಅನೇಕ ಜಾತಿಗಳು ತಮ್ಮ ತಮ್ಮ ಶೇಕಡಾವಾರು ಮೀಸಲಾತಿ ಪ್ರಮಾಣವನ್ನು ಇನ್ನೂ ಸ್ವಲ್ಪ ಹೆಚ್ಚಿಸಬೇಕೆಂದು ಹೋರಾಡುತ್ತಿರುವುದು ಒಂದೆಡೆಯಾದರೆ, ಮತ್ತೊಂದು ಕಡೆ, ಈವರೆಗೂ ಮೀಸಲಾತಿಯ ಅವಕಾಶವೇ ಲಭಿಸದ ಈ 398 ಜಾತಿಗಳ ಮೂಕ ಸಂಕಟವೂ ಇದೆ. ಆದ್ದರಿಂದ ವಿವಿಧ ರಾಜಕೀಯ ಪಕ್ಷಗಳು ದಿನಕ್ಕೊಂದು ತರಹದ ಹೇಳಿಕೆ ನೀಡದೆ ಜವಾಬ್ದಾರಿಯಿಂದ ವರ್ತಿಸಬೇಕು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಭ್ರಷ್ಟಾಚಾರದ ಆರೋಪ ಗಂಭೀರವಾಗಿ ಪರಿಗಣಿಸಿ

'ನಗರ ಸ್ಥಳೀಯ ಸಂಸ್ಥೆಗಳಲ್ಲಿ ದಿನಗೂಲಿ ಆಧಾರದ ಮೇರೆಗೆ ಕೆಲಸ ಮಾಡುತ್ತಿರುವ ಪೌರ ಕಾರ್ಮಿಕರ ಸೇವೆ ಕಾಯಂ ಮಾಡಲು ಲಂಚಕ್ಕೆ ಬೇಡಿಕೆ ಇಡಲಾಗುತ್ತಿದೆ' ಎಂದು ರಾಜ್ಯದ ಆಡಳಿತಾರೂಢ ಕಾಂಗ್ರೆಸ್‌ನ ಶಾಸಕ ಕೆ.ಎಸ್. ಬಸವಂತಪ್ಪ ಅವರು ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿರುವುದು (ಪ್ರ.ವಾ., ಏ. 15) ಆತಂಕಕಾರಿಯಾಗಿದೆ. ಒಂದುವೇಳೆ ಇದೇ ಮಾತನ್ನು ಯಾರಾದರೂ ವಿರೋಧ ಪಕ್ಷದವರು ಹೇಳಿದ್ದರೆ, ವಿರೋಧ ಪಕ್ಷದವರಿಗೆ ಮಾಡಲು ಇನ್ನೇನೂ ಕೆಲಸವಿಲ್ಲ, ಪೌರಕಾರ್ಮಿಕರನ್ನು ನಮ್ಮ ಪಕ್ಷ ಕಾಯಂ ಮಾಡಲು ಹೊರಟಿರುವುದನ್ನು ಸಹಿಸದೆ ಹೀಗೆ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಆಡಳಿತಾರೂಢರು ದೂರುತ್ತಿದ್ದರು. ಸರ್ಕಾರದ ವಿರುದ್ಧ ಇತ್ತೀಚೆಗೆ ಅನೇಕ ಭ್ರಷ್ಟಾಚಾರದ ಆರೋಪಗಳು ಕೇಳಿಬರುತ್ತಿವೆ. ಇವೆಲ್ಲವನ್ನೂ ಕಂಡೂ ಕಾಣದಂತೆ ಸರ್ಕಾರ ವರ್ತಿಸುತ್ತಿದೆ. ಇವೆಲ್ಲ ಅವರ ವೈಯಕ್ತಿಕ ಅಭಿಪ್ರಾಯಗಳು ಎಂದು ಹೇಳಿ ಕೈತೊಳೆದುಕೊಳ್ಳುತ್ತಿದೆ. ಇದು ಸರಿಯಲ್ಲ. ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಬೂಕನಕೆರೆ ವಿಜೇಂದ್ರ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬೇಕಾಗಿದ್ದಾರೆ

ದೇಶಭ್ರಷ್ಟರ ಕರೆತರಲು ಭಾರತದ ಪ್ರಯತ್ನ



ಪಂಜಾಬ್ ನ್ಯಾಷನಲ್ ಬ್ಯಾಂಕ್ ಹಗರಣದಲ್ಲಿ ಭಾರತಕ್ಕೆ ಬೇಕಾಗಿರುವ ವಜ್ರ ವ್ಯಾಪಾರಿ ಮೆಹುಲ್ ಚೋಕ್ಸಿಯನ್ನು, ಭಾರತದ ಮನವಿಯ ಮೇರೆಗೆ ಬೆಲ್ಜಿಯಂನಲ್ಲಿ ಬಂಧಿಸಲಾಗಿದೆ. ಮುಂಬೈ ದಾಳಿ ಪ್ರಕರಣದ ಸಂಚುಕೋರರಲ್ಲಿ ಒಬ್ಬನಾದ ತಹವ್ವುರ್ ರಾಣಾನನ್ನು ಅಮೆರಿಕವು ಭಾರತಕ್ಕೆ ಹಸ್ತಾಂತರಿಸಿದ ಕೆಲವೇ ದಿನಗಳಲ್ಲಿ ಚೋಕ್ಸಿಯ ಬಂಧನವಾಗಿದೆ. ಅವರನ್ನು ಭಾರತಕ್ಕೆ ಕರೆತರುವ ಪ್ರಯತ್ನ ನಡೆಯುತ್ತಿದೆ. ಇದೇ ಹೊತ್ತಿನಲ್ಲಿ, ದೇಶಭ್ರಷ್ಟರಾಗಿ ವಿದೇಶದಲ್ಲಿ ನೆಲಸಿರುವ ಆರ್ಥಿಕ ಅಪರಾಧಿಗಳು, ಭಯೋತ್ಪಾದನೆ, ಕೊಲೆ, ಸುಲಿಗೆ ಸೇರಿದಂತೆ ಇನ್ನಿತರ ಅಪರಾಧ ಕೃತ್ಯಗಳಲ್ಲಿ ಬೇಕಾದ ಹಲವರನ್ನು ಭಾರತಕ್ಕೆ ಕರೆತರಲು ಕೇಂದ್ರ ಸರ್ಕಾರ ಪ್ರಯತ್ನ ಮುಂದುವರಿಸಿದೆ.

ದೇಶಭ್ರಷ್ಟರಾಗಿರುವ ಮತ್ತು ಹೊರದೇಶಗಳಲ್ಲಿ ತಲೆಮರೆಸಿಕೊಂಡಿರುವ 178 ಮಂದಿಯನ್ನು ಹಸ್ತಾಂತರಿಸುವಂತೆ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ವಿವಿಧ ದೇಶಗಳಿಗೆ ಮನವಿ ಮಾಡಿದೆ. ಆದರೆ, ಐದು ವರ್ಷಗಳಲ್ಲಿ 23 ಮಂದಿ ಮಾತ್ರ ಭಾರತಕ್ಕೆ ಹಸ್ತಾಂತರಗೊಂಡಿದ್ದಾರೆ.

ಅಪರಾಧಿಗಳು, ಆರೋಪಿಗಳ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಭಾರತವು ಅಮೆರಿಕ, ಕೆನಡಾ ಬ್ರಿಟನ್, ಯುಎಇ ಸೇರಿದಂತೆ 48 ದೇಶಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡಿದೆ. ಅಲ್ಲದೇ, ಸಿಂಗಪುರ, ಸ್ವೀಡನ್, ಇಟಲಿ ಸೇರಿದಂತೆ 12 ರಾಷ್ಟ್ರಗಳೊಂದಿಗೆ ಹಸ್ತಾಂತರಕ್ಕೆ ಸಂಬಂಧಿಸಿದ ವ್ಯವಸ್ಥೆಯನ್ನು ಹೊಂದಿದೆ.

ವಿವಿಧ ಪ್ರಕರಣಗಳಲ್ಲಿ ಭಾರತದ ತನಿಖಾ ಸಂಸ್ಥೆಗಳಿಗೆ ಬೇಕಾಗಿರುವ ಪ್ರಮುಖರ ವಿವರಗಳನ್ನು ಇಲ್ಲಿ ನೀಡಲಾಗಿದೆ.

ಆಧಾರ: ಪಿಟಿಐ, ಸಂಸತ್ತಿನಲ್ಲಿ ಸಚಿವರ ಹೇಳಿಕೆ, ಮಾಧ್ಯಮ ವರದಿಗಳು

ನೀರವ್ ಮೋದಿ



ಭಾರತದಿಂದ ಪರಾರಿಯಾಗಿರುವ ಆರ್ಥಿಕ ಅಪರಾಧಿ (ಎಫ್ಇಒ) ಮೆಹುಲ್ ಚೋಕ್ಸಿಯ ಸೋದರಳಿಯ, ವಜ್ರದ ವ್ಯಾಪಾರಿ ನೀರವ್ ಮೋದಿ ದೇಶದ ಎಫ್ಇಒಗಳ ಪಟ್ಟಿಯಲ್ಲಿದ್ದಾರೆ. ಮಾವ–ಅಳಿಯನ ಈ ಜೋಡಿ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಿಂದ (ಪಿಎನ್‌ಬಿ) ₹13,800 ಕೋಟಿ ಸಾಲ ಪಡೆದು ವಂಚಿಸಿತ್ತು. ವಂಚನೆ ಪ್ರಕರಣ ದಾಖಲಾಗುವ ಕೆಲವೇ ದಿನಗಳ ಮುನ್ನ, 2018ರಲ್ಲಿ ನೀರವ್ ದೇಶದಿಂದ ಪಲಾಯನ ಮಾಡಿದ್ದರು. 2019ರ ಮಾರ್ಚ್ 19ರಂದು ನೀರವ್‌ರನ್ನು ಇಂಗ್ಲೆಂಡ್‌ನಲ್ಲಿ ಬಂಧಿಸಲಾಗಿದೆ. ನೀರವ್ ಅಂದಿನಿಂದಲೂ ಜೈಲಿನಲ್ಲಿಯೇ ಇದ್ದಾರೆ. 2021ರಲ್ಲಿ ಅವರನ್ನು ಭಾರತಕ್ಕೆ ಹಸ್ತಾಂತರಿಸಲು ಅಲ್ಲಿನ ಕೋರ್ಟ್ ಸಮ್ಮತಿಸಿತ್ತು. ಹಸ್ತಾಂತರ ವಿರೋಧಿಸಿ ನೀರವ್ ನ್ಯಾಯಾಂಗ ಹೋರಾಟ ಮುಂದುವರಿಸಿದ್ದಾರೆ. ನೀರವ್ ಸಹೋದರ ನೀಶಲ್ ಮೋದಿ ಕೂಡ ಈ ಪ್ರಕರಣದಲ್ಲಿ ತಪ್ಪಿತಸ್ಥರಾಗಿದ್ದು, ಅವರೂ ದೇಶಭ್ರಷ್ಟ ಅಪರಾಧಿಯಾಗಿದ್ದಾರೆ.

ಲಲಿತ್ ಮೋದಿ



ಇಂಡಿಯನ್ ಪ್ರೀಮಿಯರ್ ಲೀಗ್‌ನ (ಐಪಿಎಲ್) ರೂವಾರಿಯಾಗಿರುವ ಲಲಿತ್ ಮೋದಿ, ಐಪಿಎಲ್ ಕಮಿಷನರ್ ಆಗಿದ್ದ ಸಂದರ್ಭದಲ್ಲಿ ಹಣಕಾಸಿನ ಅವ್ಯವಹಾರ ನಡೆಸಿರುವ ಆರೋಪವನ್ನು ಎದುರಿಸುತ್ತಿದ್ದಾರೆ. ಮಾಧ್ಯಮ ಹಕ್ಕುಗಳ ಹರಾಜಿಗೆ ಸಂಬಂಧಿಸಿದಂತೆ ಅಕ್ರಮ ನಡೆದಿರುವುದು ತನಿಖೆಯ ವೇಳೆ ಬೆಳಕಿಗೆ ಬಂದಿತ್ತು. ಹಣ ಅಕ್ರಮ ವರ್ಗಾವಣೆ, ತೆರಿಗೆ ವಂಚನೆ ಸೇರಿದಂತೆ ಹತ್ತಕ್ಕೂ ಹೆಚ್ಚು ಪ್ರಕರಣಗಳನ್ನು ಅವರು ಎದುರಿಸುತ್ತಿದ್ದಾರೆ. ನೂರಾರು ಕೋಟಿ ರೂಪಾಯಿ ಅಕ್ರಮ ಎಸಗಿರುವ ಆಪಾದನೆ ಅವರ ಮೇಲಿದೆ. ಅಕ್ರಮಗಳ ಕುರಿತಾಗಿ ಇ.ಡಿ. ತನಿಖೆ ಕೈಗೆತ್ತಿಕೊಂಡ ಬೆನ್ನಲ್ಲೇ ಭಾರತ ತೊರೆದಿರುವ ಅವರು, 2010ರಿಂದ ಲಂಡನ್‌ನಲ್ಲಿ ವಾಸವಿದ್ದಾರೆ.

ವಿಜಯ್ ಮಲ್ಯ



ಕಿಂಗ್‌ಫಿಷರ್ ಏರ್‌ಲೈನ್ಸ್‌ಗಾಗಿ ಬ್ಯಾಂಕುಗಳಿಂದ ₹9,000 ಕೋಟಿ ಸಾಲ ಪಡೆದು ಅದನ್ನು ಪಾವತಿಸದ ಪ್ರಕರಣದಲ್ಲಿ ಭಾರತಕ್ಕೆ ಬೇಕಾದ ಪ್ರಮುಖ ಆರ್ಥಿಕ ಅಪರಾಧಿ. ಮದ್ಯದ ದೊರೆ ಎಂದೇ ಕರೆಸಿಕೊಳ್ಳುತ್ತಿದ್ದ ಮಲ್ಯ, 2016ರಲ್ಲಿ ಭಾರತದಿಂದ ಪರಾರಿಯಾಗಿದ್ದರು. 2018ರ ದೇಶಭ್ರಷ್ಟ ಆರ್ಥಿಕ ಅಪರಾಧಿಗಳ ಕಾಯ್ದೆ ಅಡಿಯಲ್ಲಿ 'ಆರ್ಥಿಕ ಅಪರಾಧಿ' ಎಂದು ಘೋಷಿಸಲಾದ ಮೊದಲ ವ್ಯಕ್ತಿ ಮಲ್ಯ. 2019ರಲ್ಲಿ ಈ ಘೋಷಣೆ ಮಾಡಲಾಗಿದ್ದು, ಅಂದಿನಿಂದ ಅವರು ಭಾರತಕ್ಕೆ ಬೇಕಾಗಿದ್ದಾರೆ. ಸದ್ಯ ಬ್ರಿಟನ್‌ನಲ್ಲಿ ವಾಸವಿರುವ ಅವರನ್ನು ಭಾರತಕ್ಕೆ ಕರೆತರಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ. ತಮ್ಮ ಹಸ್ತಾಂತರದ ವಿರುದ್ಧ ವಿಜಯ್ ಮಲ್ಯ ಬ್ರಿಟನ್‌ನಲ್ಲಿ ಕಾನೂನು ಹೋರಾಟ ನಡೆಸುತ್ತಿದ್ದಾರೆ.

ಸಂಜಯ್ ಭಂಡಾರಿ



ಹಣ ಅಕ್ರಮ ವರ್ಗಾವಣೆ ಮತ್ತು ತೆರಿಗೆ ವಂಚನೆ ಪ್ರಕರಣಗಳಲ್ಲಿ ಭಾರತದ ತನಿಖಾ ಸಂಸ್ಥೆಗಳಿಗೆ ಬೇಕಾಗಿರುವ ಶಸ್ತ್ರಾಸ್ತ್ರ ಮಧ್ಯವರ್ತಿ ಸಂಜಯ್ ಭಂಡಾರಿ ಅವರು 2016ರಲ್ಲಿ ಬ್ರಿಟನ್‌ಗೆ ಪರಾರಿಯಾಗಿದ್ದಾರೆ. 62 ವರ್ಷದ ಭಂಡಾರಿ ಅವರು ವಿದೇಶದಲ್ಲಿರುವ ತಮ್ಮ ಆಸ್ತಿ ವಿವರಗಳನ್ನು ಹಳೆಯ ದಾಖಲೆಗಳನ್ನು ಬಳಸಿಕೊಂಡು ಮುಚ್ಚಿಟ್ಟಿದ್ದರು. ಆ ಆಸ್ತಿಗಳಿಂದ ಬರುತ್ತಿರುವ ಆದಾಯದ ಬಗ್ಗೆ ಭಾರತದ ತೆರಿಗೆ ಇಲಾಖೆಗೆ ಮಾಹಿತಿ ನೀಡಿಲ್ಲ ಎಂದು ಆರೋಪಿಸಲಾಗಿದೆ. ಬ್ರಿಟನ್ ಸರ್ಕಾರ 2022ರಲ್ಲಿ ಅವರ ಹಸ್ತಾಂತರಕ್ಕೆ ಅನುಮತಿ ನೀಡಿತ್ತು. ಇದರ ವಿರುದ್ಧ ಅವರು ನ್ಯಾಯಾಲಯದ ಮೆಟ್ಟಿಲೇರಿದ್ದರು. ಬ್ರಿಟನ್ ಹೈಕೋರ್ಟ್ ಇತ್ತೀಚೆಗೆ ಹಸ್ತಾಂತರಕ್ಕೆ ತಡೆ ಒಡ್ಡಿದೆ.

ದಾವೂದ್ ಇಬ್ರಾಹಿಂ



1993ರ ಮುಂಬೈ ಬಾಂಬ್ ಸ್ಫೋಟ ಸೇರಿದಂತೆ ದೇಶದಲ್ಲಿ ನಡೆದ ಹಲವು ಸಂಘಟಿತ ಅಪರಾಧ ಕೃತ್ಯಗಳ ಸಂಚುಕೋರನಾಗಿರುವ ಕುಖ್ಯಾತ ಭೂಗತ ಪಾತಕಿ ದಾವೂದ್ ಇಬ್ರಾಹಿಂ ನೆರೆಯ ಪಾಕಿಸ್ತಾನದ ಕರಾಚಿಯಲ್ಲಿ ನೆಲಸಿದ್ದಾನೆ. ಭಯೋತ್ಪಾದಕ ಸಂಘಟನೆಗಳೊಂದಿಗೆ ನಂಟು ಹೊಂದಿರುವ ದಾವೂದ್ ಮಾದಕ ದ್ರವ್ಯ ಜಾಲದಲ್ಲೂ ಸಕ್ರಿಯನಾಗಿದ್ದ. 69 ವರ್ಷದ ದಾವೂದ್ ಹಲವು ಪ್ರಕರಣಗಳಲ್ಲಿ ಭಾರತಕ್ಕೆ ಬೇಕಾಗಿದ್ದಾನೆ.

ಸೌರಭ್ ಚಂದ್ರಾಕರ್

ಸೌರಭ್ ಚಂದ್ರಾಕರ್ ಛತ್ತೀಸಗಢದವರು. ಮಹದೇವ್ ಆನ್‌ಲೈನ್ ಬೆಟ್ಟಿಂಗ್ ಆ್ಯಪ್‌ನ (ಎಂಬಿಐ) ಪ್ರವರ್ತಕರಲ್ಲಿ ಒಬ್ಬರಾಗಿದ್ದರು. ಇವರು ₹6,000 ಕೋಟಿ ಮೊತ್ತದ ಹಗರಣದ ಸಂಚುಕೋರ. ಆನ್‌ಲೈನ್ ಬೆಟ್ಟಿಂಗ್‌ನಿಂದ ಬಂದ ಅಕ್ರಮ ಹಣದಲ್ಲಿ ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ ಅಪಾರ ಮೊತ್ತದ ಲಂಚ ನೀಡಿದ್ದರು ಎನ್ನಲಾಗಿದೆ. ಅಕ್ರಮ ಬೆಟ್ಟಿಂಗ್ ವೆಬ್‌ಸೈಟ್‌ಗಳಿಗೆ ವೇದಿಕೆಯಾಗಿ ಎಂಬಿಐ ಕೆಲಸ ಮಾಡುತ್ತಿತ್ತು ಎಂದು ಇ.ಡಿ. ಹೇಳಿದೆ. 2023ರ ಫೆಬ್ರುವರಿಯಲ್ಲಿ ದುಬೈನಲ್ಲಿ ಅದ್ದೂರಿಯಾಗಿ ಮದುವೆಯಾಗಿದ್ದ ಸೌರಭ್, ಅದಕ್ಕಾಗಿ ₹200 ಕೋಟಿ ವ್ಯಯಿಸಿದ್ದರು. ರವಿ ಉಪ್ಪಲ್ ಎನ್ನುವ ಮತ್ತೊಬ್ಬ ಪ್ರಮುಖ ಆರೋಪಿಯೊಂದಿಗೆ ಸೌರಭ್ ಅವರನ್ನು2024ರ ಅಕ್ಟೋಬರ್‌ನಲ್ಲಿ ದುಬೈನಲ್ಲಿ ಬಂಧಿಸಲಾಗಿದೆ.

ಅನ್ಮೋಲ್ ಬಿಷ್ಣೋಯಿ



ಭಾರತದಲ್ಲಿ ಜೈಲಿನಲ್ಲಿರುವ ಕುಖ್ಯಾತ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯಿಯ ತಮ್ಮ ಈ ಅನ್ಮೋಲ್. ಅಮೆರಿಕದಲ್ಲಿ ನೆಲಸಿದ್ದಾನೆ. ಮಹಾರಾಷ್ಟ್ರದ ಎನ್‌ಸಿಪಿ ಮುಖಂಡರಾಗಿದ್ದ ಬಾಬಾ ಸಿದ್ದಿಕಿ ಹತ್ಯೆ ಹಿಂದೆ ಈತನ ಪಾತ್ರವಿದೆ ಎಂದು ಹೇಳಲಾಗುತ್ತಿದ್ದು, ಹಲವು ಪ್ರಮುಖರ ಹತ್ಯೆ ಪ್ರಕರಣದಲ್ಲಿ ಈತ ಪೊಲೀಸರಿಗೆ ಬೇಕಾಗಿದ್ದಾನೆ. ಕಳೆದ ವರ್ಷ ಮುಂಬೈನಲ್ಲಿ ನಟ ಸಲ್ಮಾನ್ ಖಾನ್ ಮನೆ ಮುಂಭಾಗದಲ್ಲಿ ನಡೆದ ಗುಂಡಿನ ದಾಳಿಯ ಹೊಣೆಯನ್ನು ಅನ್ಮೋಲ್ ಹೊತ್ತುಕೊಂಡಿದ್ದ. ಪೊಲೀಸರು ಈತನಿಗಾಗಿ ಲುಕ್‌ಔಟ್ ನೋಟಿಸ್ ಹೊರಡಿಸಿದ್ದರು. ಸುಳಿವು ನೀಡಿದವರಿಗೆ ₹10 ಲಕ್ಷ ಬಹುಮಾನ ಘೋಷಿಸಿದ್ದರು.

ಟೈಗರ್ ಮೆಮನ್



ಇಬ್ರಾಹಿಂ ಮುಷ್ತಾಕ್ ಅಬ್ದುಲ್ ರಜಾಕ್ ಮೆಮನ್ ಅಲಿಯಾಸ್ ಟೈಗರ್ ಮೆಮನ್, ದಾವೂದ್ ಸಹಚರನಾಗಿದ್ದವನು ಮತ್ತು ಭಯೋತ್ಪಾದಕ. ಇವನು 1993ರ ಮುಂಬೈ ಸ್ಫೋಟದ ಮುಖ್ಯ ಸಂಚುಕೋರ. ಈ ಪ್ರಕರಣದಲ್ಲಿ ಟೈಗರ್ ಮೆಮನ್ ಸೇರಿದಂತೆ ಇವರ ಕುಟುಂಬದ ಯಾಕೂಬ್, ಎಸ್ಸಾ, ರುಬೀನಾ ಮತ್ತು ರಾಹಿಲ್ ಅವರನ್ನು ಅಪರಾಧಿಗಳೆಂದು ಕೋರ್ಟ್ ತೀರ್ಪು ನೀಡಿದೆ. ಇವರ ಪೈಕಿ ಯಾಕೂಬ್‌ನನ್ನು 2015ರಲ್ಲಿ ಗಲ್ಲಿಗೇರಿಸಲಾಯಿತು. ಟೈಗರ್ ಮೆಮನ್ ದೇಶ ತೊರೆದು ಪಲಾಯನ ಮಾಡಿದ್ದು, ಪಾಕಿಸ್ತಾನದಲ್ಲಿ ಆಶ್ರಯ ಪಡೆದಿದ್ದಾನೆ ಎನ್ನಲಾಗಿದೆ.

ಅರ್ಶ್ ಡಲ್ಲಾ

ಅರ್ಶ್ ಡಲ್ಲಾ ಎಂದು ಗುರುತಿಸಿಕೊಂಡಿರುವ 'ಅರ್ಶ್‌ದೀಪ್ ಸಿಂಗ್ ಗಿಲ್' ಭಾರತಕ್ಕೆ ಬೇಕಾದ ಕುಖ್ಯಾತ ಭಯೋತ್ಪಾದಕ. ಈತ ನಿಷೇಧಿತ ಖಾಲಿಸ್ತಾನ್ ಟೈಗರ್ ಫೋರ್ಸ್‌ನ ಮುಖ್ಯಸ್ಥ ಎಂದು ನಂಬಲಾಗಿದೆ. ಕೆನಡಾದಲ್ಲಿ ವಾಸವಾಗಿರುವ ಈತನ ವಿರುದ್ಧ ಭಾರತದಲ್ಲಿ ಭಯೋತ್ಪಾದನಾ ಕೃತ್ಯ, ಕೊಲೆ, ಕೊಲೆ ಯತ್ನ, ಸುಲಿಗೆ, ಭಯೋತ್ಪಾದನೆಗೆ ಆರ್ಥಿಕ ನೆರವು ಸೇರಿದಂತೆ 50ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. 2023ರಲ್ಲಿ ಭಾರತವು ಈತನನ್ನು ಭಯೋತ್ಪಾದಕ ಎಂದು ಘೋಷಿಸಿದೆ. ಡಲ್ಲಾನು ಹತ್ಯೆಗೀಡಾಗಿರುವ ಖಾಲಿಸ್ತಾನಿ ಮುಖಂಡ ಹರ್ದೀಪ್ ಸಿಂಗ್‌ನ ಆಪ್ತ ಎನ್ನಲಾಗಿದೆ. ಭಾರತವು ಆತನ ಹಸ್ತಾಂತರಕ್ಕೆ ಪ್ರಯತ್ನಿಸುತ್ತಿದೆ. ಕೆನಡಾದಲ್ಲಿ ಬಂಧನಕ್ಕೆ ಒಳಗಾಗಿದ್ದ ಆತ ಈಗ ಜಾಮೀನಿನ ಮೇಲೆ ಹೊರಗಿದ್ದಾನೆ.

ಗೋಲ್ಡಿ ಬ್ರಾರ್



ಗೋಲ್ಡಿ ಬ್ರಾರ್, ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯಿಯ ಸಹಚರ. ಈತನ ಹೆಸರು ಸತೀಂದರ್‌ಜೀತ್ ಸಿಂಗ್. ಪಂಜಾಬ್‌ನ ಮುಕ್ತಾರ್ ಸಾಹಿಬ್‌ನ ನಿವಾಸಿಯಾಗಿದ್ದ ಈತ 2017ರಲ್ಲಿ ವಿದ್ಯಾರ್ಥಿ ವೀಸಾದ ಮೇಲೆ ಕೆನಡಾಕ್ಕೆ ಹೋಗಿ, ನಂತರ ಅಲ್ಲಿಯೇ ನೆಲಸಿ, ಬಿಷ್ಣೋಯಿ ಗ್ಯಾಂಗ್‌ನ ಸಕ್ರಿಯ ಸದಸ್ಯನಾಗಿ ಕೆಲಸ ಮಾಡುತ್ತಿದ್ದಾನೆ. ಈತನನ್ನು ಭಾರತ ಭಯೋತ್ಪಾದಕ ಎಂದು ಘೋಷಿಸಿದೆ. ಈತ ಗಾಯಕ ಸಿದ್ದು ಮೂಸೆವಾಲಾ ಕೊಲೆ ಪ್ರಕರಣದ ಪ್ರಮುಖ ಆರೋಪಿ. ಜತೆಗೆ ಹಲವು ಕೊಲೆ, ಸುಲಿಗೆ ಆರೋಪಗಳೂ ಈತನ ಮೇಲಿವೆ. ಈತನ ಸುಳಿವು ನೀಡಿದವರಿಗೆ ಭಾರತ ಸರ್ಕಾರವು ₹10 ಲಕ್ಷ ಬಹುಮಾನ ಘೋಷಿಸಿದೆ.

ಭಾರತಕ್ಕೆ ಹಸ್ತಾಂತರಗೊಂಡ ಪ್ರಮುಖರು

ತಹವ್ವುರ್ ರಾಣಾ: 26/11ರ ಮುಂಬೈ ದಾಳಿ ಪ್ರಕರಣದ ಸಂಚುಕೋರರಲ್ಲಿ ಒಬ್ಬನಾಗಿರುವ ತಹವ್ವುರ್ ರಾಣಾನನ್ನು ಅಮೆರಿಕವು ಇದೇ 10ರಂದು ಭಾರತಕ್ಕೆ ಹಸ್ತಾಂತರಿಸಿತ್ತು

ಅಬು ಸಲೇಂ: 1993ರ ಮುಂಬೈ ಸ್ಫೋಟ ಪ್ರಕರಣಗದ ಪ್ರಮುಖ ಆರೋಪಿಗಳಲ್ಲಿ ಒಬ್ಬನಾಗಿದ್ದ ಅಬುಸಲೇಂ, ಕೊಲೆ ಮತ್ತು ಸುಲಿಗೆ ನಡೆಸಿರುವ ಆರೋಪವನ್ನೂ ಎದುರಿಸುತ್ತಿದ್ದ. ಪೋರ್ಚುಗಲ್‌ನಲ್ಲಿ ಆಶ್ರಯ ಪಡೆದಿದ್ದ ಆತನನ್ನು 2005ರಲ್ಲಿ ಭಾರತಕ್ಕೆ ಕರೆ ತರಲಾಗಿತ್ತು

ಛೋಟಾ ರಾಜನ್: ದಾವೂದ್ ಇಬ್ರಾಹಿಂನ ಅತ್ಯಾಪ್ತ ಮತ್ತು ಹಲವು ಅಪರಾಧ ಪ್ರಕರಣಗಳಲ್ಲಿ ಭಾರತಕ್ಕೆ ಬೇಕಾಗಿದ್ದ ಪಾತಕಿ ಛೋಟಾ ರಾಜನ್‌ನನ್ನು ಇಂಡೊನೇಷ್ಯಾದಿಂದ 2015ರಲಿ ಕರೆತರಲಾಗಿತ್ತು

ಕ್ರಿಸ್ಟಿಯನ್ ಮೈಕೆಲ್: ಆಗಸ್ಟಾವೆಸ್ಟ್‌ಲ್ಯಾಂಡ್ ಅತಿಗಣ್ಯರ ಹೆಲಿಕಾಪ್ಟರ್ ಹಗರಣದಲ್ಲಿ ಬೇಕಾಗಿದ್ದ ಮಧ್ಯವರ್ತಿ ಕ್ರಿಸ್ಟಿಯನ್ ಮೈಕೆಲ್‌ನನ್ನು 2018ರಲ್ಲಿ ಯುಎಇ, ಭಾರತಕ್ಕೆ ಹಸ್ತಾಂತರಿಸಿತ್ತು

ರವಿ ಪೂಜಾರಿ: ನೂರಾರು ಪ್ರಕರಣಗಳಲ್ಲಿ ಭಾರತಕ್ಕೆ ಬೇಕಾಗಿದ್ದ ಭೂಗತಪಾತಕಿ ರವಿಪೂಜಾರಿಯನ್ನು ದಕ್ಷಿಣ ಆಫ್ರಿಕಾದಲ್ಲಿ ಬಂಧಿಸಲಾಗಿತ್ತು. ಅವನನ್ನು 2020ರಲ್ಲಿ ಸೆನೆಗಲ್‌ನಿಂದ ಭಾರತಕ್ಕೆ ಕರೆತರಲಾಗಿತ್ತು

ರಾಷ್ಟ್ರೀಯ

ಬಿಹಾರ ಚುನಾವಣೆ: ಕಾಂಗ್ರೆಸ್, ಆರ್‌ಜೆಡಿ ಮೈತ್ರಿ ಮಾತುಕತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರದಲ್ಲಿ 'ಇಂಡಿಯಾ' ಮೈತ್ರಿಕೂಟದ ಮುಖ್ಯಮಂತ್ರಿ ಅಭ್ಯರ್ಥಿ ಘೋಷಣೆ ಬಗ್ಗೆ ಭಿನ್ನಾಭಿಪ್ರಾಯದ ನಡುವೆ, ಕಾಂಗ್ರೆಸ್ ಹಾಗೂ ಆರ್‌ಜೆಡಿಯ ಉನ್ನತ ನಾಯಕರು ಮಂಗಳವಾರ ಇಲ್ಲಿ ಸಭೆ ಸೇರಿ ಚುನಾವಣೆ ನಡೆಯಲಿರುವ ರಾಜ್ಯದಲ್ಲಿ ಮಹಾಮೈತ್ರಿಕೂಟವನ್ನು ಬಲಪಡಿಸುವ ಮಾರ್ಗಗಳ ಕುರಿತು ಚರ್ಚಿಸಿದರು.

ವಿಧಾನಸಭಾ ಚುನಾವಣೆಗೆ ಜಂಟಿ ಕಾರ್ಯತಂತ್ರ ಸಿದ್ಧಪಡಿಸಲು ಪಟ್ನಾದಲ್ಲಿ ಗುರುವಾರ ನಡೆಯಲಿರುವ ಮೈತ್ರಿಕೂಟದ ಪಾಲುದಾರರ ಸಭೆಗೆ ಮುಂಚಿತವಾಗಿ ಆರ್‌ಜೆಡಿಯ ಉನ್ನತ ನಾಯಕ ತೇಜಸ್ವಿ ಯಾದವ್ ಅವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿಯಾದರು.

ಎಲ್ಲ ಪಕ್ಷಗಳು ಸಂಯೋಜಿತ ಕಾರ್ಯತಂತ್ರ ರೂಪಿಸಿ ಸಮರ್ಪಕ ಅನುಷ್ಠಾನದೊಂದಿಗೆ ಚುನಾವಣೆ ಎದುರಿಸಬೇಕೆಂದು ಮೈತ್ರಿ ನಾಯಕರು ಬಯಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮೈತ್ರಿಕೂಟದ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಚುನಾವಣೆ ನಂತರ ನಿರ್ಧರಿಸಬೇಕು ಎಂದು ಸಚಿನ್ ಪೈಲಟ್ ಸೇರಿದಂತೆ ಕಾಂಗ್ರೆಸ್‌ನ ಕೆಲವು ನಾಯಕರು ಬಹಿರಂಗ ಹೇಳಿಕೆ ನೀಡಿದ್ದಾರೆ. ಇದು ಆರ್‌ಜೆಡಿ ನಾಯಕರ ಅತೃಪ್ತಿಗೆ ಕಾರಣವಾಗಿದೆ. ಈ ವಿಷಯದಲ್ಲಿ ಸಂಘರ್ಷ ಉಂಟಾಗಬಾರದು ಎಂದು ಉಭಯ ಪಕ್ಷಗಳ ನಾಯಕರು ಅಭಿಪ್ರಾಯಪಟ್ಟರು. ಈ ವಿಷಯದ ಬಗ್ಗೆ ಚರ್ಚಿಸಿ ಸರ್ವಾನುಮತದಿಂದ ನಿರ್ಧರಿಸಲಾಗುವುದು ಮತ್ತು ಅದರ ಬಗ್ಗೆ ಚಿಂತಿಸಬಾರದು ಎಂದು ತೇಜಸ್ವಿ ಯಾದವ್ ಹೇಳಿದರು.

'ಬಿಹಾರದಲ್ಲಿ ಈ ಸಲ ಬದಲಾವಣೆ ಖಚಿತ. ಕಾಂಗ್ರೆಸ್ ನಾಯಕರು ಹಾಗೂ ತೇಜಸ್ವಿ ಯಾದವ್ ಜತೆಗೂಡಿ ಮಹಾಮೈತ್ರಿಕೂಟದ ಬಲವರ್ಧನೆ ಬಗ್ಗೆ ಚರ್ಚಿಸಿದ್ದೇವೆ. ಮುಂಬರುವ ಚುನಾವಣೆಯಲ್ಲಿ ನಾವು ಬಿಹಾರದ ಜನರಿಗೆ ಬಲವಾದ, ಸಕಾರಾತ್ಮಕ ಮತ್ತು ಕಲ್ಯಾಣ-ಆಧಾರಿತ ಆಯ್ಕೆಯನ್ನು ನೀಡುತ್ತೇವೆ. ಬಿಹಾರವನ್ನು ಬಿಜೆಪಿ ಮತ್ತು ಅದರ ಅವಕಾಶವಾದಿ ಮೈತ್ರಿಕೂಟದಿಂದ ಮುಕ್ತಗೊಳಿಸಲಾಗುವುದು' ಎಂದು ಖರ್ಗೆ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸಲ್ಮಾನ್‌ಗೆ ಬೆದರಿಕೆ ಹಾಕಿದವ ಮನೋರೋಗಿ



ವಡೋದರಾ/ ಮುಂಬೈ (ಪಿಟಿಐ): ಬಾಲಿವುಡ್ ನಟ ಸಲ್ಮಾನ್ ಖಾನ್ ಅವರಿಗೆ ಕೊಲೆ ಬೆದರಿಕೆ ಹಾಕಿದ್ದ ಎನ್ನಲಾದ ವ್ಯಕ್ತಿಯನ್ನು ಗುಜರಾತ್‌ನ ವಡೋದರಾ ಜಿಲ್ಲೆಯ ಗ್ರಾಮವೊಂದರಲ್ಲಿ ಪತ್ತೆ ಹಚ್ಚಲಾಗಿದೆ ಎಂದು ಮುಂಬೈ ಪೊಲೀಸರು ತಿಳಿಸಿದ್ದಾರೆ.

ಸಲ್ಮಾನ್‌ಗೆ ಕೊಲೆ ಬೆದರಿಕೆ ಹಾಕಿದ ಆರೋಪಿಯನ್ನು 26 ವರ್ಷದ ಮಯಾಂಕ್ ಪಾಂಡ್ಯ ಎಂದು ಗುರುತಿಸಲಾಗಿದ್ದು, ಆತ ಮಾನಸಿಕ ಅಸ್ವಸ್ಥನಾಗಿದ್ದಾನೆ. ಹೀಗಾಗಿ, ಆತನನ್ನು ಬಂಧಿಸದೆ, ಅಗತ್ಯವಿದ್ದಾಗ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ನೋಟಿಸ್ ನೀಡಲಾಗಿದೆ ಎಂದು ಮುಂಬೈ ಪೊಲೀಸರು ತಿಳಿಸಿದ್ದಾರೆ. ಸಲ್ಮಾನ್ ಖಾನ್ ಅವರ ಕಾರನ್ನು ಬಾಂಬ್ ಇಟ್ಟು ಸ್ಫೋಟಿಸಲಾಗುವುದು ಮತ್ತು ವೈ ಪ್ಲಸ್ ಭದ್ರತೆ ಹೊಂದಿರುವ ಅವರನ್ನು ಮನೆಗೆ ನುಗ್ಗಿ ಥಳಿಸುತ್ತೇವೆ ಎಂಬ ಬೆದರಿಕೆಯ ಸಂದೇಶವು ಭಾನುವಾರ ಮುಂಬೈ ಸಂಚಾರಿ ಪೊಲೀಸರ ವಾಟ್ಸ್‌ಆ್ಯಪ್ ಸಹಾಯವಾಣಿಗೆ ಬಂದಿತ್ತು.

ಪೆನ್ಸಿಲ್‌ಗಾಗಿ ಜಗಳ: ಸ್ನೇಹಿತನ ಮೇಲೆ ಹಲ್ಲೆ

ತಿರುನಲ್ವೇಲಿ (ಪಿಟಿಐ): ತಮಿಳುನಾಡಿನ ತಿರುನಲ್ವೇಲಿ ಜಿಲ್ಲೆಯ ಪಲಾಯಂಕೊಟ್ಟೈ ಎಂಬಲ್ಲಿ 8ನೇ ತರಗತಿ ವಿದ್ಯಾರ್ಥಿಯೊಬ್ಬ ಪೆನ್ಸಿಲ್ ವಿಚಾರಕ್ಕೆ ತನ್ನ ಸ್ನೇಹಿತನ ಮೇಲೆ ಕುಡುಗೋಲಿನಿಂದ ಹಲ್ಲೆ ನಡೆಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಬ್ಬರು ಬಾಲಕರ ಮಧ್ಯೆ ಪೆನ್ಸಿಲ್ ವಿಚಾರಕ್ಕೆ ಇತ್ತೀಚೆಗೆ ಜಗಳವಾಗಿತ್ತು. ಹೀಗಾಗಿ, ಈ ಇಬ್ಬರು ಮಾತನಾಡುತ್ತಿರಲಿಲ್ಲ. ಮಂಗಳವಾರ ಈ ವಿದ್ಯಾರ್ಥಿಗಳ ಪೈಕಿ ಒಬ್ಬ ಶಾಲಾ ಬ್ಯಾಗಿನಲ್ಲಿ ಕುಡುಗೋಲನ್ನು ಅಡಗಿಸಿಟ್ಟುಕೊಂಡು ಬಂದು, ತನ್ನ ಸ್ನೇಹಿತನ ಮೇಲೆ ಹಲ್ಲೆ ಮಾಡಿದ್ದಾನೆ. ಹಲ್ಲೆಗೊಳಗಾದ ಬಾಲಕನಿಗೆ ಎರಡು–ಮೂರು ಕಡೆ ಗಾಯಗಳಾಗಿವೆ ಎಂದು ಪೊಲೀಸರು ಹೇಳಿದ್ದಾರೆ.

ಕಾಡಾನೆ ದಾಳಿ: ಮೂವರ ಸಾವು

ತಿರುವನಂತಪುರ: ಕೇರಳದ ತ್ರಿಶ್ಶೂರ್ ಜಿಲ್ಲೆಯ ಅತಿರಾಪಿಳ್ಳಿ ಅರಣ್ಯದಲ್ಲಿ ಸಂಭವಿಸಿದ ಪ್ರತ್ಯೇಕ ಘಟನೆಗಳಲ್ಲಿ ಕಾಡಾನೆಗಳ ದಾಳಿಯಿಂದ ಮೂವರು ಮೃತಪಟ್ಟಿದ್ದಾರೆ.

ಕಿರುಉತ್ಪನ್ನಗಳನ್ನು ಸಂಗ್ರಹಿಸಲಿಕ್ಕಾಗಿ ಕಾಡಿಗೆ ಹೋಗಿದ್ದ ವಾಳಚ್ಚಾಲ್‌ನ ಬುಡಕಟ್ಟು ಸಮುದಾಯದ ಸತೀಶ್ ಹಾಗೂ ಅಂಬಿಕಾ ಕಾಡಾನೆ ದಾಳಿಯಿಂದ ಸೋಮವಾರ ರಾತ್ರಿ ನಿಧನರಾಗಿದ್ದರೆ, ಮಲಕ್ಕಪರ ಗ್ರಾಮದ ಸೆಬಾಸ್ಟಿಯನ್ (20) ಭಾನುವಾರ ಜೇನುತುಪ್ಪ ಸಂಗ್ರಹಕ್ಕಾಗಿ ಹೋಗಿದ್ದಾಗ ಕಾಡಾನೆ ತುಳಿದು ಮೃತರಾಗಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ವ್ಯಕ್ತಿಯೊಬ್ಬರು ಪೊಲೀಸ್ ಅಧಿಕಾರಿಯ ಮೇಲೆ ಹಲ್ಲೆ ನಡೆಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ಇದು ಪಶ್ಚಿಮ ಬಂಗಾಳದಲ್ಲಿ ನಡೆದ ಘಟನೆಯಾಗಿದ್ದು, ಹಲ್ಲೆ ನಡೆಸುತ್ತಿರುವ ವ್ಯಕ್ತಿ ತೃಣಮೂಲ ಕಾಂಗ್ರೆಸ್‌ನ ಶಾಸಕ ಮನ್ಸೂರ್ ಮೊಹಮ್ಮದ್ ದಿಮಿರ್ ಎಂದು ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದನೆ ಮಾಡುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ವೈರಲ್ ವಿಡಿಯೊದ ಕೀಫ್ರೇಮ್ ಅನ್ನು ಇನ್‌ವಿಡ್ ಟೂಲ್ ಮೂಲಕ ಪ್ರತ್ಯೇಕಿಸಿ, ಆ ಕೀಫ್ರೇಮ್ ಅನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲಿಸಿದಾಗ, ಅದು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವರದಿಗೆ ಸಂಪರ್ಕ ಕಲ್ಪಿಸಿತು. ಈ ಕುರಿತು 2018ರ ಅ.18ರಂದು ಪತ್ರಿಕೆಯಲ್ಲಿ ವರದಿ ಪ್ರಕಟವಾಗಿದೆ. ಉತ್ತರ ಪ್ರದೇಶದ ಮೀರತ್‌ನಲ್ಲಿ ಕ್ಷುಲ್ಲಕ ವಿಚಾರಕ್ಕೆ ಸಂಬಂಧಿಸಿ ಬಿಜೆಪಿ ಕೌನ್ಸಿಲರ್ ಮುನೀಶ್ ಚೌಧರಿ ಅವರು ಪೊಲೀಸ್ ಅಧಿಕಾರಿ ಮೇಲೆ ಹಲ್ಲೆ ನಡೆಸಿದ ಬಗ್ಗೆ ವರದಿಯಾಗಿತ್ತು. ಹಳೇ ವಿಡಿಯೊ ಅನ್ನು ಸುಳ್ಳು ಪ್ರತಿಪಾದನೆಗಳೊಂದಿಗೆ ಈಗ ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಈ ಭೂಮಿ ಕರ್ತಾರನ ಕಮ್ಮಟ

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

174

ಯಾವಾಗ ದೇಶ ಶ್ರೇಷ್ಠ ಆಗುತ್ತದೆ? ಬುದ್ಧ, ಬಸವ, ಅಂಬೇಡ್ಕರ್, ಅಬ್ದುಲ್ ಕಲಾಂ ಅವರಂತಹ ಹತ್ತಾರು ಮಂದಿ ಶ್ರೇಷ್ಠರಾದರೆ ಭಾರತ ಶ್ರೇಷ್ಠವಾಗುವುದಿಲ್ಲ. ದೇಶದಲ್ಲಿ ಇರುವ ಎಲ್ಲ ವ್ಯಕ್ತಿಗಳೂ ಶ್ರೇಷ್ಠರಾದರೆ ದೇಶವೂ ಶ್ರೇಷ್ಠವಾಗುತ್ತದೆ. ಕಾನೂನಿಗೂ ಕರುಣೆಗೂ ಏನು ವ್ಯತ್ಯಾಸ? ಕಾನೂನು ಕ್ರೂರಿಗೆ ಶಿಕ್ಷೆ ಕೊಟ್ಟರೆ, ಕರುಣೆ ಕ್ರೌರ್ಯಕ್ಕೆ ಶಿಕ್ಷೆ ಕೊಡುತ್ತದೆ. ಕ್ರೌರ್ಯ ಹೋಗಬೇಕು ಎಂದರೆ ಅಸ್ತೇಯ ವ್ರತ ಪಾಲನೆ ಮಾಡಬೇಕು ಎಂದು ಪತಂಜಲಿ ಮಹರ್ಷಿ ಹೇಳುತ್ತಾರೆ.

ಕಲ್ಯಾಣ ಪಟ್ಟಣದಲ್ಲಿ ಒಂದು ಘಟನೆ ನಡೆಯಿತು. ಅಲ್ಲಮಪ್ರಭುಗಳು ಕಲ್ಯಾಣಕ್ಕೆ ಬಂದರು. ಬಸವಣ್ಣನವರು ಅಲ್ಲಮಪ್ರಭುಗಳನ್ನು ಮಹಾಮನೆಗೆ ಸ್ವಾಗತಿಸಿದರು. 'ತನು, ಮನ, ಧನ ಎಲ್ಲವನ್ನೂ ಕೊಡ್ತೀನಿ' ಅಂದರು. 'ತನುವ ಬೇಡಿದರೆ ಈವೆ, ಮನವ ಬೇಡಿದರೆ ಈವೆ, ಧನವ ಬೇಡಿದರೆ ಈವೆ ನಿಮ್ಮ ಚರಣಕ್ಕೆ' ಎನ್ನುತ್ತಾರೆ ಬಸವಣ್ಣ. ಅದಕ್ಕೆ ಅಲ್ಲಮಪ್ರಭು 'ತನು, ಮನ ಧನ ಯಾರ ಒಡವಿ, ಮೇರುಗಿರಿಗಳೆಲ್ಲವೂ ಪ್ರಮಥರೊಡವೆ. ರಜತಗಿರಿಗಳೆಲ್ಲವೂ ಪುರಾತರೊಡವೆ. ಚತುರ್ದಶ ಭುವನವೆಲ್ಲವೂ ಲಿಂಗದೊಡವೆ. ಪೃಥ್ವಿ ಎಂಬುದು ಕರ್ತಾರನ ಕಮ್ಮಟ ಅಚ್ಚಿನ ಮೊಳೆ ಬಾಣಸದ ಮನೆ. ತನುಮನಧನಂಗಳೆಲ್ಲವು ನಮ್ಮ ಗುಹೇಶ್ವರಲಿಂಗದ ಸೊಮ್ಮು. ನೀನೇನ ಕೊಟ್ಟು ಭಕ್ತನಾದೆ ಹೇಳಾ ಬಸವಣ್ಣಾ?' ಎಂದು ಕೇಳುತ್ತಾರೆ. 'ತನುಮನಧನ ಎಲ್ಲಾ ದೇವ ಕೊಟ್ಟಿದ್ದು. ನಿನ್ನದೇನು ಕೊಟ್ಟು ಭಕ್ತನಾದೆ ಹೇಳು' ಎನ್ನುತ್ತಾರೆ ಅವರು.

ಮೌಂಟ್ ಎವರೆಸ್ಟ್ ಇದೆ. ಹಿಮಾಲಯದಲ್ಲಿ ಸಾಕಷ್ಟು ಪರ್ವತಗಳಿವೆ. ಅವುಗಳನ್ನು ಮನುಷ್ಯ ನಿರ್ಮಾಣ ಮಾಡಿದ್ದಾನೇನು? ಕವಿ ಕಾಳಿದಾಸ ಹಿಮಾಲಯವನ್ನು ದೇವತೆಗಳ ಆವಾಸಸ್ಥಾನ ಎಂದು ವರ್ಣಿಸುತ್ತಾನೆ. ಹಿಮಾಲಯವನ್ನು ಮನುಷ್ಯ ನಿರ್ಮಾಣ ಮಾಡಿದ್ದೇನು? ಬಹಳ ಎಂದರೆ ನಾವು ಪ್ರವಾಸ ಹೋಗಬಹುದು ಅಷ್ಟೆ. ಫೋಟೊ ತೆಗೆಸಿಕೊಳ್ಳಬಹುದು ಅಷ್ಟೆ. ಹುಡುಗಿಗೆ ಒಂದು ತೊಲೆ, ಎರಡು ತೊಲೆ ಬಂಗಾರ ಹಾಕಿದ್ದೇನೆ ಎಂದು ಜಂಬ ಕೊಚ್ಚಿಕೊಳ್ಳುತ್ತೀರಿ. ಆದರೆ ಬಂಗಾರದ ಗಣಿಗಳೇ ನಿರ್ಮಾಣವಾಗಿರದಿದ್ದರೆ ಹಗ್ಗ ಹಾಕಬೇಕಿತ್ತು ಅಷ್ಟೆ. ಬಂಗಾರ ನಿರ್ಮಾಣ ಮಾಡಿದವರು ಯಾರು? ತಳ, ಸುತಳ, ಪಾತಾಳ ಎಂದು ಹೇಳುತ್ತೇವೆಲ್ಲ, ಎಲ್ಲವೂ ದೇವನ ಜಗತ್ತು. ದೇವರು ನಿರ್ಮಾಣ ಮಾಡಿದ್ದಾನೆ ಎಂದು ನಾವು ಅನುಭವಿಸುತ್ತಿದ್ದೇವೆ. ಸಪ್ತ ಸಾಗರಗಳು ಇಲ್ಲದೇ ಇದ್ದರೆ ಮೋಡಗಳು ಕಟ್ಟುತ್ತಿರಲಿಲ್ಲ. ಮಳೆ ಸುರಿಯುತ್ತಿರಲಿಲ್ಲ. ಭೂಮಿ ಬೆಳೆ ಬೆಳೆಯುತ್ತಿರಲಿಲ್ಲ.

ಕಾರ್ತಿಕ ಮಾಸದಲ್ಲಿ ನಾವು ದೇವರ ಮುಂದೆ ದೀಪ ಹಚ್ಚುತ್ತೇವೆ. ನಾವು ಹಚ್ಚಿದ ಹಣತೆ ದೀಪ ಆರಿದೆ. ಬತ್ತಿ ಸುಟ್ಟಿದೆ. ಆದರೆ ಯಾವಾಗಲೂ ಆರದಂತಹ ಸೂರ್ಯ ಚಂದ್ರರನ್ನು ಇಟ್ಟಿದ್ದಾನಲ್ಲ, ಅವನ ಕಾರ್ತಿಕ ಹೇಗಿದೆ ನೋಡಿ. ಅವನದ್ದು ನಿತ್ಯ ಕಾರ್ತಿಕೋತ್ಸವ. ಸೂರ್ಯ ಚಂದ್ರರನ್ನು ನಾವು ಮಾಡಲು ಸಾಧ್ಯವಿದೆಯೇನು? ಭೂಮಿ ಎಂಬುದು ಕರ್ತಾರನ ಕಮ್ಮಟ. ಕಮ್ಮಟ ಎಂದರೆ ಶೋರೂಮ್. ಶೋರೂಮ್‌ನಲ್ಲಿ ಹೊಸ ಗಾಡಿಯನ್ನು ಮುಂದೆ ಇಟ್ಟಿರುತ್ತಾರೆ. ಹಳೆಯ ಗಾಡಿಗಳನ್ನು ಗ್ಯಾರೇಜ್‌ಗೆ ಹಾಕುತ್ತಾರೆ. ಈ ಭೂಮಿಯೂ ಹಾಗೆಯೇ. ಹೊಸ ಕುಡಿಗಳನ್ನು ತೊಟ್ಟಿಲಿಗೆ ಹಾಕುತ್ತಾರೆ. ಹಳಬರನ್ನು ಐಸಿಯುಗೆ ಕಳಿಸುತ್ತಾರೆ. ಮನೆಯಲ್ಲಿ ಒಂದು ಮಗು ಹುಟ್ಟಿರುತ್ತದೆ. ಅಜ್ಜ ಸಾಯುತ್ತಿರುತ್ತಾನೆ. ಆದರೆ ನಿಸರ್ಗ ಹೇಗಿದೆ ಎಂದರೆ, ಹುಟ್ಟಿದ ಮಗುವಿಗೆ ತೊಟ್ಟಿಲು ನಿರ್ಮಾಣಕ್ಕೂ ಒಂದು ಗಿಡ ಬೆಳೆಸಿದೆ. ಸತ್ತ ಅಜ್ಜನ ಚಟ್ಟಕ್ಕೂ ಒಂದು ಗಿಡ ಬೆಳೆಸಿದೆ. ಅದೇ ನಿಸರ್ಗ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಏಪ್ರಿಲ್ 16, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ತೃತೀಯ ಗಂ. 13-18 **ನಕ್ಷತ್ರ:** ಅನುರಾಧ ಅಹೋರಾತ್ರ **ಯೋಗ:** ವ್ಯತೀಪಾತ ಗಂ. 24-18 **ಕರಣ:** ವಿಷ್ಟಿ ಗಂ. 13-18, ಮೇಷ ಮಾಸದ 03 ನೇ ದಿನ, **ಮಳೆನಕ್ಷತ್ರ:** ಅಶ್ವಿನಿ 1.

ರಾಹುಕಾಲ : ಮಧ್ಯಾಹ್ನ 12-00 – 01-30

ಸೂರ್ಯೋದಯ : 06-21 **ಸೂರ್ಯಾಸ್ತ :** 06-40

ಮುಸ್ಲಿಂ ದಿನಾಂಕ : 17 ಶವ್ವಾಲ್

ಅದೃಷ್ಟ ಸಂಖ್ಯೆ : 6, 10

ಮೇಷ: ಕೃಷಿಗೆ ಸಂಬಂಧಿಸಿದ ವ್ಯಕ್ತಿಗಳಿಗೆ ಹವಾಮಾನ ವೈಪರೀತ್ಯದಿಂದಾಗಿ ಆತಂಕ, ಭಯ ಉಂಟಾಗಬಹುದು. ಉನ್ನತ ಶ್ರೇಣಿಯ ಅಧಿಕಾರಿ ವರ್ಗದವರಿಗೆ ಸ್ಥಳ ಬದಲಾವಣೆಯ ಸಂಭವವಿದೆ. ನಿರಾತಂಕವಾಗಿ ಕೆಲಸ ಮಾಡಿ.

ವೃಷಭ: ರಾಜಕೀಯ ವ್ಯಕ್ತಿಗಳು, ಸಮಾಜ ಸೇವಕರು ಜನಮನ್ನಣೆ ಗಳಿಸಬಹುದು. ಅಧಿಕಾರವನ್ನು ಬಳಸಿಕೊಂಡು ಮೋಸ ಮಾಡುವಂಥ ಕೆಲಸಗಳು ಬೇಡ.

ಮಿಥುನ: ಮಗಳ ಮದುವೆ ವಿಚಾರವಾಗಿ ದೂರದ ಊರಿಗೆ ಪ್ರಯಾಣ ಬೆಳೆಸಬೇಕಾಗುವುದು. ಕೋಪದ ಮೇಲೆ ನಿಯಂತ್ರಣವಿರಲಿ. ವಾದ-ವಿವಾದ-ಗಳಿಂದ ದೂರವಿರಿ. ಜಾಣ್ಮೆ ತೋರಿದಲ್ಲಿ ಅದೃಷ್ಟ ನಿಮ್ಮದಾಗಲಿದೆ.

ಕರ್ಕಾಟಕ: ಪೂರ್ವ ನಿರ್ಧರಿತ ಭೇಟಿಯನ್ನು ತಳ್ಳಿಹಾಕದೆ ವೃತ್ತಿಗೆ ಲಾಭ ಉಂಟಾಗುವಂತೆ ನೋಡಿಕೊಳ್ಳಿ. ಪ್ರಿಯ ವ್ಯಕ್ತಿಯೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳುವಿರಿ.

ಸಿಂಹ: ದೈನಂದಿನದ ಯಾಂತ್ರಿಕ ಬದುಕಿನಿಂದ ವಿರಾಮ ಪಡೆದು ಕುಟುಂಬದೊಂದಿಗೆ ಕಾಲ ಕಳೆಯುವಿರಿ. ಧನಾಗಮನಕ್ಕೆ ಒಂದಲ್ಲಾ ಒಂದು ರೀತಿಯಲ್ಲಿ ಅನುಕೂಲ ಆಗುತ್ತದೆ.

ಕನ್ಯಾ: ಸುಗಂಧ ದ್ರವ್ಯ ಅಥವಾ ಹೆಣ್ಣುಮಕ್ಕಳ ಅಲಂಕಾರಕ್ಕೆ ಸಂಬಂಧಿಸಿದ ವಸ್ತುಗಳ ಮಾರಾಟದ ವ್ಯಕ್ತಿಗಳಿಗೆ ಲಾಭದಾಯಕ ದಿನ. ದೇಹದ ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ.

ತುಲಾ: ಅಲಂಕಾರಿಕ ವಸ್ತುಗಳ ಅಥವಾ ಅನಗತ್ಯ ವಸ್ತುಗಳ ಖರೀದಿಯಿಂದ ಖರ್ಚು ಉಂಟಾಗುವುದು. ಕುಟುಂಬದಲ್ಲಿ ಅಥವಾ ಸಂಸಾರದಲ್ಲಿ ಅಶಾಂತಿಯ ವಾತಾವರಣ ತೋರಿಬರಬಹುದು. ಮಹಾಗಣಪತಿಯನ್ನು ಆರಾಧಿಸಿ.

ವೃಶ್ಚಿಕ: ಸಣ್ಣ ಸಣ್ಣ ವಿಚಾರವನ್ನೂ ಮನಸ್ಸಿಗೆ ಹಚ್ಚಿಕೊಂಡು ಆರೋಗ್ಯವನ್ನು ಕೆಡಿಸಿಕೊಳ್ಳುವಿರಿ. ಹಣ ಸಹಾಯ ಕೇಳುವುದು ಬೇಡ. ಪುತ್ರರತ್ನನ ಜನನ ಕುಟುಂಬದಲ್ಲಿ ಸಂತೋಷವನ್ನು ಉಂಟುಮಾಡುವುದು.

ಧನು: ಧಾರ್ಮಿಕ ವೃತ್ತಿಯವರಿಗೆ ಸಾಮಾಜಿಕವಾಗಿ ಗೌರವ ಪ್ರಾಪ್ತಿ. ಭೂಸಂಬಂಧ ವ್ಯವಹಾರದಲ್ಲಿ ಜಾಗ್ರತೆ ವಹಿಸಿ. ಗೃಹ ನಿರ್ಮಾಣ ಕಾರ್ಯವು ಪೂರ್ಣಗೊಳ್ಳುವ ಭರವಸೆ ಸಿಗುತ್ತದೆ.

ಮಕರ: ಅವಿವಾಹಿತರಿಗೆ ಅನಿರೀಕ್ಷಿತವೆಂಬಂತೆ ಕಂಕಣ ಭಾಗ್ಯ ಒದಗಿ ಬರಲಿದೆ. ಉದ್ಯೋಗದಲ್ಲಿ ಮುಂಬಡ್ತಿಗಾಗಿ ಪ್ರಯತ್ನ ನಡೆಸಿ. ಮಕ್ಕಳ ವಿದ್ಯಾಭ್ಯಾಸದ ವಿಚಾರದಲ್ಲಿ ತೀರ್ಮಾನಕ್ಕೆ ಬರಲಾಗದಂತೆ ಆಗಬಹುದು.

ಕುಂಭ: ಸತತ ಪರಿಶ್ರಮದಿಂದ ಋಣಬಾಧೆ ಪರಿಹಾರವಾಗಲಿದೆ. ಕಣ್ಣು, ಬೆನ್ನು, ಕಾಲುನೋವಿನಂಥ ದೈಹಿಕ ಅನಾರೋಗ್ಯಕ್ಕೆ ವಿದಾಯ ಹೇಳುವ ಕಾಲ ಪ್ರಾಪ್ತಿಯಾಗುವುದು. ಮಂಗಳ ಕಾರ್ಯದ ತಯಾರಿಗೆ ಶುಭ ದಿನ.

ಮೀನ: ವಿಲಾಸಿ ಜೀವನದ ಸುಖ ಅನುಭವಿಸುತ್ತೀರಿ. ಸಂಗೀತ ಕಲಾವಿದರಿಗೆ ಬೇಡಿಕೆ ಹೆಚ್ಚಾಗುವುದು. ವೃತ್ತಿಗೆ ಸಂಬಂಧಿಸಿದಂತೆ ಧೈರ್ಯದಿಂದ ಮುನ್ನಡೆದರೆ ಯಶಸ್ಸು ನಿಮ್ಮದಾಗುತ್ತದೆ. ದೂರ ಪ್ರಯಾಣ ಉತ್ತಮವಲ್ಲ.

ಪದಬಂಧ 6013


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮಜವಾಗಿ ನಡೆಯುತ್ತಿರುವ ಕೊಬ್ಬಿದ ಆನೆ (4)
3.ಒಂಟಿಯಾಗಿ ನಿಂತಿರುವ ಏಕಾಂಗಿ (4)
5.ಒಲುಮೆ ತೋರುತ್ತಲೇ ಮಾಡಿದ ಒತ್ತಾಯ (3)
6.ಕುದುರೆಯನ್ನೇರುವ ಬಳೆ (3)
8.ಚಾರ ಹೇಳಿರುವ ವಿಷಯ (3)
9.ಹರ್ಷವಿಲ್ಲಿ ವಿರಳವಾಗಿ ಬಂದಿದೆ (3)
10.ಕೈಯಲ್ಲಿರುವ ಹಣ (3)
12.ಉಂಟಾಗಬಹುದಾದುದನ್ನು ಹೀಗೆನ್ನಿ (3)
14.ರತ್ನಗಳ ಆಶ್ರಯಸ್ಥಾನ (4)
15.ಗೃಹದ ಮಧ್ಯೆ ಇರುವ ಹಜಾರ (4)

ಮೇಲಿಂದ ಕೆಳಕ್ಕೆ

1.ನಾರಿಗೊಲಿದ ಶಿವ! (4)
2.ಹಡಗು ಇಲ್ಲಿಗೆ ಬಂದಿದೆ (3)
3.ಮೆಲುವಾಗಿ ಆವರಿಸಿದ ಪ್ರೀತಿ! (3)
4.ಕಾಲ ಸೂಚಕ ಯಂತ್ರ (4)
7.ಹರುಷ ಪಡುತ್ತಿರುವ ಗಂಡು ವ್ಯಕ್ತಿ (3)
8.ರೀತಿಯು ಹೀಗೆ ಬಂದಿದೆಯಲ್ಲಾ (3)
9.ಈತ ಅಂಚೆಯ ಅಳು (4)
11.ಕೆಟ್ಟ ನಡುವಳಿಕೆಯಿದು (4)
12.ಕರದ ಕೊನೆಗಿರುವ ಮಿಶ್ರಣ ಕಾಣುತ್ತಿದೆಯೇ? (3)
13. ವ್ಯವಸಾಯಗಾರನಲ್ಲಿರುವ ಕೆಟ್ಟಚಟ! (3)



6012ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ತೀರ 3.ವಿಲೇಪನ
5.ಸಮರ 7.ರಸಭಂಗ
9.ಸಲುಗೆ 10.ಸಲ್ಲಾಪ
11.ರಣರಂಗ 13.ಜಲಧಿ
15.ವನರಾಜ 16.ಕುಕ್ಕೆ

ಮೇಲಿಂದ ಕೆಳಕ್ಕೆ:
2.ರಭಸ 3.ವಿವರ
4.ಪಗಾರ 6.ಮಜ್ಜಿಗೆ
8.ಗಣಪ 9.ಸತ್ಕಾರ
10.ಸತ್ಕುಲ 12.ಗಗನ
13.ಜಲಜ 14.ಧಿಮಾಕು

ಸುಡೊಕು 6398

					7		1	4
8		7	6		4	2		9
			3					
2	4			1		9		
							7	
7	5			9		3	4	
	8							3
			4		8	5		
9		4			2		6	8


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6397 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,828
ಇಂದಿನ ಅಂತ್ಯ	23,328
▲	500
ದಿನದ ಗರಿಷ್ಠ	23,368

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹450
12 ಕ್ಕೆ	₹60
ಮೈಸೂರು	
100ಕ್ಕೆ	₹450

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹325-582
ದ್ವಿತಳಿ (ಬಿ.ವಿ)	₹277-685

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹194
ಆರ್‌ಎಸ್‌ಎಸ್-5	₹189
ಗುಡ್ ಲಾಟ್	₹181

(ಪ್ರತಿ ಕೆ.ಜಿಗೆ)

ಅಡಿಕೆ ಧಾರಣೆ (₹ಗಳಲ್ಲಿ)

ಚಿತ್ರದುರ್ಗ	
ಅಪಿ	55719-56129
ಬೆಟ್ಟೆ	25249-25699
ಕೆಂಪುಗೋಟು	19609-20010
ರಾಶಿ	55239-55669
ಪುತ್ತೂರು	
ಕೋಕ	22000-30000
ಹೊಸತು	26000-44000
ಶಿವಮೊಗ್ಗ	
ಬೆಟ್ಟೆ	45500-56669
ಗೊರಬಲು	18009-30869
ರಾಶಿ	40000-56889
ಸರಕು	49000-93014
ಸಿದ್ದಾಪುರ	
ಬಿಳಿಗೋಟು	25699-32619
ಚಾಲಿ	34089-42399
ಕೋಕ	18619-25119
ಹಳೆಚಾಲಿ	36099-41899
ಕೆಂಪುಗೋಟು	21119-22889
ರಾಶಿ	42399-50099
ತಟ್ಟಿಬೆಟ್ಟೆ	28719-36119
ಶಿರಸಿ	
ಬೆಟ್ಟೆ	28888-40299
ಬಿಳಿಗೋಟು	23009-34000
ಚಾಲಿ	34409-43600
ಕೆಂಪುಗೋಟು	17699-23421
ರಾಶಿ	40088-47899
ಯಲ್ಲಾಪುರ	
ಅಪಿ	58109-74777
ಬಿಳಿಗೋಟು	16899-31900
ಚಾಲಿ	32518-44099
ಕೋಕ	4900-17599
ಕೆಂಪುಗೋಟು	14899-26969
ರಾಶಿ	40099-56709
ತಟ್ಟಿಬೆಟ್ಟೆ	28169-39010

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹27500
ಎಸಿ	₹16520
ಆರ್‌ಪಿ	₹22000
ಆರ್‌ಸಿ	₹12420

ಮುಂಬೈ ಧಾರಣೆ

ಶೇಂಗಾ

15-04-2025

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	11900-12000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1370 (1375)
ಒಂದು ವಾರದ ಡೆಲಿವರಿ	1365 (1370)
ಪಾಮ್ ವಾರದ ಡೆಲಿವರಿ	1308 (1303)
ಸೂರ್ಯಕಾಂತಿ ಎಣ್ಣೆ ಕಚ್ಚಾ	1325 (1330)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹92,850 (92,650)
ಬೆಳ್ಳಿ ಕೆ.ಜಿ ₹95,100 (94,900)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ವಿನಿಮಯ ದರ

$ ಡಾಲರ್	85.80
£ ಪೌಂಡ್	113.55
€ ಯುರೊ	97.27
¥ ಯೆನ್ (100ಕ್ಕೆ)	60

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹15000-18600
ತಿಪಟೂರು	₹10000-15600

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1360 (1365)
ಸೋಯಾ (ರಿಫೈನ್ಡ್)	₹1295 (1305)
ಸೂರ್ಯಕಾಂತಿ (ರಿಫೈನ್ಡ್)	₹1395 (1400)
ಪಾಮೋಲಿನ್	₹1310 (1305)

ಹಟ್ಟಿ ಗಣಿ: ಚಿನ್ನ ಉತ್ಪಾದನೆಯಿಂದ ₹350 ಕೋಟಿ ಲಾಭ

ಪ್ರಜಾವಾಣಿ ವಾರ್ತೆ

ಹಟ್ಟಿ ಚಿನ್ನದಗಣಿ: ಸರ್ಕಾರಿ ಸ್ವಾಮ್ಯದ ಹಟ್ಟಿ ಚಿನ್ನದ ಗಣಿ ಕಂಪನಿಯು 2024–25ನೇ ಸಾಲಿನ ಮಾರ್ಚ್ ಅಂತ್ಯಕ್ಕೆ 1,605 ಕೆ.ಜಿ ಚಿನ್ನ ಉತ್ಪಾದಿಸಿದೆ.

ಒಟ್ಟು 1,620 ಕೆ.ಜಿ ಚಿನ್ನ ಉತ್ಪಾದಿಸುವ ಗುರಿ ಹೊಂದಲಾಗಿತ್ತು. 1,605 ಕೆ.ಜಿ ಚಿನ್ನ ಉತ್ಪಾದನೆ ಮಾಡಿ ಶೇ 99ರಷ್ಟು ಗುರಿ ಸಾಧನೆ ಮಾಡಿದ್ದು, ₹350 ಕೋಟಿ ಲಾಭ ಗಳಿಸಿದೆ. 7.50 ಲಕ್ಷ ಮೆಟ್ರಿಕ್ ಟನ್ ಅದಿರು ಸಂಸ್ಕರಿಸುವ ಗುರಿ ಹೊಂದಲಾಗಿತ್ತು. ಆದರೆ, 6.83 ಲಕ್ಷ ಮೆಟ್ರಿಕ್ ಟನ್ ಅದಿರು ಸಂಸ್ಕರಿಸಲಾಗಿದೆ.

‘ತೆರಿಗೆ ಪಾವತಿ ಮುನ್ನ ಚಿನ್ನ ಉತ್ಪಾದನೆ ಲಾಭ ₹510 ಕೋಟಿ, ತೆರಿಗೆ ಪಾವತಿ ನಂತರ ₹350 ಕೋಟಿ ಲಾಭ ಬರುವ ನಿರೀಕ್ಷೆ ಇದೆ’ ಎಂದು ಗಣಿ ಕಂಪನಿ ಅಧಿಕಾರಿಗಳು ತಿಳಿಸಿದ್ದಾರೆ.

‘ಕಾರ್ಮಿಕರ ಪರಿಶ್ರಮದಿಂದ ಈ ಬಾರಿ ಉತ್ತಮ ಗುರಿ ಸಾಧನೆಯಾಗಿದೆ. ಮುಂದಿನ ದಿನಗಳಲ್ಲಿ ನಿರ್ದಿಷ್ಟ ಗುರಿ ತಲುಪಲು ಕಾರ್ಮಿಕರ ಶ್ರಮ ಅಗತ್ಯವಿದೆ’ ಎಂದು ಗಣಿ ಕಂಪನಿ ನಿಗಮದ ಅಧ್ಯಕ್ಷ ಜೆ.ಟಿ. ಪಾಟೀಲ ತಿಳಿಸಿದ್ದಾರೆ.

ಚಿಲ್ಲರೆ ಹಣದುಬ್ಬರ 6 ವರ್ಷದ ಕನಿಷ್ಠ: ಶೇ 3.34 ದಾಖಲು

ತರಕಾರಿ, ಮೊಟ್ಟೆ ಅಗ್ಗ



ನವದೆಹಲಿ (ಪಿಟಿಐ): ಮಾರ್ಚ್ ತಿಂಗಳಿನಲ್ಲಿ ಚಿಲ್ಲರೆ ಹಣದುಬ್ಬರವು ಆರು ವರ್ಷದ ಕನಿಷ್ಠ ಮಟ್ಟವಾದ ಶೇ 3.34ರಷ್ಟು ದಾಖಲಾಗಿದೆ. 2019ರ ಆಗಸ್ಟ್ ಬಳಿಕ ದಾಖಲಾಗಿರುವ ಕನಿಷ್ಠ ಮಟ್ಟ ಇದಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿಪಡಿಸಿರುವ ಶೇ 4ರ ಸರಾಸರಿ ಗುರಿಗಿಂತಲೂ ಕಡಿಮೆ ದಾಖಲಾಗಿದೆ. ಹಾಗಾಗಿ, ಜೂನ್‌ನಲ್ಲಿ ನಿಗದಿಯಾಗಿರುವ ಆರ್‌ಬಿಐ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯು ಮೂರನೇ ಬಾರಿಗೆ ರೆಪೊ ದರ ಕಡಿತಗೊಳಿಸುವ ಭರವಸೆ ಚಿಗುರೊಡೆದಿದೆ.

ತರಕಾರಿಗಳು, ಮೊಟ್ಟೆ, ದ್ವಿದಳ ಧಾನ್ಯಗಳು, ಮಾಂಸ ಮತ್ತು ಮೀನು, ಏಕದಳ ಧಾನ್ಯಗಳು, ಹಾಲು ಮತ್ತು ಹಾಲಿನ ಉತ್ಪನ್ನಗಳ ಬೆಲೆ ಇಳಿಕೆಯೇ ಇದಕ್ಕೆ ಕಾರಣ ಎಂದು ಮಂಗಳವಾರ ಬಿಡುಗಡೆಯಾಗಿರುವ ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ವರದಿ ತಿಳಿಸಿದೆ.

ಗ್ರಾಹಕ ಬೆಲೆ ಸೂಚ್ಯಂಕ ಆಧರಿತ ಹಣದುಬ್ಬರವು ಫೆಬ್ರುವರಿಯಲ್ಲಿ ಶೇ 3.61ರಷ್ಟು ದಾಖಲಾಗಿತ್ತು. ಕಳೆದ ವರ್ಷದ ಮಾರ್ಚ್‌ನಲ್ಲಿ ಶೇ 4.85ರಷ್ಟಿತ್ತು.

ಆಹಾರ ಪದಾರ್ಥಗಳ ಬೆಲೆಯಲ್ಲಿ ಗಣನೀಯ ಇಳಿಕೆಯಾಗಿದ್ದು, ಗ್ರಾಹಕರು ನಿಟ್ಟುಸಿರು ಬಿಡುವಂತಾಗಿದೆ. ಫೆಬ್ರುವರಿಯಲ್ಲಿ ಶೇ 3.75ರಷ್ಟಿದ್ದ ಆಹಾರ ಹಣದುಬ್ಬರವು, ಮಾರ್ಚ್‌ನಲ್ಲಿ ಶೇ 2.69ಕ್ಕೆ ತಗ್ಗಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಚಿಲ್ಲರೆ ಹಣದುಬ್ಬರವು ಶೇ 4ರಷ್ಟು ದಾಖಲಾಗಲಿದೆ ಎಂದು ಆರ್‌ಬಿಐ ಅಂದಾಜಿಸಿದೆ.

‘ಎರಡು ಎಂಪಿಸಿ ಸಭೆಗಳಲ್ಲಿ ರೆಪೊ ದರವನ್ನು ಒಟ್ಟು ಶೇ 0.50ರಷ್ಟು ಕಡಿತಗೊಳಿಸಲಾಗಿದೆ. ಮುಂದಿನ ಮೂರು ಸಭೆಗಳಲ್ಲಿ ಶೇ 0.50ರಷ್ಟು ಬಡ್ಡಿದರ ಕಡಿತಗೊಳಿಸುವ ಸಾಧ್ಯತೆಯಿದೆ. 2024–25ನೇ ಆರ್ಥಿಕ ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ಕಡಿಮೆಯಾದರೂ ಬಡ್ಡಿದರ ಕಡಿತಗೊಳಿಸುವ ಸಾಧ್ಯತೆಯಿದೆ’ ಎಂದು ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಮೊಟ್ಟೆ ಶೇ 3.16, ತರಕಾರಿಗಳು ಶೇ 7.04, ದ್ವಿದಳ ಧಾನ್ಯಗಳು ಶೇ 2.73 ಮತ್ತು ಮಸಾಲೆ ಪದಾರ್ಥಗಳ ಬೆಲೆ ಶೇ 4.92ರಷ್ಟು ಇಳಿಕೆಯಾಗಿದೆ. ಆದರೆ ತೈಲ ಮತ್ತು ಕೊಬ್ಬಿನ ಪದಾರ್ಥಗಳ ಬೆಲೆಯು ಶೇ 17.7 ಮತ್ತು ಹಣ್ಣುಗಳ ಬೆಲೆ ಶೇ 16.27ರಷ್ಟು ಹೆಚ್ಚಳವಾಗಿದೆ. ಫೆಬ್ರುವರಿಯಲ್ಲಿ ಶೇ 3.32ರಷ್ಟಿದ್ದ ನಗರ ಪ್ರದೇಶದ ಹಣದುಬ್ಬರವು ಶೇ 3.43ಕ್ಕೆ ಏರಿಕೆಯಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಶೇ 3.79 ರಿಂದ ಶೇ 3.25ಕ್ಕೆ ಇಳಿದಿದೆ.

ಕೇರಳದಲ್ಲಿ ಅತಿಹೆಚ್ಚು ಹಣದುಬ್ಬರ (ಶೇ 6.59) ದಾಖಲಾಗಿದ್ದರೆ, ತೆಲಂಗಾಣದಲ್ಲಿ ಅತಿ ಕಡಿಮೆ (ಶೇ 1.06) ದಾಖಲಾಗಿದೆ.

ಸಗಟು ಹಣದುಬ್ಬರ ಶೇ 2.05ಕ್ಕೆ ಇಳಿಕೆ

ನವದೆಹಲಿ (ಪಿಟಿಐ): ಸಗಟು ಬೆಲೆ ಆಧರಿಸಿದ ಹಣದುಬ್ಬರವು ಮಾರ್ಚ್ ತಿಂಗಳಲ್ಲಿ ಆರು ತಿಂಗಳ ಕನಿಷ್ಠ ಮಟ್ಟವಾದ ಶೇ 2.05ರಷ್ಟು ದಾಖಲಾಗಿದೆ ಎಂದು ಕೇಂದ್ರ ಸರ್ಕಾರ ಮಂಗಳವಾರ ತಿಳಿಸಿದೆ.

ಫೆಬ್ರುವರಿಯಲ್ಲಿ ಸಗಟು ಹಣದುಬ್ಬರ (ಡಬ್ಲ್ಯುಪಿಐ) ಶೇ 2.38ರಷ್ಟಿತ್ತು. ಕಳೆದ ವರ್ಷದ ಮಾರ್ಚ್‌ನಲ್ಲಿ ಶೇ 0.26ರಷ್ಟಿತ್ತು.

ಕರ್ನಾಟಕದ ಪ್ರಗತಿಗೆ ಬವೇರಿಯಾ ಸಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃತಕ ಬುದ್ಧಿಮತ್ತೆ, ಕ್ವಾಂಟಮ್ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಸ್ಮಾರ್ಟ್‌ಸಿಟಿ, ಉನ್ನತ ಶಿಕ್ಷಣ ಹಾಗೂ ಸುಸ್ಥಿರ ಕೃಷಿ ಸೇರಿ ಹಲವು ಕ್ಷೇತ್ರಗಳಲ್ಲಿ ಸಹಕಾರಕ್ಕೆ ಜರ್ಮನಿಯ ಬವೇರಿಯಾ ಜತೆ ರಾಜ್ಯ ಸರ್ಕಾರ ಒಪ್ಪಂದ ಮಾಡಿಕೊಂಡಿದೆ.

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಮಾಹಿತಿ–ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಬವೇರಿಯಾ ಚಾನ್ಸಲರಿ ಮುಖ್ಯಸ್ಥ ಪ್ಲೋರಿಯನ್ ಹರ್ಮನ್ ಅವರು ಒಪ್ಪಂದಕ್ಕೆ ಮಂಗಳವಾರ ಸಹಿ ಹಾಕಿದರು.

ಬಳಿಕ ಮಾತನಾಡಿದ ಸಚಿವ ಎಂ.ಬಿ. ಪಾಟೀಲ, ಕೈಗಾರಿಕೆ, ವೈದ್ಯಕೀಯ, ಪರಿಸರ ತಂತ್ರಜ್ಞಾನ, ನಗರ ಮೂಲಸೌಕರ್ಯ, ಕೌಶಲಾಭಿವೃದ್ಧಿ, ನೇಮಕ, ಉದ್ಯಮಶೀಲತೆ ಕ್ಷೇತ್ರಗಳಲ್ಲೂ ಪರಸ್ಪರ ಸಹಕಾರ ನೀಡಲಾಗುತ್ತದೆ. ಈ ಒಪ್ಪಂದ ಐದು ವರ್ಷಗಳವರೆಗೆ ಇರುತ್ತದೆ. ಬವೇರಿಯಾ ಪ್ರಾಂತ್ಯ 2007ರಿಂದಲೂ ರಾಜ್ಯದೊಂದಿಗೆ ವಾಣಿಜ್ಯ ಸಂಬಂಧವನ್ನು ಹೊಂದಿದೆ ಎಂದರು.

ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ರಾಜ್ಯದ ಮಾಹಿತಿ–ಜೈವಿಕ ತಂತ್ರಜ್ಞಾನ ಇಲಾಖೆ ನವೋದ್ಯಮ ಕ್ಷೇತ್ರದಲ್ಲಿ ಜರ್ಮನಿ ಜತೆ ಕೆಲಸ ಮಾಡುತ್ತಿದೆ. ನಿರಂತರ ಸಹಕಾರದ ಫಲವಾಗಿ ಸಂಶೋಧನೆ, ಯೂನಿಕಾರ್ನ್ ಶ್ರೇಣಿಯ ನವೋದ್ಯಮಗಳು ಸಮೃದ್ಧವಾಗಿವೆ. ರಾಜ್ಯದ ಯುವಪೀಳಿಗೆಯು ಜರ್ಮನ್ ಭಾಷೆ ಕಲಿಯಲು ಅವಕಾಶ ಕಲ್ಪಿಸಲಾಗುತ್ತಿದೆ ಎಂದರು.

ಸೆನ್ಸೆಕ್ಸ್ 1,577 ಅಂಶ ಜಿಗಿತ

ಮುಂಬೈ (ಪಿಟಿಐ): ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ಮೇಲೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತವು ಘೋಷಿಸಿರುವ ಸುಂಕ ವಿನಾಯಿತಿಯು, ದೇಶೀಯ ಷೇರುಪೇಟೆಗೆ ಬಲ ನೀಡಿದೆ. ಮಂಗಳವಾರ ನಡೆದ ವಹಿವಾಟಿನಲ್ಲಿ ಸೂಚ್ಯಂಕಗಳು ಶೇ 2ರಷ್ಟು ಏರಿಕೆ ದಾಖಲಿಸಿವೆ.

ಟ್ರಂಪ್ ಆಡಳಿತವು ಆಟೊಮೊಬೈಲ್ ಮೇಲೆ ಶೇ 25ರಷ್ಟು ಸುಂಕ ವಿಧಿಸಿದೆ. ಇದಕ್ಕೆ ವಿನಾಯಿತಿ ಘೋಷಿಸುವ ಸಾಧ್ಯತೆಯಿದೆ. ಮತ್ತೊಂದೆಡೆ ಜಾಗತಿಕ ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದಿದೆ. ಇದರಿಂದ ದೇಶೀಯ ಷೇರುಪೇಟೆಯು ಏರಿಕೆ ದಾಖಲಿಸಲು ನೆರವಾಯಿತು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಎರಡು ವಹಿವಾಟುಗಳಲ್ಲಿ ಸೂಚ್ಯಂಕಗಳು ಏರಿಕೆ ಕಂಡಿದ್ದರಿಂದ, ಹೂಡಿಕೆದಾರರ ಸಂಪತ್ತು ₹18.42 ಲಕ್ಷ ಕೋಟಿ ಏರಿಕೆಯಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,577 ಅಂಶ ಏರಿಕೆ (ಶೇ 2.10) ಕಂಡು 76,734 ಅಂಶಗಳಲ್ಲಿ ಸ್ಥಿರಗೊಂಡಿತು. ಒಂದು ಸಂದರ್ಭದಲ್ಲಿ 1,750 ಅಂಶ ಹೆಚ್ಚಳ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 500 ಅಂಶ ಏರಿಕೆ (ಶೇ 2.19) 23,328 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ಏಪ್ರಿಲ್ 2ರಂದು ಟ್ರಂಪ್ ಪ್ರತಿ ಸುಂಕ ನೀತಿ ಘೋಷಿಸಿದ್ದ ವೇಳೆ ಆಗಿದ್ದ ನಷ್ಟ ಭರಿಸಿಕೊಳ್ಳುವಲ್ಲಿ ಸೂಚ್ಯಂಕಗಳು ಸಫಲವಾಗಿವೆ.

ದಕ್ಷಿಣ ಕೊರಿಯಾ, ಟೋಕಿಯೊ, ಶಾಂಘೈ, ಹಾಂಗ್‌ಕಾಂಗ್ ಮತ್ತು ಯುರೋಪ್ ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದಿದೆ.

ಆಟೊ ಷೇರುಗಳಿಗೆ ಬಲ



ಅಮೆರಿಕವು ಆಟೊಮೊಬೈಲ್ ಮೇಲೆ ಸುಂಕ ವಿನಾಯಿತಿ ಘೋಷಿಸುವ ಸಾಧ್ಯತೆ ಇರುವುದರಿಂದ ಬಿಎಸ್‌ಇ ಆಟೊ ಸೂಚ್ಯಂಕ ಶೇ 3.39ರಷ್ಟು ಏರಿಕೆ ಕಂಡಿದೆ.

ಸಂವರ್ಧನಾ ಮದರ್‌ಸನ್ ಇಂಟರ್‌ನ್ಯಾಷನಲ್ ಶೇ 8.17, ಭಾರತ್ ಫೋರ್ಜ್ ಶೇ 6.86, ಟಾಟಾ ಮೋಟರ್ಸ್ ಶೇ 4.50, ಎಂಆರ್‌ಎಫ್ ಶೇ 4.50, ಮೋಟೊಕಾರ್ಪ್ ಶೇ 4.02, ಐಷರ್ ಮೋಟಾರ್ಸ್ ಶೇ 3.45, ಟಿವಿಎಸ್ ಮೋಟರ್ಸ್ ಶೇ 3.06, ಅಶೋಕ್ ಲೇಲ್ಯಾಂಡ್ ಶೇ 3.04, ಬಜಾಜ್ ಆಟೊ ಶೇ 2.79 ಮತ್ತು ಮಹೀಂದ್ರ ಆ್ಯಂಡ್ ಮಹೀಂದ್ರ ಷೇರಿನ ಮೌಲ್ಯದಲ್ಲಿ ಶೇ 2.42ರಷ್ಟು ಏರಿಕೆಯಾಗಿದೆ.

ಜಾತಿ ದತ್ತಾಂಶಕ್ಕೆ ವಿರೋಧ

‘ಎಲ್ಲರಿಗೂ ತೊಂದರೆ’

ಒಂದನೇ ಪುಟದಿಂದ...

ಪ್ರಸಕ್ತ ವರದಿಯ ‘ಪ್ರವರ್ಗ 3ಬಿ’ನಲ್ಲಿ 67 ಲಕ್ಷ ಜನಸಂಖ್ಯೆ ಎಂದು ತೋರಿಸಲಾಗಿದೆ. ಶೇ 6.6 ರಷ್ಟು ಜನಸಂಖ್ಯೆಯನ್ನು ಕಡಿಮೆ ಮಾಡಲಾಗಿದೆ. ವೀರಶೈವ ಲಿಂಗಾಯತರ ಒಳಪಂಗಡಗಳನ್ನು ಬೇರೆ ಬೇರೆ ಮಾಡಲಾಗಿದೆ. ಕೆಲವರನ್ನು ಬೇರೆ ಪ್ರವರ್ಗಕ್ಕೆ ಸೇರಿಸಲಾಗಿದೆ. ಈ ಕುರಿತು ಸಮುದಾಯದ ಸಚಿವರು ಮುಖ್ಯಮಂತ್ರಿ ಅವರ ಗಮನ ಸೆಳೆಯಲಿದ್ದಾರೆ’ ಎಂದರು.

‘ಜಾತಿ ಜನಗಣತಿಗೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಿ ಸಭೆ ನಡೆಸಿದ್ದೇವೆ. ಸಂಪೂರ್ಣ ದತ್ತಾಂಶ ಹೊರಬಂದರೆ ಒಂದಷ್ಟು ಸ್ಪಷ್ಟತೆ ಸಿಗಬಹುದು. ಆ ಬಳಿಕ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ತೀರ್ಮಾನ ಕೈಗೊಳ್ಳುತ್ತೇವೆ’ ಎಂದರು.



ಜಾತಿ ಗಣತಿ ವರದಿ ಜಾರಿ ಮಾಡಲು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಅವಶ್ಯ. ಅದಕ್ಕಾಗಿ 4 ದಿನಗಳ ವಿಶೇಷ ಅಧಿವೇಶನ ಕರೆಯುವ ಅನಿವಾರ್ಯ ಸರ್ಕಾರಕ್ಕಿದೆ. ಅಲ್ಲಿ ಮುಕ್ತ ಚರ್ಚೆ ಆಗಬೇಕು

ಸತೀಶ ಜಾರಕಿಹೊಳಿ, ಸಚಿವ, ಲೋಕೋಪಯೋಗಿ ಇಲಾಖೆ

ಪ್ರವರ್ಗ 1 ಒಕ್ಕೂಟ ವಿರೋಧ

ಒಂದನೇ ಪುಟದಿಂದ...

‘ಜಯಪ್ರಕಾಶ್ ಹೆಗ್ಡೆ ನೇತೃತ್ವದ ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಕೆನೆ ಪದರ ನೀತಿ ಅಳವಡಿಸುವಂತೆ ಶಿಫಾರಸು ಮಾಡಿದೆ. ಇದರಿಂದ ಪ್ರವರ್ಗ–1 ಎ ಅಡಿಯಲ್ಲಿರುವ ಜಾತಿಯ ಜನರಿಗೆ ಅನ್ಯಾಯವಾಗುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಗ್ಗೆ ಪರಿಶೀಲಿಸಿ, ಅತ್ಯಂತ ಹಿಂದುಳಿದ ಜಾತಿಗಳಿಗೆ ಕೆನೆ ಪದರ ನೀತಿಯನ್ನು ಅಳವಡಿಸದಂತೆ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

‘ಅತ್ಯಂತ ಹಿಂದುಳಿದವರ ಪಟ್ಟಿಯಲ್ಲಿ ಸುಮಾರು ಹತ್ತಕ್ಕೂ ಹೆಚ್ಚು ಮುಸ್ಲಿಂ ಜಾತಿಗಳನ್ನು ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಪರಿಶಿಷ್ಟ ಜಾತಿಯ ಸಮುದಾಯದವರನ್ನು ಸೇರಿಸಲಾಗಿದೆ. ಇವರನ್ನು ಹಿಂದುಳಿದವರ ಪಟ್ಟಿಯಿಂದ ತೆಗೆದು ಹಾಕುವಂತೆ ಆಯೋಗಕ್ಕೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ’ ಎಂದು ದೂರಿದರು.

‘ಒಕ್ಕಲಿಗರಿಗೆ ಮರಣಶಾಸನ’

ಒಂದನೇ ಪುಟದಿಂದ...

ಹಿಂದೆ ಕ್ಷೀಣ ದನಿಯಲ್ಲಿ ಗಣತಿ ವರದಿ ವಿರೋಧಿಸಿದ್ದವರು ಈಗ ನಾಲಿಗೆ ಬದಲಿಸಿದ್ದಾರೆ. ಸಿದ್ದರಾಮಯ್ಯ ಸೃಷ್ಟಿಸಿದ ಜಾತಿ ಗಣತಿಗೆ ಶಿರಬಾಗಿ ಸಮ್ಮತಿ ನೀಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಜ್ಯ ಸರ್ಕಾರ ಸ್ವೀಕರಿಸಿದ ವರದಿ ದ್ವೇಷದ ಗಣತಿಯಾಗಿದೆ. ವರದಿಯ ಅಂಕಿಅಂಶಗಳನ್ನು ಯಾರೋ ವ್ಯವಸ್ಥಿತವಾಗಿ ಹರಿಬಿಟ್ಟಿದ್ದಾರೆ. ಆ ಪ್ರಕಾರ ಒಕ್ಕಲಿಗ, ವೀರಶೈವ ಲಿಂಗಾಯತ ಹಾಗೂ ಇನ್ನಿತರೆ ಸಮಾಜಗಳ ಸಂಖ್ಯೆಯೂ ಅಚ್ಚರಿ ಮೂಡಿಸಿದೆ. ಮಂಡ್ಯ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ ಸೇರಿ ಹಳೇ ಮೈಸೂರು ಜಿಲ್ಲೆಗಳಲ್ಲಿ ವಾಸಿಸುವ ಒಕ್ಕಲಿಗ ಸಮುದಾಯದ ಸಂಖ್ಯೆ ಎಷ್ಟು ಎಂದು ಪ್ರಶ್ನಿಸಿದ್ದಾರೆ.

ಸರ್ಕಾರ ನಿರ್ದಿಷ್ಟ ಸಮುದಾಯಗಳ ಮೇಲೆ ರಾಜಕೀಯ, ಸಾಮಾಜಿಕವಾಗಿ ಹಗೆತನ ಸಾಧಿಸಲು ಹೊರಟಿದೆ. ವರದಿ ವಿರುದ್ಧ ಹೋರಾಟ ನಡೆಸಲಾಗುವುದು ಎಂದಿದ್ದಾರೆ.

‘ಸರ್ಕಾರ ಕೆಡಹುತ್ತೇವೆ’

ಒಂದನೇ ಪುಟದಿಂದ...

‘ಹೋರಾಟದ ರೂಪುರೇಷೆಗಳ ಕುರಿತು ಏಪ್ರಿಲ್ 17ರ ಬಳಿಕ ತೀರ್ಮಾನಿಸಲಾಗುವುದು’ ಎಂದರು.

‘ಇದು ಕಾಂತರಾಜ ವರದಿಯಲ್ಲ. ಸಿದ್ದರಾಮಯ್ಯ ವರದಿ. ಈ ವರದಿ ಜಾರಿಯಾದರೆ ಸರ್ಕಾರವನ್ನೇ ಕೆಡುಹುತ್ತೇವೆ. ಆ ಶಕ್ತಿ ನಮ್ಮ ಸಮುದಾಯಕ್ಕಿದೆ. ಜನಾಂಗಕ್ಕೆ ಅನ್ಯಾಯವಾದರೆ ಸಂಘದ ಎಲ್ಲ ನಿರ್ದೇಶಕರು ರಾಜೀನಾಮೆ ಕೊಟ್ಟು ಬೀದಿಗೆ ಇಳಿಯುತ್ತೇವೆ’ ಎಂದು ಎಚ್ಚರಿಸಿದರು.

‘ಎಚ್. ಕಾಂತರಾಜ ನೇತೃತ್ವದಲ್ಲಿ ನಡೆದಿರುವ ಜಾತಿ ಜನಗಣತಿ ಅವೈಜ್ಞಾನಿಕವಾಗಿದೆ. ಉಪ ಪಂಗಡಗಳನ್ನೆಲ್ಲ ಕೈಬಿಟ್ಟು ಸಮೀಕ್ಷೆ ನಡೆಸಲಾಗಿದೆ. ವರದಿಯನ್ನು ತಿರಸ್ಕರಿಸಬೇಕು. ಇಲ್ಲದಿದ್ದರೆ, ಅನ್ಯಾಯಕ್ಕೊಳಗಾಗಿರುವ ಎಲ್ಲ ಸಮುದಾಯಗಳನ್ನು ಒಟ್ಟುಗೂಡಿಸಿ ವಿಧಾನಸೌಧಕ್ಕೆ ಮುತ್ತಿಗೆ ಹಾಕುತ್ತೇವೆ. ರಾಜ್ಯವನ್ನೇ ಬಂದ್ ಮಾಡುವ ರೀತಿಯಲ್ಲಿ ಹೋರಾಟ ಮಾಡುತ್ತೇವೆ’ ಎಂದು ತಿಳಿಸಿದರು.

‘ನಮ್ಮ ಸಮುದಾಯದಲ್ಲಿ 117 ಉಪಪಂಗಡಗಳಿವೆ. ಅವುಗಳ ಸಂಖ್ಯೆಯನ್ನು ಕಡಿಮೆಗೊಳಿಸಿ, ನಮ್ಮ ನಡುವೆ ವೈಮನಸ್ಸು ಮೂಡಿಸಲು ಯತ್ನಿಸಲಾಗಿದೆ. ಆಧಾರ್ ಸಂಖ್ಯೆ ಪ್ರಕಾರ ರಾಜ್ಯದಲ್ಲಿ ಅಂದಾಜು ಏಳು ಕೋಟಿ ಜನಸಂಖ್ಯೆ ಇದೆ. ಒಂದು ಕೋಟಿ ಜನ ಸಮೀಕ್ಷೆಯಿಂದ ಹೊರಗುಳಿದಿದ್ದಾರೆ. ಈ ವರದಿಯಲ್ಲಿ ನ್ಯೂನತೆಯಿದೆ’ ಎಂದು ದೂರಿದರು. ‘ಹೋರಾಟಕ್ಕೆ ಎಲ್ಲ ಪಕ್ಷಗಳಲ್ಲಿರುವ ಸಮುದಾಯದ ನಾಯಕರನ್ನು ಆಹ್ವಾನಿಸುತ್ತೇವೆ. ಯಾರು ಬರಲಿ, ಬಿಡಲಿ, ನಮ್ಮ ಹೋರಾಟ ಅಚಲವಾಗಿದೆ. ಈ ವರದಿಯನ್ನು ಜಾರಿಗೊಳಿಸಲು ಬಿಡುವುದಿಲ್ಲ’ ಎಂದರು.

ಸಂಘದಿಂದಲೇ ಗಣತಿಗೆ ಸಿದ್ಧ: ‘ನಾವೇ ಪ್ರತ್ಯೇಕ ಜಾತಿ ಜನಗಣತಿ ಮಾಡಿಸುತ್ತೇವೆ. ಇದಕ್ಕಾಗಿ ತಂತ್ರಾಂಶವನ್ನು ಸಿದ್ಧಪಡಿಸುತ್ತೇವೆ. ಈಗಿನ ವರದಿ ವಿರುದ್ಧದ ಹೋರಾಟಕ್ಕಾಗಿ ಬೆಂಗಳೂರು ಸೇರಿದಂತೆ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಹೋರಾಟಕ್ಕೆ ಕರೆ ನೀಡುತ್ತೇವೆ. ಸಮುದಾಯದ ಮೂವರು ಸ್ವಾಮೀಜಿಗಳ ನೇತೃತ್ವದಲ್ಲಿ ಹೋರಾಟ ನಡೆಯಲಿದೆ’ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಕೋನಪ್ಪರೆಡ್ಡಿ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ರೂಪಾಯಿ ಮೌಲ್ಯ ಏರಿಕೆ



ಮುಂಬೈ (ಪಿಟಿಐ): ಸತತ ಎರಡನೇ ದಿನವಾದ ಮಂಗಳವಾರವೂ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 30 ಪೈಸೆ ಏರಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯ ₹85.80 ಆಗಿದೆ.

ದೇಶೀಯ ಷೇರುಪೇಟೆಯು ಏರಿಕೆಯ ಹಳಿಗೆ ಮರಳಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆಯಾಗಿದೆ. ಚಿಲ್ಲರೆ ಹಣದುಬ್ಬರ ಕೂಡ ಇಳಿದಿದೆ. ಟ್ರಂಪ್ ಆಡಳಿತವು ಭಾರತದ ಮೇಲೆ ವಿಧಿಸಿದ್ದ ಪ್ರತಿ ಸುಂಕವನ್ನು ಜುಲೈ 9ರ ವರೆಗೆ ಮುಂದೂಡಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಮೌಲ್ಯ ಇಳಿಕೆಯಾಗಿದೆ. ಈ ಅಂಶಗಳು ರೂಪಾಯಿ ಬಲಗೊಳ್ಳಲು ನೆರವಾಗಿವೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ವ್ಯಾಪಾರ ಕೊರತೆ ₹1.84 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಮಾರ್ಚ್‌ನಲ್ಲಿ ರಫ್ತಿಗಿಂತಲೂ ಆಮದು ಪ್ರಮಾಣ ಹೆಚ್ಚಿದ್ದು, ₹1.84 ಲಕ್ಷ ಕೋಟಿ ವ್ಯಾಪಾರ ಕೊರತೆಯಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಮಂಗಳವಾರ ತಿಳಿಸಿದೆ.

ಮಾರ್ಚ್‌ನಲ್ಲಿ ಒಟ್ಟು ರಫ್ತು ಮೌಲ್ಯ ₹3.59 ಲಕ್ಷ ಕೋಟಿ ಆಗಿದೆ. ಆಮದು ಮೌಲ್ಯ ₹5.44 ಲಕ್ಷ ಕೋಟಿಯಾಗಿದೆ. ಇದು ನಾಲ್ಕು ತಿಂಗಳ ಗರಿಷ್ಠ ಮಟ್ಟವಾಗಿದೆ.

ರಫ್ತು ಮೌಲ್ಯಕ್ಕಿಂತ ಆಮದು ಮೌಲ್ಯ ಹೆಚ್ಚಿದ್ದರೆ ಈ ಅಂತರವನ್ನು ವ್ಯಾಪಾರ ಕೊರತೆ ಅಂತರ ಎಂದು ಕರೆಯಲಾಗುತ್ತದೆ.

2024–25ನೇ ಆರ್ಥಿಕ ವರ್ಷದಲ್ಲಿ ಒಟ್ಟು ರಫ್ತು ಮೌಲ್ಯ ₹37.51 ಲಕ್ಷ ಕೋಟಿಯಾಗಿದ್ದರೆ, ಆಮದು ಮೌಲ್ಯ ₹61.76 ಲಕ್ಷ ಕೋಟಿಯಾಗಿದೆ. ಒಟ್ಟು ವ್ಯಾಪಾರ ಕೊರತೆಯು ₹24.25 ಲಕ್ಷ ಕೋಟಿ ಆಗಿದೆ.

ಮತ್ತೆ ಗರಿಷ್ಠ ಮಟ್ಟ ದಾಖಲಿಸಿದ ಚಿನ್ನದ ದರ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ಚಿನ್ನದ ಬೆಲೆಯು ಮತ್ತೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದೆ.

10 ಗ್ರಾಂ ಚಿನ್ನದ (ಶೇ 99.9 ಪರಿಶುದ್ಧತೆ) ಬೆಲೆಯು ₹50 ಏರಿಕೆಯಾಗಿದ್ದು, ₹96,450ಕ್ಕೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿದ್ದು, ₹96 ಸಾವಿರ ಆಗಿದೆ. ಬೆಳ್ಳಿ ಬೆಲೆಯೂ ಏರಿಕೆಯಾಗಿದೆ. ಪ್ರತಿ ಕೆ.ಜಿಗೆ ₹2,500 ಹೆಚ್ಚಳವಾಗಿದ್ದು, ₹97,500 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ನ್ಯೂಯಾರ್ಕ್: ಏಪ್ರಿಲ್ 14 ‘ಅಂಬೇಡ್ಕರ್ ದಿನ’ ಘೋಷಣೆ

ನ್ಯೂಯಾರ್ಕ್ (ಪಿಟಿಐ): ನ್ಯೂಯಾರ್ಕ್ ಮೇಯರ್ ಎರಿಕ್ ಆ್ಯಡಮ್ಸ್ ಅವರು ಈ ವರ್ಷದ ಏಪ್ರಿಲ್ 14 ಅನ್ನು ‘ಡಾ.ಬಿ.ಆರ್. ಅಂಬೇಡ್ಕರ್ ದಿನ’ ಎಂಬುದಾಗಿ ಘೋಷಣೆ ಮಾಡಿದ್ದಾರೆ.

ಅಂತರರಾಷ್ಟ್ರೀಯ ವ್ಯವಹಾರಗಳ (ನ್ಯೂಯಾರ್ಕ್ ಮೇಯರ್ ಕಚೇರಿ) ಡೆಪ್ಯುಟಿ ಕಮಿಷನರ್ ದಿಲೀಪ್ ಚೌಹಾನ್ ಅವರು ಈ ಕುರಿತ ಘೋಷಣಾ ಪತ್ರವನ್ನು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ರಾಮದಾಸ್ ಆಠವಲೆ ಅವರಿಗೆ ಹಸ್ತಾಂತರಿಸಿದರು.

‘ಅಂಬೇಡ್ಕರ್ ಅವರು ಭಾರತದ ಆರ್ಥಶಾಸ್ತ್ರಜ್ಞ, ರಾಜಕೀಯ ನಾಯಕ ಮತ್ತು ಸಮಾಜ ಸುಧಾರಕರಾಗಿದ್ದು, ಅವರು ಭಾರತ ಸಂವಿಧಾನದ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿದ್ದರು’ ಎಂದು ಘೋಷಣಾ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ವರ್ಷದಲ್ಲಿ ಒಂದು ದಿನದ ಮಟ್ಟಿಗೆ ಅಥವಾ ಒಂದು ವಾರ ಇಲ್ಲವೇ ಒಂದು ತಿಂಗಳು ಮಟ್ಟಿಗೆ ಈ ರೀತಿಯ ಘೋಷಣೆಗಳನ್ನು ಮಾಡಲಾಗುತ್ತದೆ.


ಡೆನ್ಮಾರ್ಕ್ ಪ್ರಧಾನಿ ಜೊತೆ ಮೋದಿ ಮಾತುಕತೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಡೆನ್ಮಾರ್ಕ್ ಪ್ರಧಾನಿ ಮೆಟೆ ಫ್ರೆಡೆರಿಕ್ಸನ್ ಅವರೊಂದಿಗೆ ಮಂಗಳವಾರ ಮಾತುಕತೆ ನಡೆಸಿದರು.

ಭಾರತ–ಡೆನ್ಮಾರ್ಕ್ ‘ಗ್ರೀನ್ ಸ್ಟ್ರಾಟೆಜಿಕ್’ ಒಪ್ಪಂದವನ್ನು ಬೆಂಬಲಿಸುವ ಬಗ್ಗೆ ಪುನರುಚ್ಚರಿಸಿದ ಉಭಯ ನಾಯಕರು, ಎಲ್ಲ ವಲಯಗಳಲ್ಲಿ ಪರಸ್ಪರ ಸಹಕಾರವನ್ನು ಇನ್ನಷ್ಟು ವೃದ್ಧಿಸುವ ಬಗ್ಗೆ ಮಾತನಾಡಿದರು.

‘ಪ್ರಧಾನಿ ಮೆಟೆ ಅವರೊಂದಿಗೆ ಮಾತುಕತೆ ನಡೆಸಿರುವುದು ಸಂತೋಷ ನೀಡಿದೆ. ಪ್ರಾದೇಶಿಕ ಮತ್ತು ಜಾಗತಿಕ ಬೆಳವಣಿಗೆಗಳ ಬಗ್ಗೆಯೂ ಚರ್ಚೆ ನಡೆಸಿದ್ದೇವೆ’ ಎಂದು ಪ್ರಧಾನಿ ಮೋದಿ ‘ಎಕ್ಸ್’ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ತೆರಿಗೆ ವಿನಾಯಿತಿ ಸೌಲಭ್ಯ ರದ್ದು ಹಾರ್ವರ್ಡ್ ವಿ.ವಿಗೆ ಟ್ರಂಪ್ ಎಚ್ಚರಿಕೆ



ವಾಷಿಂಗ್ಟನ್(ಎಎಫ್‌ಪಿ): ನೀತಿಗಳಲ್ಲಿ ಬದಲಾವಣೆ ಮಾಡಿ ಶ್ವೇತಭವನ ಹೊರಡಿಸಿದ್ದ ಆದೇಶ ತಿರಸ್ಕರಿಸಿರುವ ಪ್ರತಿಷ್ಠಿತ ಹಾರ್ವರ್ಡ್ ವಿಶ್ವವಿದ್ಯಾಲಯಕ್ಕೆ ನೀಡಿರುವ ತೆರಿಗೆ ವಿನಾಯಿತಿ ಸೌಲಭ್ಯ ಹಿಂಪಡೆಯುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಎಚ್ಚರಿಕೆ ನೀಡಿದ್ದಾರೆ.

‘ಶ್ವೇತಭವನದ ಆದೇಶಗಳನ್ನು ಪಾಲಿಸಬೇಕು. ವಿದ್ಯಾರ್ಥಿಗಳು ಮತ್ತು ಬೋಧಕರ ಆಯ್ಕೆ ಸೇರಿ ತನ್ನ ಕಾರ್ಯವೈಖರಿಯನ್ನು ಬದಲಾಯಿಸಿಕೊಳ್ಳಬೇಕು. ಇಲ್ಲದಿದ್ದರೆ, ಹಾರ್ವರ್ಡ್ ವಿ.ವಿಯನ್ನು ಒಂದು ರಾಜಕೀಯ ಪಕ್ಷವೆಂದು ಪರಿಗಣಿಸಿ, ತೆರಿಗೆ ವಿಧಿಸಲಾಗುವುದು’ ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿ ಅವರು ಪೋಸ್ಟ್ ಮಾಡಿದ್ದಾರೆ.

‘ವಿ.ವಿ ತನ್ನ ಸ್ವಾತಂತ್ರ್ಯ ಹಾಗೂ ಸಾಂವಿಧಾನಿಕ ಹಕ್ಕುಗಳಿಗೆ ಸಂಬಂಧಿಸಿ ಯಾವುದೇ ಒತ್ತಡಕ್ಕೆ ಮಣಿಯುವುದಿಲ್ಲ. ಈ ವಿಚಾರವಾಗಿ ಸರ್ಕಾರದ ನಿಲುವುಗಳನ್ನು ವಿರೋಧಿಸುವೆ’ ಎಂದು ವಿ.ವಿ ಅಧ್ಯಕ್ಷ ಅಲನ್ ಗಾರ್ಬರ್ ಅವರು ವಿದ್ಯಾರ್ಥಿಗಳು ಹಾಗೂ ಬೋಧಕ ಸಿಬ್ಬಂದಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಬೋಯಿಂಗ್ ವಿಮಾನ ಸ್ವೀಕರಿಸದಂತೆ ಚೀನಾ ಆದೇಶ

ಬೀಜಿಂಗ್ (ರಾಯಿಟರ್ಸ್): ಚೀನಾದ ಸರಕುಗಳಿಗೆ ಅಮೆರಿಕವು ಶೇ 145 ಸುಂಕ ವಿಧಿಸಿದ ವಿಚಾರ ಮತ್ತೊಂದು ಸುತ್ತಿನ ವ್ಯಾಪಾರ ಸಮರಕ್ಕೆ ವೇದಿಕೆಯಾಗಿದೆ.

‘ಅಮೆರಿಕದ ಮೇಲೆ ಒತ್ತಡ ಹೇರುವ ಭಾಗವಾಗಿ, ಬೋಯಿಂಗ್ ಸಂಸ್ಥೆ ವಿತರಿಸುವ ವಿಮಾನಗಳನ್ನು ಸ್ವೀಕರಿಸದಂತೆ ಚೀನಾವು ತನ್ನ ದೇಶದ ವಿಮಾನಯಾನ ಸಂಸ್ಥೆಗಳಿಗೆ ಆದೇಶಿಸಿದೆ’ ಎಂದು ‘ಬ್ಲೂಮ್‌ಬರ್ಗ್ ನ್ಯೂಸ್’ ವರದಿ ಮಾಡಿದೆ.

ಬೋಯಿಂಗ್ ಸಂಸ್ಥೆಗೆ ಚೀನಾ ದೇಶ ಅತೀ ದೊಡ್ಡ ಮಾರುಕಟ್ಟೆಯಾಗಿದೆ. ಚೀನಾದ ಈ ನಿರ್ಧಾರದಿಂದ ಬೋಯಿಂಗ್‌ನ ಪ್ರತಿಸ್ಪರ್ಧಿ ಕಂಪನಿ ‘ಏರ್‌ಬಸ್’ನ ಷೇರುಗಳು ಮೌಲ್ಯ ಮಂಗಳವಾರ ಶೇಕಡ 2ರಷ್ಟು ಏರಿಕೆ ದಾಖಲಿಸಿತು.

ಜಾಗತಿಕ ವಿಮಾನಯಾನ ಸಂಸ್ಥೆಗಳು ಈಗಾಗಲೇ ದರ ಸಮರದಿಂದ ಸಂಕಷ್ಟಕ್ಕೆ ಸಿಲುಕಿದ್ದು, ಏರ್‌ಲೈನ್ಸ್ ಹಾಗೂ ಪೂರೈಕೆದಾರರ ನಡುವೆ ನಡೆದ ಬಿಲಿಯನ್ ಡಾಲರ್ ಮೊತ್ತದ ಒಪ್ಪಂದಗಳನ್ನು ಮರು ಪರಿಶೀಲಿಸುತ್ತಿದ್ದಾರೆ.

ಚೀನಾದ ಪ್ರಮುಖ ಮೂರು ವಿಮಾನಯಾನ ಸಂಸ್ಥೆಗಳಾದ ‘ಏರ್ ಚೈನಾ’, ‘ಚೈನಾ ಈಸ್ಟರ್ನ್ ಏರ್‌ಲೈನ್ಸ್’, ಹಾಗೂ ‘ಚೈನಾ ಸದರ್ನ್ ಏರ್‌ಲೈನ್ಸ್’ಗಳಿಗೆ 2025ರಿಂದ 2027ರ ಅವಧಿಗೆ ಬೋಯಿಂಗ್ ಸಂಸ್ಥೆಯು ಕ್ರಮವಾಗಿ 45, 53 ಹಾಗೂ 81 ವಿಮಾನಗಳನ್ನು ನೀಡುವ ಕುರಿತು ಒಪ್ಪಂದವಾಗಿದೆ.

‘ವಿಮಾನದ ಬಿಡಿಭಾಗಗಳ ಖರೀದಿ ಸ್ಥಗಿತಕ್ಕೂ ಸರ್ಕಾರ ಸೂಚಿಸಿದೆ. ಈ ನಿರ್ಧಾರದಿಂದ, ನಿರ್ವಹಣಾ ವೆಚ್ಚವು ಏರಿಕೆಯಾಗಲಿದ್ದು, ವೈಮಾನಿಕ ಕ್ಷೇತ್ರದ ಮೇಲೂ ವ್ಯತಿರಿಕ್ತ ಪರಿಣಾಮ ಬೀರಲಿದೆ’ ಎಂದು ಪತ್ರಿಕೆ ವರದಿ ಮಾಡಿದೆ.

ಯತೀಕ್ ಹ್ಯಾಟ್ರಿಕ್ ಸಣ್ಣುವಂಡ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಯತೀಕ್ ಅಯ್ಯಪ್ಪ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಸಣ್ಣುವಂಡ ತಂಡವು, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಮೈದಾನದಲ್ಲಿ ನಡೆಯುತ್ತಿರುವ ‘ಮುದ್ದಂಡ ಕಪ್’ ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಮಂಗಳವಾರ ಚೆರುವಾಳಂಡ ವಿರುದ್ಧ 4–1 ಗೋಲುಗಳ ಅಂತರದಿಂದ ಗೆಲುವು ದಾಖಲಿಸಿತು.

ಮತ್ತೊಂದು ಪಂದ್ಯದಲ್ಲಿ ಅಪ್ಪಚ್ಚು ಅವರ 4 ಗೋಲುಗಳ ನೆರವಿನಿಂದ ಸೋಮೆಯಂಡ ತಂಡವು 5-1 ಅಂತರದಿಂದ ಅಲ್ಲಾರಂಡ ವಿರುದ್ಧ ಜಯ ಗಳಿಸಿತು.

ಕಲಿಯಂಡ 5-0 ರಿಂದ ಓಡಿಯಂಡ ವಿರುದ್ಧ, ಕರವಂಡ 2-1ರಿಂದ ಕರಿನೆರವಂಡ ವಿರುದ್ಧ, ಬಯವಂಡ 3-1 ರಿಂದ ಮುಕ್ಕಾಟಿರ (ಹರಿಹರ) ವಿರುದ್ಧ, ಕಾಯಪಂಡ 2-0ರಿಂದ ಮಾಳೇಟಿರ (ಕುಕ್ಲೂರು) ವಿರುದ್ಧ, ಮೇಕೇರಿರ 1-0ಯಿಂದ ಬಲ್ಲಚಂಡ ವಿರುದ್ಧ, ಅಂಜಪರವಂಡ 5-0ಯಿಂದ ಅಯ್ಯನೆರವಂಡ ವಿರುದ್ಧ ಗೆಲುವು ಪಡೆಯಿತು.

ಟೈಬ್ರೇಕರ್ ಹಣಾಹಣಿಯಲ್ಲಿ ನಂಬುಡಮಾಡ 4-3ರಿಂದ ಚೊಟ್ಟೆಯಂಡಮಾಡ ವಿರುದ್ಧ ಗೆಲುವು ಸಾಧಿಸಿತು.

ಸವಾಲು ಮುನ್ನಡೆಸಲಿರುವ ಸಿಂಧು, ಲಕ್ಷ್ಯ


ಪಿ.ವಿ.ಸಿಂಧು


ಲಕ್ಷ್ಯ ಸೇನ್

ನವದೆಹಲಿ (ಪಿಟಿಐ): ಅನುಭವಿ ಆಟಗಾರ್ತಿ ಪಿ.ವಿ.ಸಿಂಧು ಮತ್ತು ವಿಶ್ವದ 18ನೇ ಕ್ರಮಾಂಕದ ಆಟಗಾರ ಲಕ್ಷ್ಯ ಸೇನ್ ಅವರು ಇದೇ ತಿಂಗಳ 27 ರಿಂದ ಮೇ 4ರವರೆಗೆ ಚೀನಾದ ಷಾಮನ್‌ನಲ್ಲಿ ನಡೆಯಲಿರುವ ಸುದೀರ್‌ಮನ್ ಕಪ್ ಫೈನಲ್ಸ್‌ನಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ ಎಂದು ಭಾರತ ಬ್ಯಾಡ್ಮಿಂಟನ್ ಫೆಡರೇಷನ್ ಮಂಗಳವಾರ ತಿಳಿಸಿದೆ.

ವಿಶ್ವ ರ‍್ಯಾಂಕಿಂಗ್ ಆಧಾರದಲ್ಲಿ ಈ ಪ್ರತಿಷ್ಠಿತ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆದಿರುವ ಭಾರತ ‘ಡಿ’ ಗುಂಪಿನಲ್ಲಿದೆ. ಮಾಜಿ ಚಾಂಪಿಯನ್ ಇಂಡೊನೇಷ್ಯಾ, ಎರಡು ಬಾರಿಯ ರನ್ನರ್ ಅಪ್ ಡೆನ್ಮಾರ್ಕ್ ಮತ್ತು ಇಂಗ್ಲೆಂಡ್ ಇದೇ ಗುಂಪಿನಲ್ಲಿವೆ.

ದೇಶದ ಅಗ್ರಮಾನ್ಯ ಡಬಲ್ಸ್ ಆಟಗಾರರಾದ ಸಾತ್ವಿಕ್ ಸಾಯಿರಾಜ್ ರಣಕಿ ರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು 14 ಸದಸ್ಯರ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಸಾತ್ವಿಕ್ ಗಾಯದಿಂದ ಚೇತರಿಸಿಕೊಂಡಿದ್ದಾರೆ. ಆದರೆ ಅಗ್ರ ಮಹಿಳಾ ಡಬಲ್ಸ್ ಜೋಡಿಯಾದ ಗಾಯತ್ರಿ ಗೋಪಿಚಂದ್ ಮತ್ತು ಟ್ರೀಸಾ ಜೋಳಿ ಗಾಯದ ಸಮಸ್ಯೆಯಿಂದ ಇಲ್ಲಿ ಆಡುತ್ತಿಲ್ಲ. ಅವರ ಗೈರು ಹಾಜರಿಯಲ್ಲಿ ಯುವ ಜೋಡಿ ಪ್ರಿಯಾ ಕೊಂಜೆಂಗ್‌ಬಾಮ್– ಶ್ರುತಿ ಮಿಶ್ರಾ ಕಣಕ್ಕಿಳಿ ತಂಡದಲ್ಲಿ ಅವಕಾಶ ಪಡೆದಿದ್ದಾರೆ. ಮಿಶ್ರ ಡಬಲ್ಸ್‌ನಲ್ಲಿ ಧ್ರುವ್ ಕಪಿಲಾ– ತನಿಶಾ ಕ್ರಾಸ್ಟೊ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.


ರುಕ್ಮಿಣಿ

ಸೆ.5ಕ್ಕೆ 'ಮದರಾಸಿ'

ಕಾಲಿವುಡ್‌ನ ನಟ ಶಿವಕಾರ್ತಿಕೇಯನ್ ಹಾಗೂ ನಟಿ ರುಕ್ಮಿಣಿ ವಸಂತ್ ನಟನೆಯ ಪ್ಯಾನ್ ಇಂಡಿಯಾ ಸಿನಿಮಾ 'ಮದರಾಸಿ' ಸೆ.5ರಂದು ಬಿಡುಗಡೆಯಾಗಲಿದೆ. ಈ ಚಿತ್ರಕ್ಕೆ ಮುರುಗದಾಸ್ ಆ್ಯಕ್ಷನ್ ಕಟ್ ಹೇಳಿದ್ದಾರೆ.


ಖುಷಿ ರವಿ, ಅಕ್ಷಯ್

'ವೆಬ್ ಸರಣಿ ಪರ್ಯಾಯ ಉದ್ಯಮ

'ಅಯ್ಯನ ಮನೆ' ಕಥೆಯೇನು?

ಏ.25ರಿಂದ ಜೀ 5ನಲ್ಲಿ ಈ ವೆಬ್ ಸರಣಿ ಸ್ಟ್ರೀಮ್ ಆಗಲಿದೆ. ರಮೇಶ್ ಇಂದಿರಾ ಇದನ್ನು ಬರೆದು, ನಿರ್ದೇಶಿಸಿದ್ದಾರೆ. ಶೃತಿ ನಾಯ್ಡು ನಿರ್ಮಾಣ ಮಾಡಿದ್ದಾರೆ. ಚಿಕ್ಕಮಗಳೂರಿನ 'ಅಯ್ಯನ ಮನೆ' ಕುಟುಂಬದಲ್ಲಿ ನಡೆಯುವ ಘಟನೆಗಳ ಸುತ್ತ ಸರಣಿಯ ಕಥೆ ಇದೆ. ರಹಸ್ಯ, ನಂಬಿಕೆ, ಆಚರಣೆ ಹಾಗೂ ಕೌಟುಂಬಿಕ ಕಥೆಯುಳ್ಳ 'ಅಯ್ಯನ ಮನೆ' ಥ್ರಿಲ್ಲರ್ ಜಾನರ್‌ನಲ್ಲಿದೆ. ಜಾಜಿ ಎಂಬ ಪಾತ್ರದಲ್ಲಿ ನಟಿ ಖುಷಿ ರವಿ ಮುಖ್ಯಭೂಮಿಕೆಯಲ್ಲಿದ್ದಾರೆ. ಅಕ್ಷಯ್ ನಾಯಕ್, ಮಾನಸಿ ಸುಧೀರ್ ನಟಿಸಿದ್ದಾರೆ.



ಕನ್ನಡದ ವೆಬ್ ಸರಣಿಯ ಜನಪ್ರಿಯತೆ ಹಾಗೂ ಬಜೆಟ್ ಹೆಚ್ಚಾದರೆ ಖಂಡಿತವಾಗಿಯೂ ಚಿತ್ರರಂಗದ ಪ್ರಮುಖ ಕಲಾವಿದರು ಇದರತ್ತ ಮುಖ ಮಾಡುತ್ತಾರೆ. ಮನ್ನಣೆ ದೊರಕುತ್ತದೆ ಎಂದರೆ ಬರುತ್ತಾರೆ. ವೆಬ್ ಸರಣಿಗೆ ಕಥೆಯ ಆಯ್ಕೆ, ಗುಣಮಟ್ಟವೂ ಮುಖ್ಯವಾಗುತ್ತದೆ.

–ರಮೇಶ್ ಇಂದಿರಾ, ನಟ–ನಿರ್ದೇಶಕ

ಅಭಿಲಾಷ್ ಪಿ.ಎಸ್.

ಕನ್ನಡದಲ್ಲಿ ಇಲ್ಲಿಯವರೆಗೆ ಎಷ್ಟು ವೆಬ್ ಸರಣಿಗಳು ಬಂದಿವೆ? ಹೀಗೊಂದು ಪ್ರಶ್ನೆ ಎದುರಿಗಿಟ್ಟರೆ ಲೆಕ್ಕಕ್ಕೆ ಸಿಗುವುದು ಬೆರಳೆಣಿಕೆಯಷ್ಟೇ ಹೆಸರುಗಳು. 'ಏಕಂ' ಎಂಬ ವೆಬ್ ಸರಣಿಯನ್ನು ನಟ ರಕ್ಷಿತ್ ಶೆಟ್ಟಿ ನಿರ್ಮಾಣ ಮಾಡಿದ್ದರು. ಅದನ್ನು ಒಟಿಟಿ ವೇದಿಕೆಗಳು ಖರೀದಿಸದೇ ಇದ್ದಾಗ 'ಎಲ್ಲೆಡೆ ನಿರಾಸೆ. ಅದೇ ನೆಪ. ಅದೇ ಸಬೂಬು!...' ಎಂದು ಸೂಕ್ಷ್ಮವಾಗಿ ತಮ್ಮ ಆಕ್ರೋಶ ಹೊರಹಾಕಿದ್ದರು ರಕ್ಷಿತ್. ಪರಿಸ್ಥಿತಿ ಹೀಗಿರುವಾಗಲೂ ಹೊಸದೊಂದು ವೆಬ್ ಸರಣಿಯನ್ನು ನಟ, ಕಿರುತೆರೆ ನಿರ್ದೇಶಕ ರಮೇಶ್ ಇಂದಿರಾ ನಿರ್ದೇಶಿಸಿ, ಜೀ 5 ಮೂಲಕ ಪ್ರೇಕ್ಷಕರ ಎದುರಿಗೆ ಇಡುತ್ತಿದ್ದಾರೆ. ವೆಬ್ ಸರಣಿಯನ್ನು ಒಂದು ಪರ್ಯಾಯ ಉದ್ಯಮವನ್ನಾಗಿ ರಮೇಶ್ ಇಂದಿರಾ ನೋಡುತ್ತಿದ್ದಾರೆ.

ಈ ಕುರಿತು ಮಾತಿಗಿಳಿದ ಅವರು, 'ವೆಬ್ ಸರಣಿಯನ್ನು ನಿರ್ಮಾಣ ಮಾಡಲು ನಮ್ಮವರಲ್ಲಿ ಹೆಚ್ಚಿನವರು ಪ್ರಯತ್ನ ಮಾಡಲಿಲ್ಲ. ಜೊತೆಗೆ ನಮ್ಮ ಬಗ್ಗೆ ನಮ್ಮವರಿಗೇ ಸ್ವಲ್ಪ ಅನುಮಾನ ಜಾಸ್ತಿ. ಕನ್ನಡ ವೆಬ್ ಸರಣಿ ಕ್ಷೇತ್ರದಲ್ಲಿ ಹೆಜ್ಜೆ ಇಡಲೇಬೇಕು ಎನ್ನುವ ಕಾರಣಕ್ಕೆ ಜೀ 5ನವರು ಒಂದು ಪ್ರಯತ್ನಕ್ಕೆ ಕೈಹಾಕಿದ್ದಾರೆ. ಅವರೇ ನೇರವಾಗಿ ಶೃತಿ ನಾಯ್ಡು ಅವರನ್ನು ಸಂಪರ್ಕಿಸಿ ವೆಬ್ ಸರಣಿ ನಿರ್ಮಾಣದ ಯೋಜನೆ ಇಟ್ಟಿದ್ದರು. ಜನರು ವೆಬ್ ಸರಣಿಗೆ ಆತುಕೊಳ್ಳುವುದಕ್ಕೆ ಥ್ರಿಲ್ಲರ್ ಅಂಶ ಮುಖ್ಯ. ಈ ಜಾನರ್‌ನಲ್ಲೇ ಕಥೆಯಿರಬೇಕು ಎಂದು ಕೇಳಿದ್ದರು. ಇದರ ಆಧಾರದ ಮೇಲೆ ಕಥೆ ನಿರೂಪಿಸಿದ್ದೆವು. ಇದೊಂದು ಮಿನಿ ವೆಬ್ ಸರಣಿ. ಕಥೆ ಏಳು ಎಪಿಸೋಡ್ ಹೊಂದಿದೆ. ಪ್ರೇಕ್ಷಕರು ಇದನ್ನು ನೋಡಿ ಮೆಚ್ಚಿಕೊಂಡರೆ, ಎರಡನೇ ಆವೃತ್ತಿ ತರುವುದಕ್ಕೂ ಕಥೆಯಲ್ಲಿ ಅವಕಾಶವಿದೆ' ಎಂದರು.

ಬರವಣಿಗೆ ಭಿನ್ನ

'ಧಾರಾವಾಹಿ ಬರವಣಿಗೆಗೂ ವೆಬ್ ಸರಣಿ ಕಥೆ ಬರೆಯುವುದಕ್ಕೂ ಬಹಳ ವ್ಯತ್ಯಾಸವಿದೆ. ಇಲ್ಲಿ ಪ್ರೇಕ್ಷಕರು ಮುಂದಿನ ಎಪಿಸೋಡ್ ನೋಡುವಂತೆ ಕ್ಲೈಮ್ಯಾಕ್ಸ್ ಸೃಷ್ಟಿಸುವುದು ಬಹಳ ಮುಖ್ಯ. ಈ ಕಥೆಯಲ್ಲಿ ನನಗೆ ಈ ಅಂಶಗಳು ತಾನಾಗೇ ಬಂದು ಕುಳಿತುಕೊಂಡವು. ಸಾಮಾನ್ಯವಾಗಿ ಕ್ಲೈಮ್ಯಾಕ್ಸ್ ಬರೆದು ಹಿಂದಕ್ಕೆ ಕಥೆ ಬರೆಯುತ್ತಾರೆ. ಆದರೆ ನನಗೆ ಕಥೆ ಬರೆಯುತ್ತಾ ಎಪಿಸೋಡ್‌ನ ಕ್ಲೈಮಾಕ್ಸ್‌ಗಳು ಸಿಕ್ಕವು. ವೆಬ್ ಸರಣಿ ಬರವಣಿಗೆಯಲ್ಲಿ ತಂತ್ರಗಾರಿಕೆ ಅಗತ್ಯ' ಎನ್ನುತ್ತಾರೆ ರಮೇಶ್ ಇಂದಿರಾ.

ಪರ್ಯಾಯ ಉದ್ಯಮ ಸೃಷ್ಟಿ

'ಕನ್ನಡದಲ್ಲಿ ವೆಬ್ ಸರಣಿಗಳು ಯಶಸ್ಸು ಕಂಡರೆ ಅವು ಪರ್ಯಾಯ ಉದ್ಯಮವನ್ನು ಸೃಷ್ಟಿಸುವ ಸಾಧ್ಯತೆ ಇದೆ' ಎನ್ನುವ ರಮೇಶ್ ಇಂದಿರಾ, 'ಉಳಿದ ಭಾಷೆಗಳಲ್ಲಿ ನಿರಂತರವಾಗಿ ವೆಬ್ ಸರಣಿಗಳ ನಿರ್ಮಾಣ ನಡೆಯುತ್ತಿದೆ. ಆದರೆ ಮೊದಲಿಗೆ ಹೋಲಿಸಿದರೆ ಈ ಪ್ರಮಾಣ ಇದೀಗ ಇಳಿಕೆಯಾಗಿದೆ. ಆರಂಭದಲ್ಲಿ ಪ್ರತಿ ವಾರ ಒಂದು ಹೊಸ ವೆಬ್ ಸರಣಿ ಬಿಡುಗಡೆಯಾಗುತ್ತಿತ್ತು. ಇದೀಗ ಹಿಟ್ ಆದ ವೆಬ್ ಸರಣಿಗಳ ಆವೃತ್ತಿಗಳು ಬರುತ್ತಿವೆ. ಏಕೆಂದರೆ ಇವುಗಳಿಗೆ ಈಗಾಗಲೇ ಆತುಕೊಂಡಿರುವ ಒಂದು ಪ್ರೇಕ್ಷಕ ವರ್ಗವಿದೆ. ಬೇರೆ ವಾಹಿನಿಗಳೂ ಕನ್ನಡದ ವೆಬ್ ಸರಣಿ ಮಾಡಲಿವೆ ಎನ್ನುವ ಸುದ್ದಿ ಇದೆ. ಕನ್ನಡದಲ್ಲಿ ವೆಬ್ ಸರಣಿಗಳು ನಿರಂತರವಾಗಿ ಬರಬೇಕಾದ ಅವಶ್ಯಕತೆ ಬಹಳಷ್ಟಿದೆ. ಶೃತಿ ಅವರು ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಇಟ್ಟಿದ್ದಾರೆ. ಈ ವೆಬ್ ಸರಣಿಗಳನ್ನು ನೋಡಿದರಷ್ಟೇ ಒಟಿಟಿ ವೇದಿಕೆಗಳು ಕನ್ನಡದಲ್ಲಿ ಹೊಸ ಪ್ರಾಜೆಕ್ಟ್‌ಗಳಿಗೆ ಕೈಹಾಕುತ್ತವೆ. ವ್ಯಾಪಾರ ಆಗದಿದ್ದರೆ ಅವರೂ ಬಿಟ್ಟುಬಿಡುತ್ತಾರೆ. ನೋಡಲಿಕ್ಕೆ ಜನ ಇದ್ದಾರೆ ಎಂದು ಅವರಿಗೆ ಅನಿಸಿದರೆ ಹೊಸ ಹೊಸ ವಿಷಯದ ವೆಬ್ ಸರಣಿಗಳು ಬರಬಹುದು' ಎಂದರು.

'ವೆಬ್ ಸರಣಿಗಳ ನಿರ್ಮಾಣ ಮಾಡುವುದು ಎಂದರೆ ಒಂದು ಮಧ್ಯಮ ಬಜೆಟ್‌ನ ಸಿನಿಮಾ ಮಾಡಿದಂತೆ. ವೆಬ್ ಸರಣಿಗಳಲ್ಲಿ ಗುಣಮಟ್ಟ ಮುಖ್ಯ. ಸಿನಿಮಾ ಕ್ಯಾಮೆರಾ ಬಳಸುತ್ತೇವೆ, ವಿಎಫ್‌ಎಕ್ಸ್, ಡಬ್ಬಿಂಗ್ ಕೂಡಾ ಇರುತ್ತದೆ' ಎಂದು ಮಾತಿಗೆ ವಿರಾಮವಿತ್ತರು.

ಕೈಯಲ್ಲಿ ನಾಲ್ಕೈದು ಸಿನಿಮಾ

'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ಬಳಿಕ ರಮೇಶ್ ಇಂದಿರಾ ಅವರ ಸಿನಿಬ್ಯಾಂಕ್ ಹಿಗ್ಗುತ್ತಿದೆ. ಪ್ರಜ್ವಲ್ ದೇವರಾಜ್ ನಟನೆಯ 'ಕರಾವಳಿ', ಡಾರ್ಲಿಂಗ್ ಕೃಷ್ಣ ನಟನೆಯ, ಶಶಾಂಕ್ ನಿರ್ದೇಶನದ 'ಬ್ರ್ಯಾಟ್', ಗಣೇಶ್ ನಟನೆಯ ಹೊಸ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಇನ್ನೆರಡು ಸಿನಿಮಾಗಳು ಮಾತುಕತೆ ಹಂತದಲ್ಲಿವೆ.


ಉಪೇಂದ್ರ

ಹೊರ ರಾಜ್ಯಗಳಲ್ಲಿಯೂ '45' ಚಿತ್ರ ಪ್ರಚಾರ

ದೊಡ್ಡ ಸ್ಟಾರ್‌ಗಳ ಬಹುತೇಕ ಚಿತ್ರಗಳು ದಕ್ಷಿಣ ಭಾರತದ ಎಲ್ಲ ಭಾಷೆಗಳಿಗೂ ಡಬ್ ಆಗಿ ಬಿಡುಗಡೆಯಾಗುತ್ತಿವೆ. ಹೀಗಾಗಿ ಬೇರೆ ಭಾಷೆಯ ಸ್ಟಾರ್ ನಟರು ಕರ್ನಾಟಕಕ್ಕೆ ಬಂದು ತಮ್ಮ ಸಿನಿಮಾ ಪ್ರಚಾರ ಮಾಡುವುದು ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾಗಿದೆ. ತಮಿಳು, ತೆಲುಗು, ಮಲಯಾಳ ಚಿತ್ರೋದ್ಯಮದ ಸ್ಟಾರ್‌ಗಳು ಬೆಂಗಳೂರಿನಲ್ಲಿ ಕಡ್ಡಾಯವಾಗಿ ಪ್ರಚಾರ ನಡೆಸುತ್ತಾರೆ ಎಂಬಂತಾಗಿದೆ. ಇದೀಗ ಕನ್ನಡದ ನಟರು ಕೂಡ ಬೇರೆ ರಾಜ್ಯಗಳಿಗೆ ಹೋಗಿ ಪ್ರಚಾರ ಮಾಡುವ ಪರಿಪಾಟ ಶುರುವಾಗಿದೆ.

'ಮಾರ್ಟಿನ್' ಚಿತ್ರತಂಡ ವಿದೇಶಿ ಮಾಧ್ಯಮದವರನ್ನು ಕರೆಸಿ ಮುಂಬೈನಲ್ಲಿ ಟ್ರೇಲರ್ ಬಿಡುಗಡೆ ಸಮಾರಂಭ ನಡೆಸಿತ್ತು.

ಇದೀಗ ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ ಶೆಟ್ಟಿ ಪ್ರಮುಖ ಪಾತ್ರದಲ್ಲಿರುವ '45' ಚಿತ್ರತಂಡ ಚಿತ್ರದ ಪ್ರಚಾರಕ್ಕಾಗಿ ಹೊರ ರಾಜ್ಯಗಳಿಗೆ ಹಾರಿದೆ. ಮಂಗಳವಾರ ಚಿತ್ರತಂಡ ಮುಂಬೈನಲ್ಲಿ ಸುದ್ದಿಗೋಷ್ಠಿ ನಡೆಸಿತು. ಸಂಜೆ ಹೈದರಾಬಾದ್‌ನಲ್ಲಿ ಪ್ರಚಾರ ಕಾರ್ಯದಲ್ಲಿ ಭಾಗಿಯಾಯಿತು. ಬುಧವಾರ (ಏ.16) ಚೆನ್ನೈ ಮತ್ತು ಕೇರಳದ ಕೊಚ್ಚಿಯಲ್ಲಿ ಸುದ್ದಿಗೋಷ್ಠಿ ನಡೆಸಲಿದೆ.

ಅರ್ಜುನ್ ಜನ್ಯ ಚೊಚ್ಚಲ ನಿರ್ದೇಶನದ ಈ ಚಿತ್ರವನ್ನು ಎಂ.ರಮೇಶ್ ರೆಡ್ಡಿ ಸೂರಜ್ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ನಿರ್ಮಿಸಿದ್ದಾರೆ. ಕೆಲ ದಿನಗಳ ಹಿಂದೆ ಚಿತ್ರದ ಟೀಸರ್ ದಕ್ಷಿಣದ ಎಲ್ಲ ಪ್ರಮುಖ ಭಾಷೆಗಳಲ್ಲೂ ಬಿಡುಗಡೆಯಾಗಿತ್ತು. ಆಗಸ್ಟ್ 15 ರಂದು ಚಿತ್ರ ತೆರೆ ಕಾಣಲಿದ್ದು, ಈಗಿನಿಂದಲೇ ಪ್ರಚಾರ ಪ್ರಾರಂಭಿಸಿದೆ.

'45 ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ಡಬ್ಬಿಂಗ್ ಸೇರಿದಂತೆ ಎಲ್ಲಾ ಕೆಲಸ ಮುಗಿದಿದೆ. ಚಿತ್ರದಲ್ಲಿ ವಿಎಫ್‌ಎಕ್ಸ್ ಕೆಲಸ ತುಂಬಾ ಇದ್ದು, ಕೆನಡಾದಲ್ಲಿ ಕೆಲಸ ನಡೆಯುತ್ತಿದೆ. ಮೇ ತಿಂಗಳ ಅಂತ್ಯದ ವೇಳೆಗೆ ಗ್ರಾಫಿಕ್ ಕೆಲಸ ಮುಗಿಯಲಿದೆ. ಮೊದಲ ನಿರ್ದೇಶನದಲ್ಲೇ ಮಲ್ಟಿಸ್ಟಾರರ್ ಸಿನಿಮಾ ಮಾಡಿದ್ದೇನೆ ಎಂದು ಈಗಲೂ ನಂಬಲಾಗುತ್ತಿಲ್ಲ' ಎಂದಿದ್ದಾರೆ ಜನ್ಯ.


ಸುಪ್ರಿತಾ ರಾಜ್

ಸೆಟ್ಟೇರಿತು 'ಕಾವೇರಿ ತೀರದಲ್ಲಿ'

ಮನುಷ್ಯನ ಬದುಕು ಕೂಡ ಸಮುದ್ರ ತೀರದಂತೆ ಎಂಬ ಕಥೆಯುಳ್ಳ 'ಕಾವೇರಿ ತೀರದಲ್ಲಿ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಆರ್.ಕೆ.ಗಾಂಧಿ ಈ ಚಿತ್ರದ ನಿರ್ದೇಶಕ. ಅವರು ಈ ಹಿಂದೆ ತೆಲುಗಿನಲ್ಲಿ 'ಪ್ರೇಮ ಭಿಕ್ಷ', ಕನ್ನಡದಲ್ಲಿ 'ಮುಗಿಲ ಮಲ್ಲಿಗೆ' ಚಿತ್ರಗಳನ್ನು ನಿರ್ದೇಶಿಸಿದ್ದರು.

'ಜೀವನ ಸಮುದ್ರ ತೀರದಂತೆ. ಅದು ಕೆಲವೊಮ್ಮೆ ಪ್ರಶಾಂತವಾಗಿ ಸಾಗುತ್ತಿದ್ದರೆ, ಮತ್ತೆ ಕೆಲವೊಮ್ಮೆ ಬೋರ್ಗರೆಯುವ ಅಲೆಗಳಂತೆ ಇರುತ್ತದೆ. ಯಾವಾಗ ಪ್ರಶಾಂತವಾಗಿ ಸಾಗುತ್ತದೆ, ಯಾವಾಗ ತನ್ನ ದಿಕ್ಕನ್ನು ಬದಲಿಸಿಕೊಂಡು ಬಿಡುತ್ತದೆ ಎಂಬುದನ್ನು ಯಾರಿಂದಲೂ ಊಹಿಸಲು ಸಾಧ್ಯವಾಗುವುದಿಲ್ಲ. ಅದೇ ಎಳೆಯನ್ನು ಹೊಂದಿರುವ ಚಿತ್ರವಿದು. ಏಪ್ರಿಲ್ 25 ರಿಂದ ಚಿತ್ರೀಕರಣ ಪ್ರಾರಂಭವಾಗಲಿದೆ. ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಹೊಸಪೇಟೆ, ಬಾಗಲಕೋಟೆ ಹಾಗೂ ವಿಜಯಪುರ ಸುತ್ತಮುತ್ತ ಚಿತ್ರೀಕರಣ ನಡೆಸುವ ಯೋಜನೆಯಿದೆ' ಎಂದರು ನಿರ್ದೇಶಕರು.

ಹೊಸ ನಟ ಉದಯ್ ನಾಯಕ. ಈ ಹಿಂದೆ 'ಮಗಳೇ', 'ಅಸುರರು' ಚಿತ್ರಗಳಲ್ಲಿ ನಟಿಸಿದ್ದ ಸುಪ್ರಿತಾ ರಾಜ್ ಈ ಚಿತ್ರದಲ್ಲಿ ನಾಯಕಿ. ಸ್ನೇಹಾಲಯಂ ಕ್ರಿಯೇಷನ್ಸ್ ಲಾಂಛನದಲ್ಲಿ ನವೀನ್ ಕುಮಾರ್ ಗೌಡ, ಗೋಪಾಲ್ ಸ್ವಾಮಿ, ವಸಂತ ನಾಯಕ್ ಬಂಡವಾಳವನ್ನು ಹೂಡುತ್ತಿದ್ದಾರೆ.

ಮಮತಾ, ಹೊಸಪೇಟೆ ರಾಘವೇಂದ್ರ, ಶೋಭರಾಜ್, ಪುಷ್ಪಾ ಗೌಡ ಮುಂತಾದವರು ಚಿತ್ರದಲ್ಲಿದ್ದಾರೆ. ಗಂಧರ್ವ ರಾಯ್ ರಾವುತ ಸಂಗೀತ, ನಾಗೇಂದ್ರ ಕುಮಾರ್ ಎಂ ಛಾಯಾಚಿತ್ರಗ್ರಹಣ, ವಿನಯ್ ಜಿ. ಆಲೂರು ಸಂಕಲನ ಈ ಚಿತ್ರಕ್ಕಿದೆ.

ಗಲಭೆಕೋರರನ್ನು ಶಾಂತಿದೂತರು ಎನ್ನುತ್ತಿರುವ ಮಮತಾ: ಯೋಗಿ ಟೀಕೆ

'ದಂಡ ಪ್ರಯೋಗಿಸಿ, ಮಟ್ಟಹಾಕಿ'

ಹರ್ದೋಯಿ (ಉತ್ತರ ಪ್ರದೇಶ) (ಪಿಟಿಐ): 'ವಕ್ಫ್ ಕಾಯ್ದೆ ವಿಚಾರದಲ್ಲಿ ಪಶ್ಚಿಮ ಬಂಗಾಳ ಹೊತ್ತಿ ಉರಿಯುತ್ತಿದೆ. ಆದರೆ, ಅಲ್ಲಿನ ಮುಖ್ಯಮಂತ್ರಿ ಮೌನವಾಗಿದ್ದಾರೆ. ಅಷ್ಟೇ ಅಲ್ಲದೇ ಗಲಭೆಕೋರರನ್ನು ಶಾಂತಿದೂತರು ಎನ್ನುತ್ತಿದ್ದಾರೆ' ಎಂದು ಮಮತಾ ಬ್ಯಾನರ್ಜಿ ವಿರುದ್ಧ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮಂಗಳವಾರ ವಾಗ್ದಾಳಿ ನಡೆಸಿದ್ದಾರೆ.

ಹರ್ದೋಯಿಯ ಕಾರ್ಯಕ್ರಮ-ವೊಂದರಲ್ಲಿ ಮಾತನಾಡಿದ ಯೋಗಿ ಆದಿತ್ಯನಾಥ ಅವರು, 'ಗಲಭೆಕೋರರನ್ನು ಮಟ್ಟಹಾಕಲು ದಂಡ (ಲಾಠಿ) ಪ್ರಯೋಗವೇ ಸರಿಯಾದ ದಾರಿ. ಇವರು ಬಾಯಿಮಾತಿಗೆ ಬಗ್ಗುವವರಲ್ಲ, ಬಡಿದು ಹೊರಹಾಕಬೇಕು. ಆದರೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಜಾತ್ಯತೀತತೆ ಹೆಸರಿನಲ್ಲಿ ಹಿಂಸಾಚಾರಿಗಳ ಸ್ವೇಚ್ಛಾಚಾರಕ್ಕೆ ಅವಕಾಶ ನೀಡಿದ್ದಾರೆ' ಎಂದು ಆರೋಪಿಸಿದರು.

'2017ಕ್ಕೂ ಮುನ್ನ ಉತ್ತರ ಪ್ರದೇಶದಲ್ಲಿ ಎರಡು-ಮೂರು ದಿನಗಳಿಗೊಮ್ಮೆ ಹಿಂಸಾಚಾರ ನಡೆಯುತ್ತಿತ್ತು. ಇಂಥ ಕೃತ್ಯಗಳಿಗೆ ದಂಡ ಪ್ರಯೋಗವೇ ಮದ್ದು' ಎಂದರು.

ಮುರ್ಶಿದಾಬಾದ್‌ನಲ್ಲಿ ಬಿಗಿ ಭದ್ರತೆ: ಮುರ್ಶಿದಾಬಾದ್‌ನಲ್ಲಿ ಮತ್ತೆ ಹಿಂಸಾಚಾರ ನಡೆಯುವುದನ್ನು ತಡೆಯಲು ಭದ್ರತಾ ಪಡೆಗಳು ತೀವ್ರ ನಿಗಾ ಇಟ್ಟಿವೆ. ಬಿಎಸ್‌ಎಫ್, ಸಿಆರ್‌ಪಿಎಫ್, ಆರ್‌ಎಎಫ್ ಮತ್ತು ರಾಜ್ಯ ಪೊಲೀಸರನ್ನು ಜಾಂಗಿಪುರ, ಧುಲಿಯಾನ್, ಸುತಿ ಮತ್ತು ಶಂಶೇರ್‌ಗಂಜ್ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜಿಸಲಾಗಿದೆ. ಎರಡು ದಿನಗಳಿಂದ ಹಿಂಸಾಚಾರ ನಡೆದ ವರದಿಯಾಗಿಲ್ಲ ಎಂದು ಹಿರಿಯ ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದರು.

'ಹಿಂಸೆಗೆ ಪ್ರಚೋದನೆ ನೀಡುತ್ತಿರುವ ಮಮತಾ'

ಕೊಚ್ಚಿ (ಪಿಟಿಐ): 'ವಕ್ಫ್ ಕಾಯ್ದೆ–2025ರ ವಿರುದ್ಧ ಹೇಳಿಕೆ ನೀಡುವ ಮೂಲಕ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ರಾಜ್ಯದಲ್ಲಿ ಹಿಂಸಾಚಾರಕ್ಕೆ ಪ್ರಚೋದನೆ ನೀಡುತ್ತಿದ್ದಾರೆ' ಎಂದು ಕೇಂದ್ರ ಸಚಿವ ಕಿರಣ್ ರಿಜಿಜು ಆರೋಪಿಸಿದ್ದಾರೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, 'ಸಂಸತ್ತಿನಲ್ಲಿ ಅನುಮೋದನೆ ಪಡೆದ ವಕ್ಫ್ ತಿದ್ದುಪಡಿ ಕಾಯ್ದೆ–2025 ಅನ್ನು ಮಮತಾ ಅವರು ಜಾರಿಗೊಳಿಸುವುದಿಲ್ಲ ಎಂದು ಹೇಳಲು ಹೇಗೆ ಸಾಧ್ಯ' ಎಂದು ಪ್ರಶ್ನಿಸಿದರು.

ವಕ್ಫ್ ಕಾಯ್ದೆಯನ್ನು ಪಶ್ಚಿಮ ಬಂಗಾಳದಲ್ಲಿ ಜಾರಿಗೊಳಿಸುವುದಿಲ್ಲ ಎಂಬ ಮಮತಾ ಬ್ಯಾನರ್ಜಿ ಹೇಳಿಕೆ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಕಾಯ್ದೆ ಜಾರಿ ಮಾಡಲು ಸಾಧ್ಯವಿಲ್ಲ ಎಂದು ಹೇಗೆ ಹೇಳಲು ಸಾಧ್ಯ? ಮಮತಾ ಅವರು ಸಾಂವಿಧಾನಿಕ ಹುದ್ದೆಯಲ್ಲಿ ಕೂತು, ಸಾಂವಿಧಾನಿಕ ಸಂಸ್ಥೆಯೊಂದು ಜಾರಿಗೆ ತಂದ ಕಾಯ್ದೆಯನ್ನು ಜಾರಿ ಮಾಡಲು ಸಾಧ್ಯವಿಲ್ಲ ಎಂದು ಹೇಳಲು ಹೇಗೆ ಸಾಧ್ಯ? ಅವರು ಸಂವಿಧಾನ ಪ್ರಕಾರವಾದ ಕಾನೂನನ್ನು ಪಾಲಿಸುತ್ತಿಲ್ಲ' ಎಂದು ಅವರು ತಿಳಿಸಿದರು.

'ಬಾಂಗ್ಲಾ ಮೂಲಭೂತವಾದಿಗಳ ಕೈವಾಡ'

ನವದೆಹಲಿ (ಪಿಟಿಐ): 'ವಕ್ಫ್ ಕಾಯ್ದೆ ವಿರೋಧಿಸಿ ಪಶ್ಚಿಮ ಬಂಗಾಳದ ಮುರ್ಶಿದಾಬಾದ್‌ನಲ್ಲಿ ನಡೆದ ಪ್ರತಿಭಟನೆ ವೇಳೆ ಉಂಟಾದ ಹಿಂಸಾಚಾರದಲ್ಲಿ ಸ್ಥಳೀಯ ರಾಜಕೀಯ ನಾಯಕರ ಬೆಂಬಲಿತ ಜಮಾತ್-ಉಲ್-ಮುಜಾಹಿದ್ದೀನ್ ಬಾಂಗ್ಲಾದೇಶ (ಜೆಎಂಬಿ) ಮತ್ತು ಅನ್ಸಾರುಲ್ಲಾ ಬಾಂಗ್ಲಾ ಟೀಮ್ (ಎಬಿಟಿ) ಎಂಬ ಬಾಂಗ್ಲಾದೇಶದ ಮೂಲಭೂತವಾದಿಗಳ ಕೈವಾಡವಿದೆ' ಗುಪ್ತಚರ ವರದಿಗಳನ್ನು ಉಲ್ಲೇಖಿಸಿ ಮೂಲಗಳು ತಿಳಿಸಿವೆ.

ವಕ್ಫ್ ಕಾಯ್ದೆ ಪ್ರಶ್ನಿಸಿ ಹೊಸ ಅರ್ಜಿ



ನವದೆಹಲಿ (ಪಿಟಿಐ): ವಕ್ಫ್ (ತಿದ್ದುಪಡಿ) ಕಾಯ್ದೆಯ ಹಲವು ಅಂಶಗಳ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿರುವ ಹೊಸ ಅರ್ಜಿಯನ್ನು ವಿಚಾರಣೆಗೆ ನಿಗದಿ ಮಾಡುವ ಬಗ್ಗೆ ಪರಿಶೀಲಿಸಲು ಸುಪ್ರೀಂ ಕೋರ್ಟ್ ಮಂಗಳವಾರ ಒಪ್ಪಿದೆ.

ಅರ್ಜಿದಾರರಾದ ಹರಿ ಶಂಕರ್ ಜೈನ್ ಮತ್ತು ಮಣಿ ಮುಂಜಾಲ್ ಎನ್ನುವವರ ಪರವಾಗಿ ವಕೀಲ ವಿಷ್ಣು ಶಂಕರ್ ಜೈನ್ ಮಂಡಿಸಿದ ವಾದವನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರು ಇರುವ ವಿಭಾಗೀಯ ಪೀಠವು ಆಲಿಸಿತು.

ಎಐಎಂಐಎಂ ನಾಯಕ ಅಸಾದುದ್ದೀನ್ ಒವೈಸಿ ಹಾಗೂ ಇತರರು ಸಲ್ಲಿಸಿರುವ 10 ಅರ್ಜಿಗಳು ಸಿಜೆಐ ಇರುವ ತ್ರಿಸದಸ್ಯ ಪೀಠದ ಎದುರು ಬುಧವಾರ ವಿಚಾರಣೆಗೆ ಬರಲಿವೆ.

ವಕ್ಫ್ ಕಾಯ್ದೆಯಲ್ಲಿನ ಕೆಲವು ಅಂಶಗಳು ಸಂವಿಧಾನದ 14, 15, 21, 25, 26, 27 ಮತ್ತು 300(ಎ) ವಿಧಿಗಳನ್ನು ಉಲ್ಲಂಘಿಸುತ್ತವೆ ಎಂದು ಹೊಸ ಅರ್ಜಿಯಲ್ಲಿ ದೂರಲಾಗಿದೆ. ಕಾಯ್ದೆಯಲ್ಲಿನ ಅಂಶಗಳು ಮುಸ್ಲಿಂ ಸಮುದಾಯಕ್ಕೆ 'ಅನಗತ್ಯವಾದ ಅನುಕೂಲ ಕಲ್ಪಿಸಿ ಸಮಾಜದಲ್ಲಿ ಅಸಮತೋಲನ ಸೃಷ್ಟಿಸುತ್ತವೆ ಮತ್ತು ಸೌಹಾರ್ದವನ್ನು ಹಾಳು ಮಾಡುತ್ತವೆ' ಎಂದು ಹೇಳಲಾಗಿದೆ.

ಕಾನೂನಿನ ಕಾರಣದಿಂದಾಗಿ ವಕ್ಫ್ ಮಂಡಳಿಗಳು ಅತಿಯಾದ ಅಧಿಕಾರ ಪಡೆದಿವೆ, ಇದರಿಂದಾಗಿ ಸರ್ಕಾರಿ ಹಾಗೂ ಖಾಸಗಿ ಜಮೀನನ್ನು ಅದು ಭಾರಿ ಪ್ರಮಾಣದಲ್ಲಿ ಒತ್ತುವರಿ ಮಾಡಿಕೊಂಡಿವೆ ಎಂದು ದೂರಲಾಗಿದೆ.

ವಕ್ಫ್ ನೋಂದಾಯಿತ ಜಮೀನು 2013ರಲ್ಲಿ 18 ಲಕ್ಷ ಎಕರೆ ಇದ್ದಿದ್ದು 2025ರಲ್ಲಿ 39 ಲಕ್ಷ ಎಕರೆಗೆ ಹೆಚ್ಚಾಗಿದೆ ಎಂದು ಸಂಸತ್ತಿನಲ್ಲಿ ಕೇಂದ್ರ ಗೃಹ ಸಚಿವರು ನೀಡಿದ್ದ ಹೇಳಿಕೆಯನ್ನು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ವಕ್ಫ್ ಕಾಯ್ದೆಯ ಅಂಶಗಳು ಮುಸ್ಲಿಮೇತರರಿಗೆ ಅನ್ವಯ ಆಗಬಾರದು, ವಕ್ಫ್ ಹೆಸರಿನಲ್ಲಿ ನೋಂದಣಿ ಆಗಿರುವ ಗ್ರಾಮ ಪಂಚಾಯಿತಿಯ ಮತ್ತು ಇತರ ಸಾರ್ವಜನಿಕ ಜಮೀನನ್ನು ವಶಪಡಿಸಿಕೊಳ್ಳುವಂತೆ ಕೇಂದ್ರಕ್ಕೆ ಸೂಚಿಸಬೇಕು ಎಂದು ಕೋರಲಾಗಿದೆ.

ಸಂಕ್ಷಿಪ್ತ ಸುದ್ದಿ

ನಕ್ಸಲ್ ಸುಖದೇವ್ ಪೊಲೀಸರಿಗೆ ಶರಣು

ಮಾನಪುರ (ಪಿಟಿಐ): ನಕ್ಸಲ್ ರೂಪೇಶ್ ಮಾಂಡವಿ ಅಲಿಯಾಸ್ ಸುಖದೇವ್ ಛತ್ತೀಸಗಢ ಪೊಲೀಸರಿಗೆ ಮಂಗಳವಾರ ಶರಣಾಗಿದ್ದಾನೆ.

ಈತನ ಸುಳಿವು ನೀಡಿದವರಿಗೆ ₹5 ಲಕ್ಷ ಇನಾಮು ಘೋಷಿಸಲಾಗಿತ್ತು.

2012ರಲ್ಲಿ ನಕ್ಸಲ್ ಚಳವಳಿಗೆ ಸೇರಿದ್ದ ಸುಖದೇವ್, ಕೋಟರಿ ಪ್ರದೇಶ ಸಮಿತಿಯ ಸದಸ್ಯನಾಗಿದ್ದ ಮತ್ತು ರಾಜನಂದಗಾಂವ್-ಕಾಂಕರ್ ಗಡಿ ವಿಭಾಗದ ಸ್ಥಳೀಯ ಸಂಘಟನೆಯ ಸ್ಕ್ವಾಡ್ ಉಪ ಕಮಾಂಡರ್ ಆಗಿದ್ದ ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ಡಿಜಿಟಲ್ ಅರೆಸ್ಟ್ ವಂಚಕರ ಜಾಲ: ನಾಲ್ವರ ಬಂಧನ

ನವದೆಹಲಿ (ಪಿಟಿಐ): ಕೇಂದ್ರೀಯ ತನಿಖಾ ದಳವು (ಸಿಬಿಐ) 12 ಕಡೆಗಳಲ್ಲಿ ಶೋಧ ನಡೆಸಿ 'ಡಿಜಿಟಲ್ ಅರೆಸ್ಟ್' ವಂಚನೆ ನಡೆಸುತ್ತಿದ್ದ ಜಾಲದ ನಾಲ್ಕು ಜನರನ್ನು ಬಂಧಿಸಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದರು.

ಶೋಧ ಕಾರ್ಯಾಚರಣೆಯನ್ನು 'ಆಪರೇಷನ್ ಚಕ್ರ–ವಿ' ಎಂದು ಕರೆದಿರುವ ಅವರು, ಡಿಜಿಟಲ್ ಅರೆಸ್ಟ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಿಬಿಐ ಇತ್ತೀಚೆಗೆ ಉತ್ತರ ಪ್ರದೇಶದ ಸಂಭಲ್ ಮತ್ತು ಮೊರಾದಾಬಾದ್, ಪಶ್ಚಿಮ ಬಂಗಾಳದ ಕೃಷ್ಣಾನಗರ, ಮುಂಬೈ, ಜೈಪುರ ಸೇರಿದಂತೆ 12 ಕಡೆಗಳಲ್ಲಿ ಶೋಧ ನಡೆಸಿತ್ತು. ಈ ಸಂದರ್ಭದಲ್ಲಿ ಡೆಬಿಟ್ ಕಾರ್ಡ್, ಚೆಕ್‌ಬುಕ್, ಡಿಜಿಟಲ್ ಸಾಧನ/ಸಾಕ್ಷ್ಯಗಳನ್ನು ಸ್ವಾಧೀನಕ್ಕೆ ಪಡೆದಿತ್ತು ಎಂದು ತಿಳಿಸಿದರು.

ಬಂಧಿತರು 42 ಕಂತುಗಳ ಮೂಲಕ ₹7.67 ಕೋಟಿ ಸುಲಿಗೆ ಮಾಡಿದ್ದರು. ಆರೋಪಿಗಳು ವಿವಿಧ ತನಿಖಾ ಸಂಸ್ಥೆ ಅಧಿಕಾರಿಗಳ ಸೋಗಿನಲ್ಲಿ ಸಂತ್ರಸ್ತರನ್ನು ಸಂಪರ್ಕಿಸಿ ಮೂರು ತಿಂಗಳು ಡಿಜಿಟಲ್ ಅರೆಸ್ಟ್ ಮಾಡಿದ್ದರು ಎಂದು ಸಿಬಿಐ ಆರೋಪಿಸಿದೆ. ಬಂಧಿತರನ್ನು ಐದು ದಿನ ಪೊಲೀಸ್ ವಶಕ್ಕೆ ನೀಡಲಾಗಿದೆ.

ಹಿಜ್ಬುಲ್ ಮುಖ್ಯಸ್ಥ ಘೋಷಿತ ಅಪರಾಧಿ

ಶ್ರೀನಗರ: ಹಿಜ್ಬುಲ್ ಮುಜಾಹಿದೀನ್ ಸಂಘಟನೆಯ ಮುಖ್ಯಸ್ಥ ಸೈಯದ್ ಸಲಾಹುದ್ದೀನ್ ಘೋಷಿತ ಅಪರಾಧಿ ಎಂದು ಕಾಶ್ಮೀರದ ನ್ಯಾಯಾಲಯವೊಂದು ಹೇಳಿದೆ. 2002ರ ಕೊಲೆ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಈತ ಇನ್ನೊಂದು ತಿಂಗಳಲ್ಲಿ ವಿಚಾರಣೆಗೆ ಹಾಜರಾಗಬೇಕು ಎಂದು ಅದು ಹೇಳಿದೆ.

ಬುದ್ಗಾಂನ ಪ್ರಧಾನ ಸೆಷನ್ಸ್ ನ್ಯಾಯಾಧೀಶ ಓಂ ಪ್ರಕಾಶ್ ಭಗತ್ ಅವರು ಈ ಆದೇಶ ಹೊರಡಿಸಿದ್ದಾರೆ. ಸಲಾಹುದ್ದೀನ್‌ನ ನಿಜವಾದ ಹೆಸರು ಮೊಹಮ್ಮದ್ ಯೂಸುಫ್ ಶಾ. ಈತ ಎರಡು ದಶಕಕ್ಕೂ ಹೆಚ್ಚಿನ ಅವಧಿಯಿಂದ ಬಂಧನದಿಂದ ತಪ್ಪಿಸಿಕೊಳ್ಳುತ್ತಿದ್ದಾನೆ. ಈತ ಈಗ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಇದ್ದಾನೆ ಎಂದು ನಂಬಲಾಗಿದೆ.

ಬಂಧನ ವಾರಂಟ್ ತಲುಪಿಸಲು ಜಮ್ಮು ಮತ್ತು ಕಾಶ್ಮೀರದ ಪೊಲೀಸರಿಗೆ ಆಗದಿದ್ದ ಕಾರಣಕ್ಕೆ ನ್ಯಾಯಾಲಯ ಈ ಕ್ರಮ ಜರುಗಿಸಿದೆ.

ಈತನನ್ನು ಜಾಗತಿಕ ಭಯೋತ್ಪಾದಕ ಎಂದು ಅಮೆರಿಕವು 2017ರಲ್ಲಿ ಘೋಷಿಸಿದೆ. ಈತ ಬುದ್ಗಾಂನ ಒಂದು ಗ್ರಾಮಕ್ಕೆ ಸೇರಿದವ. 1994ರಲ್ಲಿ ಪಾಕ್ ಆಕ್ರಮಿತ ಕಾಶ್ಮೀರಕ್ಕೆ ಸ್ಥಳಾಂತರ ಆದ ನಂತರದಲ್ಲಿ, ಭಯೋತ್ಪಾದನೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾನೆ ಎಂಬ ಆರೋಪ ಇದೆ.

ತಂದೆ–ಮಗನ ಹತ್ಯೆ: ಸಹೋದರರ ಬಂಧನ

ಕೋಲ್ಕತ್ತಾ (ಪಿಟಿಐ): ವಕ್ಫ್ (ತಿದ್ದುಪಡಿ) ಕಾಯ್ದೆ ವಿರೋಧಿಸಿ ಮುರ್ಶಿದಾಬಾದ್ ಜಿಲ್ಲೆಯ ಜಾಫರಾಬಾದ್‌ನಲ್ಲಿ ನಡೆದ ಕೋಮುಗಲಭೆ ವೇಳೆ ತಂದೆ–ಮಗನ ಹತ್ಯೆಗೆ ಸಂಬಂಧಿಸಿ ಸಹೋದರರನ್ನು ಪೊಲೀಸರು ಮಂಗಳವಾರ ಬಂಧಿಸಿದರು.

ಕಾಲೂ ನಾದರ್ ಹಾಗೂ ದಿಲ್ದಾರ್ ನಾದರ್ ಬಂಧಿತರು. ಈ ಸಹೋದರರೂ ಜಾಫರಾಬಾದ್‌ನವರೇ ಆಗಿದ್ದಾರೆ. ಕಾಲೂ ಅವರನ್ನು ಬೀರ್‌ಭೂಮ್ ಜಿಲ್ಲೆಯ ಮುರಾರಾಯ್ ಎಂಬಲ್ಲಿ ಬಂಧಿಸಲಾಗಿದೆ. ದಿಲ್ದಾರ್ ಅವರನ್ನು ಭಾರತ–ಬಾಂಗ್ಲಾ ಗಡಿ ಪ್ರದೇಶದಲ್ಲಿ ಬಂಧಿಸಲಾಗಿದೆ.

'ಹತ್ಯೆ ನಡೆದ ಪ್ರದೇಶದಲ್ಲಿ ಇದ್ದ ಸಿ.ಸಿ.ಟಿ.ವಿ ಕ್ಯಾಮೆರಾದ ದೃಶ್ಯಾವಳಿಗಳನ್ನು ಸಂಗ್ರಹಿಸಿದ್ದೇವೆ. ಈ ಹತ್ಯೆಗೆ ಸಂಬಂಧಿಸಿ ಇನ್ನಿತರರನ್ನು ಗುರುತಿಸಿದ್ದೇವೆ. ಜೊತೆಗೆ ಹತ್ಯೆ ಸಂಬಂಧ ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ ನಡೆದ ಕೋಮುಗಲಭೆಯಲ್ಲಿ ಇಲ್ಲಿಯವರೆಗೆ ಸುಮಾರು 221 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಉದ್ಯೋಗ ವಾಣಿ



ಅಲ್ಪಮೊತ್ತವನ್ನು ರಕ್ಷಿಸಿಕೊಂಡ ಶ್ರೇಯಸ್ ಬಳಗ: ಹಾಲಿ ಚಾಂಪಿಯನ್ ಕೆಕೆಆರ್‌ಗೆ ಮುಖಭಂಗ

ಚಾಹಲ್ ಮೋಡಿ; ಮಾರ್ಕೊ ದಾಳಿ

ಮುಲ್ಲನಪುರ (ಪಿಟಿಐ): ಯಜುವೇಂದ್ರ ಚಾಹಲ್ ಸ್ಪಿನ್ ಮೋಡಿಯಿಂದಾಗಿ ಪಂಜಾಬ್ ಕಿಂಗ್ಸ್ ತಂಡವು ಕೋಲ್ಕತ್ತ ನೈಟ್ ರೈಡರ್ಸ್ ಕೈಯಿಂದ ಜಯವನ್ನು ಅಕ್ಷರಶಃ ಕಸಿದುಕೊಂಡಿತು.

111 ರನ್‌ಗಳ ಅಲ್ಪಮೊತ್ತದ ಗುರಿಯನ್ನು ಕೋಲ್ಕತ್ತ ತಂಡಕ್ಕೆ ನೀಡಿದ್ದ ಶ್ರೇಯಸ್ ಅಯ್ಯರ್ ಬಳಗವು 16 ರನ್‌ಗಳ ರೋಚಕ ಜಯ ಸಾಧಿಸಿತು. ಕೋಲ್ಕತ್ತ ತಂಡವು ಸುಲಭವಾಗಿ ಜಯಿಸುವ ಅವಕಾಶವನ್ನು ಚಾಹಲ್ (4-0-28-4)ಕಿತ್ತುಕೊಂಡರು. ಅವರಿಗೆ ಎಡಗೈ ವೇಗಿ ಮಾರ್ಕೊ ಯಾನ್ಸೆನ್ (3.1-0-17-3) ಉತ್ತಮ ಜೊತೆ ನೀಡಿದರು. ಇದರಿಂದಾಗಿ ಹಾಲಿ ಚಾಂಪಿಯನ್ ಕೋಲ್ಕತ್ತ ತಂಡವು 15.1 ಓವರ್‌ಗಳಲ್ಲಿ 95 ರನ್ ಗಳಿಸಿ ಆಲೌಟ್ ಆಯಿತು.

ಐಪಿಎಲ್ ಇತಿಹಾಸದಲ್ಲಿಯೇ ರಕ್ಷಣೆ ಮಾಡಿಕೊಂಡ ಅಲ್ಪಮೊತ್ತ ಇದಾಗಿದೆ. 2009ರಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಪಂಜಾಬ್ ಕಿಂಗ್ಸ್ ಎದುರು 116 ರನ್‌ಗಳ ಮೊತ್ತವನ್ನು ರಕ್ಷಿಸಿತ್ತು.

ಹೋದ ವರ್ಷದ ಟೂರ್ನಿಯಲ್ಲಿ ಶ್ರೇಯಸ್ ಅಯ್ಯರ್ ಅವರ ನಾಯಕತ್ವದಲ್ಲಿ ಕೋಲ್ಕತ್ತ ತಂಡವು ಚಾಂಪಿಯನ್ ಆಗಿತ್ತು. ಈ ಬಾರಿ ಪಂಜಾಬ್ ಕಿಂಗ್ಸ್ ತಂಡವನ್ನು ಮುನ್ನಡೆಸುತ್ತಿರುವಶ್ರೇಯಸ್ ತಮ್ಮ ನಿಕಟಪೂರ್ವ ತಂಡಕ್ಕೆ ಆಘಾತ ನೀಡಿದರು.

ಮಂಗಳವಾರ ಮಹಾರಾಜ ಯದುವೇಂದ್ರ ಸಿಂಗ್ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಪಂಜಾಬ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಕೋಲ್ಕತ್ತ ವೇಗಿ ಹರ್ಷಿತ್ ರಾಣಾ (25ಕ್ಕೆ3) ಅವರ ದಾಳಿಯ ಮುಂದೆ ಪಂಜಾಬ್ ತಂಡವು 15.3 ಓವರ್‌ಗಳಲ್ಲಿ 111 ರನ್ ಗಳಿಸಿತು.

ಇನಿಂಗ್ಸ್‌ನ ಮೊದಲ 3.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 39 ರನ್ ಗಳಿಸಿದ್ದ ಪಂಜಾಬ್ ತಂಡವು ನಂತರದ 72 ರನ್‌ಗಳು ಸೇರುವಷ್ಟರಲ್ಲಿ 10 ವಿಕೆಟ್‌ಗಳನ್ನೂ ಕಳೆದುಕೊಂಡಿತು. ವರುಣ್ ಚಕ್ರವರ್ತಿ ಮತ್ತು ಸುನಿಲ್ ನಾರಾಯಣ್ ಕೂಡ ತಲಾ ಎರಡು ವಿಕೆಟ್ ಪಡೆದು ಕೈಚಳಕ ತೋರಿಸಿದರು. ಆದರೆ ಇವರೆಲ್ಲರ ಆಟವನ್ನು ಮರೆಮಾಚುವಂತಹ ಮೋಡಿಯನ್ನು ಲೆಗ್‌ಸ್ಪಿನ್ನರ್ ಚಾಹಲ್ ಮಾಡಿದರು.

ಗುರಿ ಬೆನ್ನಟ್ಟಿದ ಕೋಲ್ಕತ್ತ ತಂಡಕ್ಕೆ ಪ್ರಥಮ ಓವರ್‌ನಲ್ಲಿಯೇ ಮಾರ್ಕೊ ಯಾನ್ಸೆನ್ ಆಘಾತ ನೀಡಿದರು. ನಾರಾ ಯಣ್ ಅವರನ್ನು ಕ್ಲೀನ್ ಬೌಲ್ಡ್ ಮಾಡಿದ ಮಾರ್ಕೊ ಸಂಭ್ರಮಿಸಿದರು. ಎರಡನೇ ಓವರ್‌ನಲ್ಲಿ ಬಾರ್ಟ್‌ಲೆಟ್ ಬೌಲಿಂಗ್‌ನಲ್ಲಿ ಕ್ವಿಂಟನ್ ಡಿಕಾಕ್ ಔಟಾದರು.

ಪಿಚ್‌ನಲ್ಲಿ ಸ್ಪಿನ್ನರ್‌ಗಳಿಗೆ ನೆರವು ಸಿಗುತ್ತಿರುವುದನ್ನು ಅರಿತ ಚಾಹಲ್ ತಮ್ಮ ಸಾಮರ್ಥ್ಯ ಪಣಕ್ಕೊಡ್ಡಿದ್ದರು.ಕೋಲ್ಕತ್ತ ನಾಯಕ ಅಜಿಂಕ್ಯ ರಹಾನೆ ಸೇರಿದಂತೆ ನಾಲ್ವರು ಪ್ರಮುಖ ಬ್ಯಾಟರ್‌ಗಳ ಆಟಕ್ಕೆ ತಡೆಯೊಡ್ಡಿದರು. ಆದರೂ ಕೊನೆಯ ಹಂತದಲ್ಲಿ ಆ್ಯಂಡ್ರೆ ರಸೆಲ್ ಪಂದ್ಯಕ್ಕೆ ತಿರುವು ನೀಡುವ ನಿರೀಕ್ಷೆ ಮೂಡಿಸಿದ್ದರು. ಎರಡು ಸಿಕ್ಸರ್ ಬಾರಿಸಿದ್ದ ಅವರು ಕೋಲ್ಕತ್ತ ತಂಡವನ್ನು ಜಯದ ಸನಿಹಕ್ಕೆ ತಂದರು. ಆದರೆ ಮಾರ್ಕೊ ಯಾನ್ಸೆನ್ ಮತ್ತು ಅರ್ಷದೀಪ್ ಸಿಂಗ್ ಸೇರಿಕೊಂಡು ಪಂಜಾಬ್ ಕಿಂಗ್ಸ್ ತಂಡವನ್ನು ಗೆಲುವಿನ ದಡ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಪಂಜಾಬ್ ಕಿಂಗ್ಸ್: 15.3 ಓವರ್‌ಗಳಲ್ಲಿ 111 (ಪ್ರಿಯಾಂಶ್ ಆರ್ಯ 22, ಪ್ರಭಸಿಮ್ರನ್ ಸಿಂಗ್ 30, ನೇಹಲ್ ವಧೇರಾ 10, ಶಶಾಂಕ್ ಸಿಂಗ್ 18, ಝೇವಿಯರ್ ಬಾರ್ಲೆಟ್ 11, ಹರ್ಷಿತ್ ರಾಣಾ 25ಕ್ಕೆ3, ವರುಣ್ ಚಕ್ರವರ್ತಿ 21ಕ್ಕೆ2, ಸುನಿಲ್ ನಾರಾಯಣ್ 14ಕ್ಕೆ2) **ಕೋಲ್ಕತ್ತ ನೈಟ್ ರೈಡರ್ಸ್:** 15.1 ಓವರ್‌ಗಳಲ್ಲಿ 95 (ಅಂಗಕ್ರಿಷ್ ರಘುವಂಶಿ 37, ಆ್ಯಂಡ್ರೆ ರಸೆಲ್ 17, ಮಾರ್ಕೊ ಯಾನ್ಸೆನ್ 17ಕ್ಕೆ3, ಯಜುವೇಂದ್ರ ಚಾಹಲ್ 28ಕ್ಕೆ4) **ಫಲಿತಾಂಶ: ಪಂಜಾಬ್ ಕಿಂಗ್ಸ್** ತಂಡಕ್ಕೆ 16 ರನ್‌ಗಳ ಜಯ. ಪಂದ್ಯ ಶ್ರೇಷ್ಠ: **ಯಜುವೇಂದ್ರ ಚಾಹಲ್**



ಮಾರ್ಕೊ ಯಾನ್ಸೆನ್ ಮತ್ತು ಅರ್ಷದೀಪ್ ಸಿಂಗ್ ಅವರ ಸಂಭ್ರಮ..

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ಗುಜರಾತ್ ಟೈಟನ್ಸ್	6	4	2	8	1.081
ಡೆಲ್ಲಿ ಕ್ಯಾಪಿಟಲ್ಸ್	5	4	1	8	0.889
ರಾಯಲ್ ಚಾಲೆಂಜರ್ಸ್ ಬೆಂಗಳೂರು	6	4	2	8	0.672
ಪಂಜಾಬ್ ಕಿಂಗ್ಸ್	6	4	2	8	0.172
ಲಖನೌ ಸೂಪರ್ ಜೈಂಟ್ಸ್	7	4	3	8	0.086
ಕೋಲ್ಕತ್ತ ನೈಟ್ ರೈಡರ್ಸ್	7	3	4	6	0.547
ಮುಂಬೈ ಇಂಡಿಯನ್ಸ್	6	2	4	4	0.104
ರಾಜಸ್ಥಾನ ರಾಯಲ್ಸ್	6	2	4	4	-0.838
ಸನ್‌ರೈಸರ್ಸ್ ಹೈದರಾಬಾದ್	6	2	4	4	-1.245
ಚೆನ್ನೈ ಸೂಪರ್ ಕಿಂಗ್ಸ್	7	2	5	4	-1.276

ಆರೆಂಜ್ ಕ್ಯಾಪ್
ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 357 ರನ್

ಪರ್ಪಲ್ ಕ್ಯಾಪ್
ನೂರ್ ಅಹಮ್ಮದ್ (ಸಿಎಸ್‌ಕೆ) 12 ವಿಕೆಟ್

ಕರುಣ್, ರಾಹುಲ್ ಮೇಲೆ ಕಣ್ಣು


ರಾಹುಲ್


ಕರುಣ್

ನವದೆಹಲಿ (ಪಿಟಿಐ): ಅಮೋಘ ಲಯದಲ್ಲಿರುವ ಕರ್ನಾಟಕದ ಜೋಡಿ ಕೆ.ಎಲ್. ರಾಹುಲ್ ಮತ್ತು ಕರುಣ್ ನಾಯರ್ ಅವರು ಪ್ರತಿನಿಧಿಸುವ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಬುಧವಾರ ರಾಜಸ್ಥಾನ ರಾಯಲ್ಸ್ ತಂಡದ ಎದುರು ಕಣಕ್ಕಿಳಿಯಲಿದೆ.

ಟೂರ್ನಿಯ ಆರಂಭದ ನಾಲ್ಕು ಪಂದ್ಯಗಳಲ್ಲಿ ಜಯಿಸಿದ್ದ ಅಕ್ಷರ್ ಪಟೇಲ್ ನಾಯಕತ್ವದ ಡೆಲ್ಲಿ ತಂಡವು ಐದನೇ ಹಣಾಹಣಿಯಲ್ಲಿ ಮುಂಬೈ ಇಂಡಿಯನ್ಸ್ ಎದುರು ಮಣಿದಿತ್ತು. ರಾಜಸ್ಥಾನ ತಂಡವು ಸದ್ಯ ಉತ್ತಮ ಲಯದಲ್ಲಿ ಇಲ್ಲ. ಇದುವರೆಗೆ ಆಡಿರುವ ಆರು ಪಂದ್ಯಗಳಲ್ಲಿ ಎರಡರಲ್ಲಿ ಮಾತ್ರ ಜಯಿಸಿದ್ದು, ನಾಲ್ಕ ರಲ್ಲಿ ಸೋತಿದೆ. ಆದ್ದರಿಂದ ಒತ್ತಡದಲ್ಲಿರುವ ಸಂಜು ಸ್ಯಾಮ್ಸನ್ ನೇತೃತ್ವದ ತಂಡವನ್ನು ಸೋಲಿಸುವ ವಿಶ್ವಾಸದಲ್ಲಿ ಡೆಲ್ಲಿ ತಂಡ ಇದೆ.

ಮುಂಬೈ ಎದುರಿನ ಪಂದ್ಯದಲ್ಲಿ ಇಂಪ್ಯಾಕ್ಟ್ ಸಬ್‌ಸ್ಟಿಟ್ಯೂಟ್ ಆಗಿ ಆಡಿದ ಡೆಲ್ಲಿಯ ಕರುಣ್ ನಾಯರ್ ಮಿಂಚಿನ ಅರ್ಧಶತಕ ಬಾರಿಸಿದ್ದರು. ಪ್ರಸ್ತುತ ಟೂರ್ನಿಯಲ್ಲಿ ತಮಗೆ ಸಿಕ್ಕ ಚೊಚ್ಚಲ ಅವಕಾಶದಲ್ಲೇ ಮಿಂಚಿದ್ದರು. ಆ ಪಂದ್ಯದಲ್ಲಿ 206 ರನ್‌ಗಳ ಗುರಿ ಬೆನ್ನಟ್ಟಿದ್ದ ಡೆಲ್ಲಿ ಮೊದಲ ಹತ್ತು ಓವರ್‌ಗಳಲ್ಲಿ 1 ವಿಕೆಟ್‌ಗೆ 119 ರನ್ ಗಳಿಸಿತ್ತು. ಅದರಿಂದಾಗಿ ತಂಡವು ಸುಲಭ ಜಯ ಸಾಧಿಸುವ ನಿರೀಕ್ಷೆ ಮೂಡಿತ್ತು. ಇದೇ ಹಂತದಲ್ಲಿ ಇದ್ದಕ್ಕಿದಂತೆಯೇ ತಂಡವು ನಾಟಕೀಯ ರೀತಿಯಲ್ಲಿ ಕುಸಿದಿತ್ತು. ಇನಿಂಗ್ಸ್‌ನ ನಿರ್ಣಾಯಕ ಓವರ್‌ನಲ್ಲಿ ಮೂರು ಬ್ಯಾಟರ್‌ಗಳು ರನ್‌ಔಟ್ ಆದರು. ಅದರಿಂದಾಗಿ 193 ರನ್‌ಗಳಿಗೆ ತಂಡವು ಆಲೌಟ್ ಆಯಿತು.

ಎರಡು ದಿನಗಳ ಹಿಂದಿನ ಸೋಲು ಮರೆತು ಜಯದತ್ತ ಹೆಜ್ಜೆ ಹಾಕುವ ವಿಶ್ವಾಸದಲ್ಲಿ ತಂಡವಿದೆ.

ಸ್ಪಿನ್ನರ್‌ಗಳಾದ ಕುಲದೀಪ್ ಯಾದವ್ ಮತ್ತು 20 ವರ್ಷ ವಯಸ್ಸಿನ ವಿಪ್ರಜ್ ನಿಗಮ್ ಅವರೇ ಡೆಲ್ಲಿ ಬೌಲಿಂಗ್‌ನ ಶಕ್ತಿಯಾಗಿದ್ದಾರೆ.

ಅಕ್ಷರ್ ಅವರು ತಮ್ಮ ನೈಜ ಲಯಕ್ಕೆ ಮರಳಬೇಕಿದೆ. ಕಳೆದ ಆರು ಪಂದ್ಯಗಳಲ್ಲಿ ಅಕ್ಷರ್ 14 ಓವರ್ ಬೌಲಿಂಗ್ ಮಾಡಿದ್ದಾರೆ. ಒಂದೂ ವಿಕೆಟ್ ಪಡೆದಿಲ್ಲ. ಬ್ಯಾಟಿಂಗ್‌ನಲ್ಲಿ ಆರಂಭಿಕ ಆಟಗಾರ ಜೇಕ್ ಫ್ರೇಸರ್ ಮೆಕ್‌ಗುರ್ಕ್ ಈ ಬಾರಿ ಅಷ್ಟೇನೂ ಅಬ್ಬರಿಸುತ್ತಿಲ್ಲ.ಕೆ.ಎಲ್.ರಾಹುಲ್, ಅಶುತೋಷ್ ಶರ್ಮಾ, ಟ್ರಿಸ್ಟನ್ ಸ್ಟಬ್ಸ್ ಅವರಿಂದಾಗಿ ಮಧ್ಯಮ ಕ್ರಮಾಂಕ ಉತ್ತಮವಾಗಿದೆ.

ಯಶಸ್ವಿ ಜೈಸ್ವಾಲ್ ಈಚೆಗೆ ಆರ್‌ಸಿಬಿ ಎದುರು ಚೆಂದದ ಅರ್ಧಶತಕ ಗಳಿಸಿದ್ದರು. ಅದರಿಂದಾಗಿ ರಾಯಲ್ಸ್ ಬ್ಯಾಟಿಂಗ್ ಪಡೆಗೆ ವಿಶ್ವಾಸ ಹೆಚ್ಚಿದೆ. ರಿಯಾನ್ ಪರಾಗ್, ಸಂಜು, ನಿತೀಶ್ ರಾಣಾ, ಧ್ರುವ್ ಜುರೇಲ್ ಅವರೂ ಮಿಂಚಿದರೆ ತಂಡಕ್ಕೆ ಸೋಲಿನ ಸರಪಳಿ ಕಳಚಿಕೊಳ್ಳಲು ಸಾಧ್ಯವಾಗಬಹುದು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಡ್ರಾ ಪಂದ್ಯದಲ್ಲಿ ಎಜಿಒಆರ್‌ಸಿ

ಬೆಂಗಳೂರು: ಎಜಿಒಆರ್‌ಸಿ ತಂಡ, ಬಿಡಿಎಫ್‌ಎ ಎ ಡಿವಿಷನ್ ಲೀಗ್ ಪಂದ್ಯದಲ್ಲಿ ಮಂಗಳವಾರ ಆರ್‌ಡಬ್ಲ್ಯುಎಫ್ ಎಫ್‌ಸಿ ಜೊತೆ 2-2 ಗೋಲುಗಳಿಂದ ಡ್ರಾ ಮಾಡಿಕೊಂಡಿತು. ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎಜಿಒಆರ್‌ಸಿ ಪರ ಸುದರ್ಶನ್ ವಿ. ಲೋಕೂರು (36ನೇ ನಿ.) ಮತ್ತು ಆಕಾಶ್ ಎ. (42ನೇ ನಿ.) ಗೋಲುಗಳಿಸಿದರು.ಆರ್‌ಡಬ್ಲ್ಯುಎಫ್ ಪರ ಹರೀಶ್ ಪಿ.(30ನೇ ನಿ.) ಮತ್ತು ರಾಜೇಶ್ ಎಸ್. (75ನೇ ನಿ.) ಗೋಲು ಹೊಡೆದರು.

ಪ್ರೇಕ್ಷಕರ ಪುಂಡಾಟ: ಬಿಎಫ್‌ಸಿ ದೂರು

ಬೆಂಗಳೂರು/ಕೋಲ್ಕತ್ತ (ಪಿಟಿಐ): ಕೋಲ್ಕತ್ತದಲ್ಲಿ ಈಚೆಗೆ ನಡೆದ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಫೈನಲ್ ಪಂದ್ಯದಲ್ಲಿ ಗೆದ್ದ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡದ ಅಭಿಮಾನಿಗಳ ಪುಂಡಾಟಿಕೆಯಿಂದಾಗಿ ಬೆಂಗಳೂರು ಎಫ್‌ಸಿ ತಂಡದ ಮಾಲೀಕರು ಮತ್ತು ಬೆಂಬಲಿಗರು ಗಾಯಗೊಂಡಿದ್ದಾರೆ.

ಫೈನಲ್ ಪಂದ್ಯದಲ್ಲಿ ಬಾಗನ್ ತಂಡವು ಬಿಎಫ್‌ಸಿ ಎದುರು ಜಯಿಸಿತ್ತು. ಬಾಗನ್ ತಂಡದ ಅಭಿಮಾನಿಗಳೆನ್ನಲಾದ ಕೆಲವು ಕಿಡಿಗೇಡಿಗಳು ಸುಡುಮದ್ದುಗಳನ್ನು ಬಿಎಫ್‌ಸಿ ಬೆಂಬಲಿಗರ ಸ್ಟ್ಯಾಂಡ್‌ಗೆ ಒಗೆದಿದ್ದಾರೆ. ಘಟನೆಯಲ್ಲಿ ಒಬ್ಬ ಅಭಿಮಾನಿಯ ಕಣ್ಣಿಗೆ ಗಾಯವಾಗಿದೆ.

ಬಿಎಫ್‌ಸಿಯು ಘಟನೆಯನ್ನು ತೀವ್ರವಾಗಿ ಖಂಡಿಸಿದ್ದು, ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಗೆ ದೂರು ನೀಡಿದೆ.

'ಬೆಂಗಳೂರು ಎಫ್‌ಸಿ ಈ ಘಟನೆಯನ್ನು ತೀವ್ರವಾಗಿ ಖಂಡಿಸುತ್ತದೆ. ಪ್ರವಾಸಿ ತಂಡದ ಅಭಿಮಾನಿಗಳ ಮೇಲೆ ಆತಿಥೇಯ ಬೆಂಬಲಿಗರು ನಡೆಸಿರುವ ದಾಳಿಯು ಅಮಾನವೀಯವಾಗಿದೆ. ಸುಡುಮದ್ದುಗಳನ್ನು ಅಭಿಮಾನಿಗಳಿದ್ದ ಗ್ಯಾಲರಿಗೆ ತೂರಿದರು. ಈ ಘಟನೆಯಲ್ಲಿ ಕ್ಲಬ್ ಮಾಲೀಕರಾದ ಪಾರ್ಥ್ ಜಿಂದಾಲ್ ಅವರಿಗೂ ಸುಟ್ಟ ಗಾಯಗಳಾಗಿವೆ' ಎಂದು ತಂಡವು ದೂರಿನಲ್ಲಿ ಉಲ್ಲೇಖಿಸಿದೆ.

'ಈ ಕುರಿತು ನಾವು ಎಐಎಫ್‌ಎಫ್‌ಗೆ ದೂರು ನೀಡಿದ್ದೇವೆ. ಕ್ರೀಡಾಂಗಣಗಳಲ್ಲಿ ಆಟಗಾರರು ಮತ್ತು ಅಭಿಮಾನಿಗಳಿಗೆ ಭದ್ರತೆ ನೀಡಬೇಕು. ಎಐಎಫ್‌ಎಫ್ ಮತ್ತು ಎಫ್‌ಎಸ್‌ಡಿಎಲ್ ಜಂಟಿಯಾಗಿ ಈ ಕುರಿತು ಗಂಭೀರವಾಗಿ ಯೋಚಿಸಿ ಪರಿಹಾರ ಕಂಡುಹಿಡಿಯಬೇಕು. ಅಭಿಮಾನಿಗಳ ಸುರಕ್ಷತೆಗೆ ಕಟ್ಟುನಿಟ್ಟಾದ ರಕ್ಷಣಾ ವ್ಯವಸ್ಥೆ ರೂಪಿಸಬೇಕು' ಎಂದು ತಂಡವು ಆಗ್ರಹಿಸಿದೆ.



ಕೋಲ್ಕತ್ತದಲ್ಲಿ ಈಚೆಗೆ ಐಎಸ್‌ಎಲ್ ಫೈನಲ್ ನಡೆದ ಸಂದರ್ಭದಲ್ಲಿ ಕ್ರೀಡಾಂಗಣದಲ್ಲಿ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ಅಭಿಮಾನಿಗಳು ಹಚ್ಚಿದ ಕಿಚ್ಚು –ಪಿಟಿಐ ಚಿತ್ರ

ಚೆಸ್: ಅಗ್ರಸ್ಥಾನ ಹಂಚಿಕೊಂಡ ಐವರು ಆಟಗಾರರು

ಬೆಂಗಳೂರು: ಮೂರನೇ ಶ್ರೇಯಾಂಕದ ಮಾನ್ಯುಯೆಲ್ ಪೆಟ್ರೋಸಿಯಾನ್ (ಅರ್ಮೇನಿಯಾ) ಸೇರಿದಂತೆ ಐದು ಆಟಗಾರರು, 'ನಮ್ಮ ಬೆಂಗಳೂರು ಇಂಟರ್‌ನ್ಯಾಷನಲ್ ಗ್ರ್ಯಾಂಡ್ ಮಾಸ್ಟರ್ಸ್ ಓಪನ್ ಚೆಸ್ ಟೂರ್ನಿ'ಯ ಏಳನೇ ಸುತ್ತಿನ ನಂತರ ತಲಾ ಆರು ಅಂಕಗಳೊಂದಿಗೆ ಮುನ್ನಡೆ ಹಂಚಿಕೊಂಡಿದ್ದಾರೆ.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ ಮಂಗಳವಾರ14 ಮಂದಿ ಆಟಗಾರರು ತಲಾ ಐದೂವರೆ ಅಂಕಗಳಿಸಿ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ. ಇವರಲ್ಲಿ ಅಗ್ರ ಶ್ರೇಯಾಂಕದ ಪಾ.ಇನಿಯನ್ ಸೇರಿದ್ದಾರೆ. ಪೆಟ್ರೋಸಿಯಾನ್ ಜೊತೆ, ಉಜ್ಬೇಕಿಸ್ತಾನದ ಮರಾತ್ ಝುಮಯೇವ್, ಜಾರ್ಜಿಯಾದ ಲೆವನ್ ಪೆಂಟ್ಸುಲಾಯಿಯ, ಭಾರತದ 13 ವರ್ಷ ವಯಸ್ಸಿನ ಐಎಂ ಇತನ್ ವಾಝ್, ನಿತಿನ್ ಬಾಬು ಅವರು ಮುನ್ನಡೆಯಲ್ಲಿದ್ದಾರೆ.

ಯೂತ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್

ಫೈನಲ್‌ಗೆ ಕರ್ನಾಟಕ ಬಾಲಕಿಯರ ತಂಡ

ಬೆಂಗಳೂರು: ಹಾಲಿ ಚಾಂಪಿಯನ್ ಕರ್ನಾಟಕ ಬಾಲಕಿಯರ ತಂಡವು ಪುದುಚೇರಿಯ ರಾಜೀವ್ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 40ನೇ ಯೂತ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಫೈನಲ್ ತಲುಪಿವೆ.

ಕರ್ನಾಟಕ ತಂಡವು ಫೈನಲ್‌ನಲ್ಲಿ ಮಹಾರಾಷ್ಟ್ರವನ್ನು ಎದುರಿಸಲಿದೆ. ಮೊದಲ ಸೆಮಿಫೈನಲ್‌ನಲ್ಲಿ ಕರ್ನಾಟಕ 74–60 ರಿಂದ ಛತ್ತೀಸಗಢ ತಂಡವನ್ನು ಸೋಲಿಸಿತು. ವಿರಾಮದ ವೇಳೆಗೆ ಕರ್ನಾಟಕ ತಂಡ 33–37 ಅಂಕಗಳಿಂದ ಹಿನ್ನಡೆಯಲ್ಲಿದ್ದರೂ ನಂತರ ಪುಟಿದೆದ್ದಿತು.

ಕರ್ನಾಟಕ ಪರ ಮಹೆಕ್ ಶರ್ಮಾ 20 ಅಂಕಗಳನ್ನು ಗಳಿಸಿದರು. ಅವರಿಗೆ ಅದಿತಿ ಸುಬ್ರಹ್ಮಣಿಯನ್ (17 ಅಂಕ) ಮತ್ತು ಶ್ರಾವಣಿ ಶಿವಣ್ಣ (16 ಅಂಕ) ಬೆಂಬಲ ನೀಡಿದರು. ಛತ್ತೀಸ್‌ಗಢ ಪರ ಅಂತರಾ ರಾವ್ 30 ಅಂಕ ಸಂಪಾದಿಸಿದರು. ಎರಡನೇ ಸೆಮಿಫೈನಲ್‌ನಲ್ಲಿ ಮಹಾರಾಷ್ಟ್ರ ತಂಡ 61–57ರಿಂದ ತಮಿಳುನಾಡು ತಂಡದ ವಿರುದ್ಧ ಜಯಗಳಿಸಿತು.



ಕರ್ನಾಟಕದ ಆಟಗಾರ್ತಿ ಮೆಹಕ್ ಶರ್ಮಾ (ಎಡ)

ಸಂಕ್ಷಿಪ್ತ ಸುದ್ದಿ

'ಐಸಿಸಿ ತಿಂಗಳ ಆಟಗಾರ'ನಾಗಿ ಶ್ರೇಯಸ್

ದುಬೈ (ಪಿಟಿಐ): ಭಾರತ ತಂಡ ಚಾಂಪಿಯನ್ಸ್ ಟ್ರೋಫಿ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ ಮಧ್ಯಮ ಕ್ರಮಾಂಕದ ಬ್ಯಾಟರ್ ಶ್ರೇಯಸ್ ಅಯ್ಯರ್ ಅವರು 'ಐಸಿಸಿ ಮಾರ್ಚ್ ತಿಂಗಳ ಆಟಗಾರ' ಪ್ರಶಸ್ತಿಗೆ ಮಂಗಳವಾರ ಪಾತ್ರರಾಗಿದ್ದಾರೆ.


ಶ್ರೇಯಸ್

30 ವರ್ಷ ವಯಸ್ಸಿನ ಅಯ್ಯರ್ ಅವರು ನ್ಯೂಜಿಲೆಂಡ್‌ನ ಜೇಕಬ್ ಡಫಿ ಮತ್ತು ರಚಿನ್ ರವೀಂದ್ರ ಅವರ ಪೈಪೋಟಿಯನ್ನು ಮೀರಿನಿಂತರು.

ಸತತ ಎರಡನೇ ತಿಂಗಳು ಭಾರತದ ಆಟಗಾರರು ಈ ಗೌರವಕ್ಕೆ ಪಾತ್ರವಾಗಿದೆ. ಫೆಬ್ರುವರಿ ತಿಂಗಳಲ್ಲಿ ಶುಭಮನ್ ಗಿಲ್ ಈ ಗೌರವಕ್ಕೆ ಪಾತ್ರರಾಗಿದ್ದರು.

ವಾಂಖೆಡೆ ಸ್ಟ್ಯಾಂಡ್‌ಗೆ ರೋಹಿತ್, ಅಜಿತ್ ಹೆಸರು

ಮುಂಬೈ (ಪಿಟಿಐ): ಭಾರತ ಟೆಸ್ಟ್ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ, ಮಾಜಿ ನಾಯಕ ಅಜಿತ್ ವಾಡೇಕರ್ ಹಾಗೂ ಬಿಸಿಸಿಐ ಮಾಜಿ ಅಧ್ಯಕ್ಷ ಶರದ್ ಪವಾರ್ ಅವರ ಹೆಸರುಗಳನ್ನು ವಾಂಖೆಡೆ ಕ್ರೀಡಾಂಗಣದ ಸ್ಟ್ಯಾಂಡ್‌ಗಳಿಗೆ ಇಡಲು ನಿರ್ಧರಿಸಲಾಗಿದೆ.

ಮುಂಬೈ ಕ್ರಿಕೆಟ್ ಸಂಸ್ಥೆ (ಎಂಸಿಎ) ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.



ರೋಹಿತ್ ಶರ್ಮಾ ಅವರ ಹೆಸರನ್ನು ಕ್ರೀಡಾಂಗಣದ ದಿವೇಚಾ ಪೆವಿಲಿಯನ್ (ಲೆವೆಲ್ 3) ಸ್ಟ್ಯಾಂಡ್‌ಗೆ ನೀಡಲಾಗುವುದು. ಗ್ರ್ಯಾಂಡ್ ಸ್ಟ್ಯಾಂಡ್‌ಗೆ (ಲೆವೆಲ್ 3) ಪವಾರ್ ಹಾಗೂ ಗ್ರ್ಯಾಂಡ್ ಸ್ಟ್ಯಾಂಡ್‌ಗೆ (ಲೆವೆಲ್ 4) ವಾಡೇಕರ್ ಅವರ ಹೆಸರುಗಳನ್ನು ಇಡಲಾಗುವುದು.

ವಾಡೇಕರ್ ಅವರು 1966–1974ರ ಅವಧಿಯಲ್ಲಿ ಭಾರತ ತಂಡದಲ್ಲಿ 37 ಟೆಸ್ಟ್ ಮತ್ತು 2 ಏಕದಿನ ಪಂದ್ಯಗಳನ್ನು ಆಡಿದ್ದರು. 2018ರ ಆಗಸ್ಟ್‌ನಲ್ಲಿ ಅವರು ನಿಧನರಾದರು. 'ಮುಂಬೈ ಕ್ರಿಕೆಟ್‌ನ ಆಧಾರಸ್ತಂಭದಂತಿರುವ ಈ ಮಹನೀಯರನ್ನು ಗೌರವಿಸುವುದು ನಮ್ಮ ಕರ್ತವ್ಯ. ಭವಿಷ್ಯದ ಪೀಳಿಗೆಗೆ ಇವರು ಪ್ರೇರಣೆಯಾಗುತ್ತಾರೆ' ಎಂದು ಎಂಸಿಎ ಅಧ್ಯಕ್ಷ ಅಜಿಂಕ್ಯ ನಾಯ್ಕ ಹೇಳಿದರು.

ವಿಶ್ವ 10ಕೆ: ರಾಯಭಾರಿ ಆಗಿ ದಲೀಲಾ

ಬೆಂಗಳೂರು: ಟಿಸಿಎಸ್ ವಿಶ್ವ 10ಕೆ ಓಟದ 17ನೇ ಆವೃತ್ತಿಯ ರಾಯಭಾರಿ ಆಗಿ ಅಮೆರಿಕದ 400 ಮೀ. ಹರ್ಡಲ್ಸ್ ಓಟಗಾರ್ತಿ ದಲೀಲಾ ಮುಹಮ್ಮದ್ ಅವರು ಆಯ್ಕೆಯಾಗಿದ್ದಾರೆ.